# ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ಆಳ-ಅಗಲ
ಮಾಧ್ಯಮ ನಿರ್ಬಂಧಕ್ಕೆ ಸರ್ವರೂ ಮುಂದು...
ಯುಸಿಸಿ ಜಾರಿ: ಬಲವಂತದ ಹೇರಿಕೆ ಸಲ್ಲ- ಮಾಯಾವತಿ 8
ಪೊಲೀಸ್ ಭದ್ರತೆಯಲ್ಲಿ ಕಾರ್ಯಾಚರಣೆ
ಚಿನ್ನದ ಬೆಳಕಲ್ಲಿ ಹೊಳೆದ ಪ್ರತಿಭೆಗಳು 5
ದೆಹಲಿ: ದೇವಾಲಯ, ದರ್ಗಾ ತೆರವು 8

ಮಹಾರಾಷ್ಟ್ರದಲ್ಲಿ ಕ್ಷಿಪ್ರ ಬೆಳವಣಿಗೆ: ಚಿಕ್ಕಪ್ಪ ಶರದ್ ಪವಾರ್‌ಗೆ ಕೈಕೊಟ್ಟ ಅಜಿತ್ ಮತ್ತೆ ಡಿಸಿಎಂ

# ಎನ್‌ಸಿಪಿ ವಿಭಜನೆ, ಸರ್ಕಾರಕ್ಕೆ ಬಲ

ಪ್ರಜಾವಾಣಿ ವಾರ್ತೆ

**ಮುಂಬೈ:** ಮಹಾರಾಷ್ಟ್ರದಲ್ಲಿ ಭಾನುವಾರ ನಡೆದ ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಎನ್‌ಸಿಪಿ ನಾಯಕ ಅಜಿತ್ ಪವಾರ್, ರಾಜಕೀಯ ಮಾರ್ಗದರ್ಶಕರೂ ಆಗಿದ್ದ ತಮ್ಮ ಚಿಕ್ಕಪ್ಪ, ಪಕ್ಷದ ಮುಖ್ಯಸ್ಥ ಶರದ್ ಪವಾರ್ ಅವರನ್ನು ತೊರೆದು, ಬೆಂಬಲಿಗ ಶಾಸಕರೊಂದಿಗೆ ಬಿಜೆಪಿ–ಶಿವಸೇನಾ ಮೈತ್ರಿ ಸರ್ಕಾರಕ್ಕೆ ಸೇರ್ಪಡೆಯಾಗಿದ್ದಾರೆ.

ಪ್ರಸ್ತುತ ವಿಧಾನಸಭೆಯ ಅವಧಿಯಲ್ಲಿ ಅಜಿತ್ ಪವಾರ್ ಮೂರನೇ ಬಾರಿಗೆ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದು, ಅವರ ಬೆಂಬಲಿಗ ಶಾಸಕರಲ್ಲಿ ಎಂಟು ಮಂದಿ ಸಚಿವರಾಗಿ ಏಕನಾಥ ಶಿಂದೆ ನೇತೃತ್ವದ ಸರ್ಕಾರ ಸೇರಿದರು.

ಜೂನ್ 30ರಂದು ಒಂದು ವರ್ಷದ ಅಧಿಕಾರಾವಧಿ ಪೂರ್ಣಗೊಳಿಸಿದ್ದ ಶಿಂದೆ ನೇತೃತ್ವದ ಮೈತ್ರಿ ಸರ್ಕಾರವು ಇದರೊಂದಿಗೆ ತನ್ನ ವ್ಯಾಪ್ತಿ ಮತ್ತು ಬಲವನ್ನು ಹಿಗ್ಗಿಸಿಕೊಂಡಿದ್ದು, ಈಗ ಶಿವಸೇನಾ, ಬಿಜೆಪಿ ಮತ್ತು ಎನ್‌ಸಿಪಿ ಮೈತ್ರಿಕೂಟವಾಗಿ ಬದಲಾಗಿದೆ.

ವಿಧಾನಸಭೆ ವಿರೋಧಪಕ್ಷದ ನಾಯಕನ ಸ್ಥಾನಕ್ಕೆ ಶುಕ್ರವಾರವೇ ರಾಜೀನಾಮೆ ಸಲ್ಲಿಸಿದ್ದ ಅಜಿತ್ ಪವಾರ್, ಭಾನುವಾರ ಬೆಳಿಗ್ಗೆ ತಮ್ಮ ಬೆಂಬಲಿಗ ಶಾಸಕರ ಸಭೆ ಕರೆದಿದ್ದರು. ಪಕ್ಷದ 54 ಶಾಸಕರಲ್ಲಿ 40ಕ್ಕೂ ಹೆಚ್ಚು ಶಾಸಕರು ಇದರಲ್ಲಿ ಭಾಗವಹಿಸಿದ್ದರು ಎನ್ನಲಾಗಿದೆ.

ಶರದ್ ಪವಾರ್ ಅವರ ನಿಕಟವರ್ತಿ ಹಾಗೂ ಎನ್‌ಸಿಪಿ ಕಾರ್ಯಾಧ್ಯಕ್ಷ ಪ್ರಫುಲ್ ಪಟೇಲ್ ಅವರೂ ಈ ಸಭೆಯಲ್ಲಿ ಪಾಲ್ಗೊಂಡಿದ್ದು, ಅವರ ಜೊತೆಗೂಡಿಯೇ ಎಲ್ಲರೂ ರಾಜಭವನಕ್ಕೆ ತೆರಳಿದರು.

ಅದೇ ವೇಳೆಗೆ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಜೊತೆಗೂಡಿದ್ದು, ಎಲ್ಲರೂ ಒಟ್ಟುಗೂಡಿಯೇ ರಾಜ್ಯಪಾಲ ರಮೇಶ್ ಬೈಸ್ ಅವರನ್ನು ಭೇಟಿ ಮಾಡಿದರು.

ನಂತರದ ಬೆಳವಣಿಗೆಯಲ್ಲಿ, ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಯಾಗಿ ಹಾಗೂ ಶಾಸಕರಾದ ಛಗನ್ ಭುಜ್‌ಬಲ್, ದಿಲೀಪ್ ವಾಲ್ಸೆ ಪಾಟೀಲ್, ಹಸನ್ ಮುಶ್ರೀಫ್, ಧನಂಜಯ ಮುಂಡೆ, ಧರ್ಮರಾವ್ ಬಾಬಾ ಅತ್ರಂ, ಅದಿತಿ ತತ್ಕರೆ, ಸಂಜಯ್ ಬನ್ಸೋಡೆ ಮತ್ತು ಅನಿಲ್ ಪಾಟೀಲ್ ಅವರು ಸಂಪುಟ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

**ಹಲವರ ವಿರುದ್ಧ ಭ್ರಷ್ಟಾಚಾರ ಆರೋಪ:** ಇವರಲ್ಲಿ ಹಲವರು ಹಾಗೂ ಅವರ ಹತ್ತಿರದ ಸಂಬಂಧಿಕರ ವಿರುದ್ಧ ಭ್ರಷ್ಟಾಚಾರದ ಆರೋಪಗಳಿದ್ದು, ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ ತನಿಖೆಯನ್ನು ಎದುರಿಸುತ್ತಿದ್ದಾರೆ.

**ಮೋದಿ ಗುಣಗಾನ:** ಪಕ್ಷಾಂತರ ಮತ್ತು ಸರ್ಕಾರ ಸೇರಿದ ಹಿಂದೆಯೇ ಅಜಿತ್ ಪವಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಗುಣಗಾನ ಮಾಡಿದ್ದಾರೆ. 'ಮೋದಿ ಭಾರತವನ್ನು ಮುನ್ನಡೆಸುತ್ತಿದ್ದಾರೆ. ಅವರು ವಿದೇಶಗಳಲ್ಲಿಯೂ ಜನಪ್ರಿಯರಾಗಿದ್ದಾರೆ' ಎಂದು ಶ್ಲಾಘಿಸಿದರು.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು, 'ಈ ಬೆಳವಣಿಗೆ ವಿರುದ್ಧ ಸೂಕ್ತ ಪ್ರತಿ ಹೋರಾಟ ನಡೆಸಲಾಗುವುದು' ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಜಿತ್ ಮತ್ತು ಇತರರು ಸರ್ಕಾರವನ್ನು ಸೇರಿರುವುದು ದರೋಡೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎನ್‌ಸಿಪಿಯ ಕೆಲ ಮುಖಂಡರ ನಡೆ ಆಶ್ಚರ್ಯ ಉಂಟುಮಾಡಿದೆಯೇ ಎಂಬ ಪ್ರಶ್ನೆಗೆ, 'ಪಕ್ಷದ ಕೆಲವರ ವಿರುದ್ಧ ಪ್ರಧಾನಿ ಆರೋಪ ಮಾಡಿದ್ದರು. ಈಗ ಆರೋಪಮುಕ್ತಗೊಳಿಸುವ ನಿಟ್ಟಿನಲ್ಲಿ ಮುಖ್ಯವಾದ ಕೆಲಸ ಮಾಡಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ಇನ್ನಷ್ಟು ಸುದ್ದಿಗಳು 9

ಮಹಾರಾಷ್ಟ್ರದ ರಾಜ್ಯಪಾಲ ರಮೇಶ್ ಬೈಸ್ ಅವರು ನೂತನ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರನ್ನು ಅಭಿನಂದಿಸಿದರು. ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಇದ್ದರು —ಪಿಟಿಐ ಚಿತ್ರ

**ಪಕ್ಷದ ಚಿಹ್ನೆಯಡಿಯೇ ಮುಂದಿನ ಚುನಾವಣೆಗೂ ಸ್ಪರ್ಧಿಸುತ್ತೇವೆ. ಈ ಬಗ್ಗೆ ಆತಂಕ ಬೇಡ. ಪರಿಣಾಮಕಾರಿಯಾಗಿ ಎನ್‌ಸಿಪಿ ಮುನ್ನಡೆಸುತ್ತೇವೆ**
**ಅಜಿತ್ ಪವಾರ್**
ಉಪ ಮುಖ್ಯಮಂತ್ರಿ

**ನಮ್ಮ ಮಾವ ಗೂಗ್ಲಿ ಬೌಲರ್ ಆಗಿದ್ದರು. ನಾನು ಐಸಿಸಿ ಅಧ್ಯಕ್ಷನಾಗಿದ್ದೆ. ಕ್ರಿಕೆಟ್ ಆಟ ಆಡದಿದ್ದರೂ ಎಲ್ಲಿ, ಹೇಗೆ ಗೂಗ್ಲಿ ಹಾಕಬೇಕು ಎಂದು ನನಗೆ ಗೊತ್ತಿದೆ**
**ಶರದ್ ಪವಾರ್**
ಎನ್‌ಸಿಪಿ ಮುಖ್ಯಸ್ಥ

## ಕಾಂಗ್ರೆಸ್ ಶಾಸಕರ ಸಭೆ ನಾಳೆ

ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪಕ್ಷದ ಶಾಸಕರ ಸಭೆಯನ್ನು ರಾಜ್ಯ ಕಾಂಗ್ರೆಸ್ ಮಂಗಳವಾರ ಕರೆದಿದೆ. ಮಹಾರಾಷ್ಟ್ರ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳಾಸಾಹೇಬ್ ಥೋರಟ್ ಈ ಸಭೆಯ ನೇತೃತ್ವ ವಹಿಸಲಿದ್ದಾರೆ.

## 'ಎಲ್ಲರೂ ನಮ್ಮೊಂದಿಗಿದ್ದಾರೆ'

'ಪಕ್ಷದ ಎಲ್ಲರೂ ನಮ್ಮೊಂದಿಗೆ ಇದ್ದಾರೆ. ನಮ್ಮ ನಾಯಕರ ಬೆಂಬಲವೂ ಇದೆ. ಕಾಯ್ದು ನೋಡಿ. ಈಗ ಸಂಖ್ಯೆ ಹೇಳುವುದು ಅಷ್ಟು ಮುಖ್ಯವಲ್ಲ' ಎಂದು ಅಜಿತ್ ಪವಾರ್ ಪ್ರತಿಪಾದಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಛಗನ್ ಭುಜ್‌ಬಲ್ ಅವರು, 'ನಾವು ಈ ಸರ್ಕಾರವನ್ನು ಎನ್‌ಸಿಪಿಯಾಗಿಯೇ ಬೆಂಬಲಿಸಿದ್ದೇವೆ. ಪ್ರತ್ಯೇಕವಾಗಿ ಪಕ್ಷ ಸ್ಥಾಪಿಸಿಲ್ಲ' ಎಂದು ಹೇಳಿದರು.

'ಮೋದಿ ಅವರೇ 2024ರಲ್ಲೂ ಪ್ರಧಾನಿ ಆಗುತ್ತಾರೆ ಎಂದು ಅಜಿತ್ ಪವಾರ್ ಹೇಳಿದ್ದಾರೆ. ನಾವು ಈಗ ಸಕಾರಾತ್ಮಕವಾಗಿ ಚಿಂತನೆ ಮಾಡಬೇಕು. ಜನರ ಸಮಸ್ಯೆಗಳನ್ನು ಖಂಡಿತವಾಗಿ ಬಗೆಹರಿಸಬೇಕು. ಅದಕ್ಕಾಗಿ ಸರ್ಕಾರದ ಬೆಂಬಲ ಪಡೆಯಬೇಕು. ನಾವು ಸರ್ಕಾರಕ್ಕೆ ಬೆಂಬಲ ನೀಡಬೇಕು. ಈ ಮೂಲಕ ಜನರ ಸಮಸ್ಯೆ ಬಗೆಹರಿಸಲು ಯತ್ನಿಸುತ್ತಿದ್ದೇವೆ' ಎಂದು ಸಮರ್ಥಿಸಿಕೊಂಡರು.

## ಶಾಸಕರ ವಿರುದ್ಧ ಕ್ರಮ: ಶರದ್

**ಪುಣೆ (ಪಿಟಿಐ):** 'ಪಕ್ಷದ ನಿಯಮಗಳನ್ನು ಉಲ್ಲಂಘಿಸಿ ಏಕನಾಥ ಶಿಂದೆ ನೇತೃತ್ವದ ಸರ್ಕಾರ ಸೇರ್ಪಡೆಯಾಗಿರುವ ಶಾಸಕರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ. ಶಾಸಕರು ಬಿಜೆಪಿ–ಶಿವಸೇನಾ ಸರ್ಕಾರವನ್ನು ಸೇರಿಕೊಂಡಿದ್ದು ಪಕ್ಷದ ನಿರ್ಧಾರವಲ್ಲ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಸ್ಪಷ್ಟನೆ ನೀಡಿದ್ದಾರೆ.

ಅಜಿತ್ ನಡೆಯನ್ನು ಟೀಕಿಸಿರುವ ಅವರು, 'ಭಾನುವಾರದ ಬೆಳವಣಿಗೆಯು ಬೇರೆಯವರಿಗೆ ಹೊಸದಾಗಿ ಕಂಡಿರಬಹುದು. ಆದರೆ, ನನಗೆ ಹೊಸದಲ್ಲ' ಎಂದು ಹೇಳಿದ್ದಾರೆ.

'ಸದ್ಯದ ಬೆಳವಣಿಗೆಗಳ ವಿರುದ್ಧ ಪಕ್ಷವು ಕಾನೂನಾತ್ಮಕ ಹೋರಾಟ ನಡೆಸುವುದಿಲ್ಲ. ಬದಲಾಗಿ, ಪಕ್ಷವನ್ನ ಪುನಃಸ್ಥಾಪಿಸುವ ನಿಟ್ಟಿನಲ್ಲಿ ಸೋಮವಾರದಿಂದಲೇ ಜನರ ಬಳಿ ಹೋಗುತ್ತೇವೆ. ಜನರ ಬೆಂಬಲ ನಮಗೇ ಸಿಗುತ್ತದೆ ಎಂಬ ಭರವಸೆ ಇದೆ' ಎಂದು ಎಂದು ಹೇಳಿದ್ದಾರೆ.

# ವಾಕ್ಸಮರ 'ಗ್ಯಾರಂಟಿ'

## ಇಂದಿನಿಂದ ಅಧಿವೇಶನ: ರಾಜ್ಯಪಾಲರಿಂದ ಭಾಷಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನ ಸೋಮವಾರ (ಜುಲೈ 3) ಆರಂಭವಾಗಲಿದೆ. 10 ದಿನಗಳ ಕಲಾಪ ಆಡಳಿತ ಪಕ್ಷ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ನಡುವೆ ವಾಕ್ಸಮರಕ್ಕೆ ವೇದಿಕೆಯಾಗಲಿದೆ.

ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ನೀಡಿದ್ದ ಐದು 'ಗ್ಯಾರಂಟಿ'ಗಳ ಅನುಷ್ಠಾನದಲ್ಲಿ ಗೊಂದಲ, ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು (ಮತಾಂತರ ನಿಷೇಧ) ಕಾಯ್ದೆ ರದ್ದತಿಗೆ ಮಸೂದೆ ಮಂಡನೆ ಮತ್ತಿತರ ವಿಚಾರಗಳು ಉಭಯ ಸದನಗಳಲ್ಲಿ ಪ್ರತಿಧ್ವನಿಸಲಿವೆ.

ಮಧ್ಯಾಹ್ನ 12 ಗಂಟೆಗೆ ವಿಧಾನ ಸಭೆಯ ಸಭಾಂಗಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಆ ಮೂಲಕ, ನೂತನ ಕಾಂಗ್ರೆಸ್ ಸರ್ಕಾರದ ಮೊದಲ ಅಧಿವೇಶನಕ್ಕೆ ಚಾಲನೆ ಸಿಗಲಿದೆ. ಹೊಸ ಸರ್ಕಾರದ ಮುನ್ನೋಟ, ಅಭಿವೃದ್ಧಿ ಯೋಜನೆಗಳ ಜೊತೆಗೆ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವ ವಾಗ್ದಾನ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗುವ ಸಾಧ್ಯತೆಗಳಿವೆ.

5ನೇ ಪುಟ ನೋಡಿ

## ಮೊದಲ ದಿನ ವಿಪಕ್ಷ ನಾಯಕನಿಲ್ಲ

**ನವದೆಹಲಿ:** ಕರ್ನಾಟಕದ 16ನೇ ವಿಧಾನಸಭೆಯ ಮೊದಲ ಜಂಟಿ ಅಧಿವೇಶನ ಸೋಮವಾರ ಆರಂಭವಾಗುತ್ತಿದ್ದರೂ, ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲು ಬಿಜೆಪಿಗೆ ಭಾನುವಾರವೂ ಸಾಧ್ಯವಾಗಲಿಲ್ಲ. ವಿಪಕ್ಷ ನಾಯಕ ಆಯ್ಕೆ ಸಂಬಂಧ ಶಾಸಕರ ಅಭಿಪ್ರಾಯ ಸಂಗ್ರಹಿಸಲು ಇಬ್ಬರು ವೀಕ್ಷಕರನ್ನು ಕಳುಹಿಸಲು ಬಿಜೆಪಿ ಹೈಕಮಾಂಡ್ ತೀರ್ಮಾನಿಸಿದೆ.

ಮೊದಲ ದಿನದ ಅಧಿವೇಶನಕ್ಕೆ ವಿರೋಧ ಪಕ್ಷದ ನಾಯಕ ಇರುವುದಿಲ್ಲ. ಸೋಮವಾರ ವೀಕ್ಷಕರು ಬೆಂಗಳೂರಿಗೆ ಬರಲಿದ್ದು, ಆ ಬಳಿಕವೇ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

5ನೇ ಪುಟ ನೋಡಿ

# ಟ್ವೀಟ್ ಓದಲು ಮಿತಿ: ಮಸ್ಕ್

**ಸ್ಯಾನ್ ಫ್ರಾನ್ಸಿಸ್ಕೊ (ರಾಯಿಟರ್ಸ್):** ಬಳಕೆದಾರರು ದಿನಕ್ಕೆ ಇಂತಿಷ್ಟೇ ಟ್ವೀಟ್‌ಗಳನ್ನು ನೋಡಬಹುದು ಎಂಬ ಮಿತಿಯನ್ನು ಟ್ವಿಟರ್ ಕಂಪನಿ ವಿಧಿಸಿದೆ.

ತಿಂಗಳ ಹಣ ಪಾವತಿಸಿ ಚಂದಾದಾರಿಕೆ ಪಡೆದಿರುವ ಖಾತೆಗಳು (ವೆರಿಫೈಡ್) ಸದ್ಯ ದಿನಕ್ಕೆ 6 ಸಾವಿರ ಪೋಸ್ಟ್‌ಗಳನ್ನು ಓದಬಹುದು ಎಂದು ಟ್ವಿಟರ್ ಮುಖ್ಯಸ್ಥ ಎಲಾನ್ ಮಸ್ಕ್ ತಿಳಿಸಿದ್ದಾರೆ.

ಚಂದಾದಾರಿಕೆ ಪಡೆಯದೇ ಇರುವ ಖಾತೆಗಳಿಗೆ (ಅನ್‌ವೆರಿಫೈಡ್) ದಿನದ ಮಿತಿಯು 600 ಹಾಗೂ ಹೊಸದಾಗಿ ಟ್ವಿಟರ್ ಖಾತೆ ತೆರೆದು ಚಂದಾದಾರಿಕೆ ಪಡೆಯದೇ ಇರುವವರಿಗೆ 300 ಪೋಸ್ಟ್‌ಗಳ ಮಿತಿ ವಿಧಿಸಲಾಗಿದೆ ಎಂದು ಮಸ್ಕ್ ಮಾಹಿತಿ ನೀಡಿದ್ದಾರೆ.

ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ವೆರಿಫೈಡ್ ಖಾತೆಗಳಿಗೆ 8 ಸಾವಿರ, ಅನ್‌ವೆರಿಫೈಡ್ ಖಾತೆಗಳಿಗೆ 800 ಮತ್ತು ಹೊಸ ಅನ್‌ವೆರಿಫೈಡ್ ಖಾತೆಗಳಿಗೆ 400ಕ್ಕೆ ಮಿತಿ ಹೆಚ್ಚಿಸಲಾಗುವುದು ಎಂದು ಮಸ್ಕ್ ಅವರು ಮತ್ತೊಂದು ಟ್ವೀಟ್ ಮೂಲಕ ಹೇಳಿದ್ದಾರೆ. ನಂತರ 10 ಸಾವಿರ, 1,000 ಮತ್ತು 500 ಎಂದು ಮತ್ತೊಂದು ಟ್ವೀಟ್ ಪೋಸ್ಟ್ ಮಾಡಿದ್ದಾರೆ.

ಟ್ವಿಟರ್‌ನಿಂದ ಮೌಲ್ಯಯುತವಾದ ಮಾಹಿತಿಗಳನ್ನು ಅನಧಿಕೃತವಾಗಿ ಬಳಸುವುದನ್ನು ತಪ್ಪಿಸಲು ಈ ಕ್ರಮ ಕೈಗೊಂಡಿರುವುದಾಗಿ ಮಸ್ಕ್ ಹೇಳಿದ್ದಾರೆ. ನೂರಾರು ಸಂಸ್ಥೆಗಳು ಟ್ವಿಟರ್ ದತ್ತಾಂಶವನ್ನು ಅತಿಯಾಗಿ ಬಳಕೆ ಮಾಡುತ್ತಿವೆ. ಇದು ಬಳಕೆದಾರರ ಮೇಲೆ ಪರಿಣಾಮ ಬೀರುತ್ತದೆ ಎಂದು ಮಸ್ಕ್ ತಿಳಿಸಿದ್ದಾರೆ.

**ಟ್ವಿಟರ್ ಸೇವೆಯಲ್ಲಿ ವ್ಯತ್ಯಯ:** ಟ್ವಿಟರ್ ಖಾತೆಗೆ ಲಾಗಿನ್ ಆಗಲು ಸಾಧ್ಯವಾಗುತ್ತಿಲ್ಲ ಎಂದು ಸಾವಿರಾರು ಬಳಕೆದಾರರು ಡೌನ್‌ಡಿಟೆಕ್ಟರ್ ಜಾಲತಾಣದಲ್ಲಿ ದೂರಿದ್ದಾರೆ. 7,500 ಜನರಿಗೆ ಟ್ವಿಟರ್ ಬಳಕೆ ಮಾಡುವಾಗ ಸಮಸ್ಯೆ ಎದುರಾಗಿದೆ. ಜಾಗತಿಕವಾಗಿ ಟ್ವಿಟರ್ ಹೊಂದಿರುವ 20 ಕೋಟಿಗೂ ಅಧಿಕ ಬಳಕೆದಾರರಿಗೆ ಹೋಲಿಸಿದರೆ ಬಹಳ ಕಡಿಮೆ ಸಂಖ್ಯೆಯ ಬಳಕೆದಾರರಿಗೆ ಸಮಸ್ಯೆ ಎದುರಾಗಿದೆ. ಹೀಗಿದ್ದರೂ #TwitterDown ಹ್ಯಾಷ್‌ಟ್ಯಾಗ್ ಅಡಿ ಬಳಕೆದಾರರು ಮಾಡಿರುವ ಪೋಸ್ಟ್ ಜಗತ್ತಿನ ಹಲವು ಭಾಗಗಳಿಗೆ ತಲುಪಿವೆ.

ಟ್ವೀಟ್‌ಗಳನ್ನು ನೋಡಲು ಮತ್ತು ಟ್ವೀಟ್ ಬಳಕೆದಾರರ ಪ್ರೊಫೈಲ್ ವೀಕ್ಷಿಸಲು ಟ್ವಿಟರ್‌ಗೆ ಲಾಗಿನ್ ಆಗುವುದನ್ನು ಕಂಪನಿಯು ಕಡ್ಡಾಯ ಮಾಡಿದ ಬಳಿಕ ಸೇವೆಯಲ್ಲಿ ಸಮಸ್ಯೆ ಕಾಣಿಸಿಕೊಳ್ಳಲು ಆರಂಭಿಸಿದೆ.

# ಬಿಜೆಪಿ ಪ್ರಮುಖರಿಗೆ ಕಾಂಗ್ರೆಸ್ ಗಾಳ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವಿನ ಬಳಿಕ ಉತ್ಸಾಹದಲ್ಲಿರುವ ಕಾಂಗ್ರೆಸ್ ಪಕ್ಷ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ರಾಜ್ಯದಲ್ಲಿ ಬಿಜೆಪಿಯ ಕೆಲವು ನಾಯಕರನ್ನು ಸೆಳೆಯಲು ಪ್ರಯತ್ನ ಆರಂಭಿಸಿದೆ.

ವಿಧಾನಸಭೆ ಚುನಾವಣೆಯಲ್ಲಿ ಸೋತಿರುವ ಬಿಜೆಪಿಯ ಮಾಜಿ ಶಾಸಕರಾದ ಎಂ.ಪಿ.ರೇಣುಕಾಚಾರ್ಯ, ರಾಜೂಗೌಡ, ಶಂಕರಪಾಟೀಲ ಮುನೇನಕೊಪ್ಪ, ಜೆ.ಸಿ. ಮಾಧುಸ್ವಾಮಿ ಹಾಗೂ ಸಂಸದ ಕರಡಿ ಸಂಗಣ್ಣ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಸೇರಿದಂತೆ ಹಲವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ಗಂಭೀರ ಪ್ರಯತ್ನ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಸೋಲಿನ ಬಳಿಕ ಬಿಜೆಪಿಯಲ್ಲಿ ಅಂತರ್ಯುದ್ಧ ಆರಂಭವಾಗಿದೆ.

5ನೇ ಪುಟ ನೋಡಿ

## 'ಬಿಆರ್‌ಎಸ್ ಬಿಜೆಪಿಯ 'ಬಿ' ಟೀಂ'

**ಖಮ್ಮಮ್, ತೆಲಂಗಾಣ (ಪಿಟಿಐ):** ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್, ಪ್ರಧಾನಿ ನರೇಂದ್ರ ಮೋದಿ ಅವರ ಅಣತಿಯಂತೆ ಕೆಲಸ ಮಾಡುತ್ತಾರೆ. ರಾಜ್ಯದ ಆಡಳಿತಾರೂಢ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಬಿಜೆಪಿಯ 'ಬಿ' ಟೀಂ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ವಾಗ್ದಾಳಿ ನಡೆಸಿದರು. 9

## ಒಳ ಪುಟಗಳು

ಹಲವೆಡೆ ಉತ್ತಮ ಮಳೆ: ಜೋಗಕ್ಕೆ ಜೀವಕಳೆ 5
ಮಣಿಪುರ: ಮತ್ತೆ ನಾಲ್ವರ ಹತ್ಯೆ 9

## ಚಿನಕುರಳಿ

ಪ್ರಕಾಶ್ ಶೆಟ್ಟಿ

## ಎಸಿಯ ಸ್ಟೆಬಿಲೈಸರ್ ಸ್ಫೋಟ: 24 ಶಿಶುಗಳ ರಕ್ಷಣೆ

ಹಾಸನ: ನಗರದ ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಹಿಮ್ಸ್) ನವಜಾತ ಶಿಶುಗಳ ನಿಗಾ ಘಟಕದಲ್ಲಿ ಎಸಿಯ ಸ್ಟೆಬಿಲೈಸರ್ ಸ್ಫೋಟಗೊಂಡಿದ್ದು, ವಾರ್ಡ್‌ನಲ್ಲಿದ್ದ ಎಲ್ಲ 24 ಶಿಶುಗಳನ್ನು ಬೇರೆಡೆ ಸ್ಥಳಾಂತರಿಸಲಾಗಿದೆ. ಎಲ್ಲ ಶಿಶುಗಳೂ ಆರೋಗ್ಯದಿಂದ ಇದ್ದು, ಯಾವುದೇ ತೊಂದರೆ ಆಗಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

ಭಾನುವಾರ ಮಧ್ಯಾಹ್ನ ವಾರ್ಡ್‌ನ ಸ್ಟೆಬಿಲೈಸರ್ ಸ್ಫೋಟಗೊಂಡು ಹೊಗೆ ತುಂಬಿಕೊಂಡಿತ್ತು. ಕೂಡಲೇ ಆಸ್ಪತ್ರೆ ಸಿಬ್ಬಂದಿ, ಕಿಟಕಿ ಗಾಜುಗಳನ್ನು ಒಡೆದು ಎಲ್ಲ ಶಿಶುಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಿದರು.

ಆಸ್ಪತ್ರೆಯ ಸಿಬ್ಬಂದಿ ಸಮಯಪ್ರಜ್ಞೆಯಿಂದ ಭಾರಿ ಅನಾಹುತ ತಪ್ಪಿದೆ. ಸ್ಥಳಕ್ಕೆ ಹಿಮ್ಸ್ ನಿರ್ದೇಶಕ ಡಾ.ರವಿಕುಮಾರ್, ಜಿಲ್ಲಾ ಶಸ್ತ್ರಚಿಕಿತ್ಸಕ ಕೃಷ್ಣಮೂರ್ತಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ಪೊಲೀಸ್ ಹೆಸರಿನಲ್ಲಿ ₹33 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಪೊಲೀಸರ ಹೆಸರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರನ್ನು ಬೆದರಿಸಿ ₹33.24 ಲಕ್ಷ ಪಡೆದು ವಂಚಿಸಲಾಗಿದೆ. ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಾಗನಾಥಪುರದ ನಿವಾಸಿ ಸಾಫ್ಟ್‌ವೇರ್ ಎಂಜಿನಿಯರ್ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಜೂನ್ 27ರಂದು ಕೊರಿಯರ್ ಕಂಪನಿ ಪ್ರತಿನಿಧಿ ಹೆಸರಿನಲ್ಲಿ ಕರೆ ಮಾಡಿದ್ದ ಆರೋಪಿ, 'ನಿಮ್ಮ ಆಧಾರ್ ಹಾಗೂ ಪಾಸ್‌ಪೋರ್ಟ್ ಮಾಹಿತಿ ಬಳಸಿ ಮುಂಬೈನಿಂದ ತೈವಾನ್‌ಗೆ ಅಕ್ರಮವಾಗಿ ಕೆಲ ನಿಷೇಧಿತ ವಸ್ತುಗಳನ್ನು ಸಾಗಿಸಲಾಗುತ್ತಿದೆ. ನಿಮ್ಮ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪೊಲೀಸರ ಜೊತೆ ಮಾತನಾಡಿ' ಎಂದಿದ್ದ. ಮುಂಬೈ ಡಿಸಿಪಿ ಸೋಗಿನಲ್ಲಿ ಮಾತನಾಡಿದ್ದ ಮತ್ತೊಬ್ಬ ಆರೋಪಿ, 'ಅಕ್ರಮ ವಸ್ತುಗಳನ್ನು ಸಾಗಿಸುತ್ತಿರುವ ನಿಮ್ಮ ಮೇಲೆ ಪ್ರಕರಣ ದಾಖಲಿಸಲಾಗುವುದು' ಎಂದು ಬೆದರಿಸಿದ್ದ.'

'ಪ್ರಕರಣ ದಾಖಲಿಸುವ ಕೆಲ ಮಾಹಿತಿ ಬೇಕಿರುವುದಾಗಿ ಹೇಳಿದ್ದ ಆರೋಪಿಗಳು, ದೂರುದಾರರ ವೈಯಕ್ತಿಕ ಹಾಗೂ ಬ್ಯಾಂಕ್ ದಾಖಲೆಗಳ ವಿವರ ಪಡೆದಿದ್ದರು. ನಂತರ, ಹಂತ ಹಂತವಾಗಿ ₹33.24 ಲಕ್ಷ ವರ್ಗಾಯಿಸಿಕೊಂಡಿದ್ದರು. ನಂತರ, ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿಗಳು

## ನಕಲಿ ಚೆಕ್ ನೀಡಿ ಹಣ ಡ್ರಾ

ಬೆಂಗಳೂರು: ಕೆನರಾ ಬ್ಯಾಂಕ್‌ಗೆ ಕಂಪನಿಯೊಂದರ ಹೆಸರಿನಲ್ಲಿ ನಕಲಿ ಚೆಕ್ ನೀಡಿ ಹಣ ಡ್ರಾ ಮಾಡಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಹೈಗ್ರೌಂಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರೇಸ್‌ಕೋರ್ಸ್ ರಸ್ತೆಯಲ್ಲಿರುವ ಮೈಕ್ರೊ ಲ್ಯಾಬ್ಸ್ ಕಂಪನಿಯ ಹಣಕಾಸು ವ್ಯವಸ್ಥಾಪಕ ಅಶೋಕಕುಮಾರ್ (46) ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಮುಂಬೈ ನಿವಾಸಿ ಸಂತೋಷ್ ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರ ಕಂಪನಿಯಿಂದ ಎವಿಜಿ ಫ್ರಸ್ ಸರ್ವೀಸ್ ಕಂಪನಿಗೆ ₹ 1.01 ಲಕ್ಷ ಮೊತ್ತದ ಚೆಕ್ ನೀಡಲಾಗಿತ್ತು. ಕೆನರಾ ಬ್ಯಾಂಕ್‌ನ ಎಂ.ಜಿ. ರಸ್ತೆ ಶಾಖೆಗೆ ಅದೇ ಚೆಕ್ ಜಮೆ ಮಾಡಲಾಗಿತ್ತು. ಕೆಲ ದಿನಗಳ ನಂತರ ಪ್ರತಿಕ್ರಿಯಿಸಿದ್ದ ಬ್ಯಾಂಕ್ ಸಿಬ್ಬಂದಿ, ಚೆಕ್‌ನಿಂದ ಈಗಾಗಲೇ ಹಣ ಡ್ರಾ ಆಗಿರುವುದಾಗಿ ಹೇಳಿದ್ದರು. ಯಾವ ಚೆಕ್ ಎಂಬುದನ್ನು ಪರಿಶೀಲಿಸಿದಾಗ, ನಕಲಿ ಚೆಕ್ ಪತ್ತೆಯಾಗಿತ್ತು. ಸಂತೋಷ್ ಕುಮಾರ್ ಹೆಸರಿನ ಖಾತೆಗೆ ಹಣ ಜಮೆ ಆಗಿರುವುದು ಗೊತ್ತಾಗಿತ್ತು.'

'ಮೈಕ್ರೊ ಲ್ಯಾಬ್ಸ್ ಕಂಪನಿ ಹೆಸರಿನಲ್ಲಿ ನಕಲಿ ಚೆಕ್ ಸೃಷ್ಟಿಸಿರುವ ಸಂತೋಷ್, ಹಣ ಪಡೆದುಕೊಂಡು ವಂಚಿಸಿದ್ದಾನೆ. ಇದೇ ರೀತಿಯಲ್ಲೇ ಆರೋಪಿ, ಮತ್ತಷ್ಟು ಕಂಪನಿಗಳ ಹೆಸರಿನಲ್ಲಿ ನಕಲಿ ಚೆಕ್ ಸೃಷ್ಟಿಸಿರುವ ಅನುಮಾನವಿದೆ. ಸದ್ಯ ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

## ವಿದ್ಯಾರ್ಥಿ ಸಾವು

ಶಿಗ್ಗಾವಿ (ಹಾವೇರಿ ಜಿಲ್ಲೆ): ತಾಲ್ಲೂಕಿನ ಬಂಕಾಪುರ ಪಟ್ಟಣದ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ವೇಗವಾಗಿ ಕಾರು ಚಲಾಯಿಸಿಕೊಂಡು ಬಂದ ಯುವಕ ನಿಯಂತ್ರಣ ತಪ್ಪಿ ಡಿವೈಡರ್ ಹಾರಿ, ಎದುರಿನಿಂದ ಬಂದ ಲಾರಿಗೆ ಡಿಕ್ಕಿ ಹೊಡೆದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಬೆಂಗಳೂರಿನ ಪದ್ಮನಾಭ ನಗರದ ವೈದ್ಯಕೀಯ ವಿದ್ಯಾರ್ಥಿ ಅಖಿಲ್ ದೇವಿ ಪ್ರಸಾದ್ ಕುಂಬಾರ್ (27) ಮೃತ ಯುವಕ. ಬಂಕಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

## ದಾಂಡೇಲಿ: ಆಂಬುಲೆನ್ಸ್ ಸಿಗದೇ ಕೂಲಿ ಕಾರ್ಮಿಕ ಸಾವು

ದಾಂಡೇಲಿ (ಉತ್ತರ ಕನ್ನಡ): ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ಯಲವರಸನ್ ಅರಕೋಲಿಂದು (52) ಸಮಯಕ್ಕೆ ಸರಿಯಾಗಿ ಆಂಬುಲೆನ್ಸ್ ಸಿಗದೇ, ತುರ್ತಾಗಿ ಆಸ್ಪತ್ರೆಗೆ ದಾಖಲಿಸಲು ಸಾಧ್ಯವಾಗದೇ ಭಾನುವಾರ ಮೃತಪಟ್ಟಿದ್ದಾರೆ.

ಯಲವರಸನ್ ಬೆಳಿಗ್ಗೆ ದಾಂಡೇಲಿಗೆ ಹೋಗಿ ಮರಳಿ ಬರುವಾಗ ಬಸ್ಸಿನಲ್ಲೇ ಎದೆ ನೋವು ಕಾಣಿಸಿಕೊಂಡು ಕುಸಿದು ಬಿದ್ದಿದ್ದಾರೆ. ಕೂಡಲೇ ಬಸ್ ನಿರ್ವಾಹಕ ಹಾಗೂ ಜನರು ಸೇರಿ ಬೊಮ್ಮನಹಳ್ಳಿ ಡ್ಯಾಂ ಬಳಿ ಅವರನ್ನು ಬಸ್ಸಿನಿಂದ ಕೆಳಗೆ ಇಳಿಸಿ ತೆರಳಿದ್ದಾರೆ. 'ಪ್ರಜ್ಞೆ ತಪ್ಪಿದ್ದ ಅವರನ್ನು ತಕ್ಷಣ 108 ಆಂಬುಲೆನ್ಸ್ ವಾಹನಕ್ಕೆ ಕರೆ ಮಾಡಿ ಆಸ್ಪತ್ರೆಗೆ ಸಾಗಿಸುವ ನಿರ್ಧಾರ ಮಾಡಲಾಯಿತು. ಆದರೆ, ಆಂಬುಲೆನ್ಸ್ ತಾಲ್ಲೂಕು ಆಸ್ಪತ್ರೆಯಲ್ಲಿ ಕೆಟ್ಟು ನಿಂತಿತ್ತು. ಹೀಗಾಗಿ ತುರ್ತಾಗಿ ದೊರಕಲಿಲ್ಲ. ನಂತರ ಖಾಸಗಿ ವಾಹನವನ್ನು ಹುಡುಕುವಷ್ಟರಲ್ಲಿ ವ್ಯಕ್ತಿ ಮೃತಪಟ್ಟಿದ್ದಾರೆ' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹಾಗೂ ಸಾಮಾಜಿಕ ಹೋರಾಟಗಾರ ಹಿಂದುಸ್ತಾನ್ ಕೆ.ಎಂ. ಅಬ್ದುಲ್ಲಾ ತಿಳಿಸಿದ್ದಾರೆ. 'ಇಂತಹ ಘಟನೆ ಮರುಕಳಿಸದಂತೆ ತಾಲ್ಲೂಕಿನ ಆಂಬುಲೆನ್ಸ್ ವ್ಯವಸ್ಥೆ ಬೇಕು' ಎಂದು ಅವರು ಆಗ್ರಹಿಸಿದ್ದಾರೆ.


**PUBLIC NOTICE**

Under the instruction of my client: **Shri. ATMURI SANTHA RAJESH,** S/o A Siva Rama Kumar aged about 48 years residing at: Sreenidhi Grand, 76, 77, 80 & 81, Guttala, Begaupet, Sarojini Naidu Nagar, Jubilee Hills., Hyderabad, Telangana - 500 081. Hereby, It is brought to the public notice, that my client is intent to enter in to an agreement of Sale with Land Owner **Shri. M PRAKASH,** S/o. Late Muniyappa, in Survey No. 243 measuring an extent of 1 Acre 20 Guntas Agriculture Land situated at Halagevaderahalii Village, Kengeri Hobli, Bangalore South Taluk, now comes under BBMP Ward No. 160, Bangalore Urban District and are morefuily hereinafter referred to as **"Schedule property"** from his present Owner whose names are mentioned above against this property.

Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owners or objecting to such transactions with our client, should write to the undersigned **within Ten (10) Days** from the date of issuance of this notice with all documentary proof on which they are basing and asserting their rights with regard to Schedule Property or any part thereof, after which our client shall proceed on the basis that there are no claims of whatsoever nature with regard to the "Schedule Property".

**SCHEDULE**

All that piece and parcel of Agricultural immovable property measuring 1 Acre 20 Guntas Situated in Sy. No. 243 situated Halagevaderahalii Village, Kengeri Hobli, Bangalore South Taluk, now comes under BBMP Ward No. 160, Bangalore Urban District and bounded by: **East by: Sy. No. 202** and property of Indo American Hybrid Seeds **West by: Private property, North by: Sy. No. 202 South by: Private Property**

Date: 30.06.2023 Place: Bengaluru

**K.L.Lakshminarayana,** Advocate
Office at No.2382, 2383/2A,
Near Railway gate, K.G.Koppal,
Mysuru-570014 **MOB:9446I 50499**


# ದ್ವಿಚಕ್ರ ವಾಹನ ಡಿಕ್ಕಿ: ವೃದ್ಧ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯ ಈಸ್ಟ್ ವೆಸ್ಟ್ ಕಾಲೇಜು ಜಂಕ್ಷನ್ ಬಳಿ ದ್ವಿಚಕ್ರ ವಾಹನಗಳ ನಡುವೆ ಅಪಘಾತ ಸಂಭವಿಸಿದ್ದು, ಕೃಷ್ಣಮೂರ್ತಿ ಸಿ.ಡಿ (64) ಮೃತಪಟ್ಟಿದ್ದಾರೆ.

'ಶನಿವಾರ ಸಂಜೆ ನಡೆದಿದ್ದ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಕೃಷ್ಣಮೂರ್ತಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಭಾನುವಾರ ಮೃತಪಟ್ಟಿದ್ದಾರೆ' ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ಹೇಳಿದರು.

'ಕೃಷ್ಣಮೂರ್ತಿ ಅವರು ಟಿವಿಎಸ್ ಮೊಪೆಡ್ (ಕೆಎ 04 ಇಯು 9717) ವಾಹನದಲ್ಲಿ, ಈಸ್ಟ್ ವೆಸ್ಟ್ ಕಾಲೇಜು ಕಡೆಯಿಂದ ಬ್ಯಾಡರಹಳ್ಳಿ ಠಾಣೆ ಕಡೆಗೆ ಹೊರಟಿದ್ದರು. ಇದೇ ಮಾರ್ಗದಲ್ಲಿ ತೆರಳುತ್ತಿದ್ದ ಜೈ (24), ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ತಮ್ಮ ಹೊಂಡಾ ಆಕ್ಟಿವಾ ದ್ವಿಚಕ್ರ ವಾಹನ (ಕೆಎ 02 ಎಚ್‌ಕೆ 4120) ಚಲಾಯಿಸಿದ್ದ. ಇದರಿಂದಾಗಿ ದ್ವಿಚಕ್ರ ವಾಹನ, ಟಿವಿಎಸ್ ಮೊಪೆಡ್‌ಗೆ ಡಿಕ್ಕಿ ಹೊಡೆದಿತ್ತು.'

'ಕೃಷ್ಣಮೂರ್ತಿ, ಜೈ ಹಾಗೂ ಆತನ ವಾಹನದ ಹಿಂಬದಿಯಲ್ಲಿದ್ದ ಕಾಲು ಉರ್ವಾ (31) ಗಾಯಗೊಂಡಿದ್ದರು. ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಜೈ ಹಾಗೂ ಉರ್ವಾ ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ತಿಳಿಸಿದರು.

'ಅಪಘಾತಕ್ಕೆ ಕಾರಣವಾದ ಆರೋಪದಡಿ ಜೈ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

## ವ್ಯಕ್ತಿ ಕೊಂದು ಮೃತದೇಹಕ್ಕೆ ಬೆಂಕಿ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿರುವ ದುಷ್ಕರ್ಮಿಗಳು, ಮೃತದೇಹವನ್ನು ಸುಟ್ಟು ಪರಾರಿಯಾಗಿದ್ದಾರೆ.

'ಚನ್ನನಾಯಕನಪಾಳ್ಯದ ನಿರ್ಜನ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ. ದೇಹದ ಬಹುತೇಕ ಭಾಗ ಸುಟ್ಟಿದ್ದು, ಗುರುತು ಪತ್ತೆಯಾಗಿಲ್ಲ. ಕೊಲೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೃತ ವ್ಯಕ್ತಿಗೆ 40 ವರ್ಷ ವಯಸ್ಸಾಗಿರಬಹುದೆಂದು ಅಂದಾಜಿಸಲಾಗಿದೆ. ಹೆಸರು ಹಾಗೂ ವಿಳಾಸ ಗೊತ್ತಾಗಿಲ್ಲ. ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಭೇಟಿ ನೀಡಿ, ಮಾದರಿಗಳನ್ನು ಸಂಗ್ರಹಿಸಿದ್ದಾರೆ. ವರದಿ ಬಂದ ಬಳಿಕ ಮತ್ತಷ್ಟು ಮಾಹಿತಿ ತಿಳಿಯಲಿದೆ' ಎಂದರು.

'ಯಾರೋ ದುಷ್ಕರ್ಮಿಗಳು ವ್ಯಕ್ತಿಯನ್ನು ಅಪಹರಿಸಿ ಕೊಲೆ ಮಾಡಿದ್ದಾರೆ. ಸಾಕ್ಷ್ಯ ನಾಶ ಮಾಡುವುದಕ್ಕಾಗಿ ಮೃತದೇಹವನ್ನು ಸುಟ್ಟು ಪರಾರಿಯಾಗಿರುವ ಶಂಕೆ ಇದೆ. ಮೃತದೇಹ ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಅವರಿಂದಲೇ ಹೇಳಿಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

## ಕೋರ್ಟ್ ಹೆಸರಲ್ಲಿ ನಕಲಿ ಆದೇಶ

ಬೆಂಗಳೂರು: ರಾಜ್ಯ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ ಹಾಗೂ ನಕಲಿ ಗುರುತಿನ ಚೀಟಿ ಸೃಷ್ಟಿಸಲಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನ್ಯಾಯಾಲಯದ ಶಾಖಾಧಿಕಾರಿ ದೂರು ನೀಡಿದ್ದಾರೆ. ನ್ಯಾಯಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ಸಹಾಯಕ ಕೆಲಸ ಮಾಡಿದ್ದ ರಾಜೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನ್ಯಾಯಾಲಯದಲ್ಲಿ ಚಾಲಕ ಹುದ್ದೆ ಕೊಡಿಸುವುದಾಗಿ ಮಧು ಎಂಬಾತನಿಗೆ ಆರೋಪಿ ರಾಜೇಶ್ ಹೇಳಿದ್ದ. ನಂತರ, ನಕಲಿ ನೇಮಕಾತಿ ಆದೇಶ ಹಾಗೂ ಗುರುತಿನ ಚೀಟಿಗಳನ್ನು ಸೃಷ್ಟಿಸಿ ಮಧುಗೆ ನೀಡಿದ್ದ. ಈ ಸಂಗತಿ ಗಮನಕ್ಕೆ ಬರುತ್ತಿದ್ದಂತೆ ಶಾಖಾಧಿಕಾರಿ ದೂರು ನೀಡಿದ್ದಾರೆ.' 'ಆರೋಪಿ ರಾಜೇಶ್, ಮಧು ಅವರಿಗೆ ಕೆಲಸದ ಆಮಿಷವೊಡ್ಡಿ ಹಣ ಪಡೆದಿರುವ ಮಾಹಿತಿ ಇದೆ' ಎಂದು ಮೂಲಗಳು ತಿಳಿಸಿವೆ.

## ಉತ್ತಮ ಮಳೆ: ರಸ್ತೆಯಲ್ಲಿ ನೀರು

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಭಾನುವಾರ ಉತ್ತಮ ಮಳೆ ಆಯಿತು. ಕೆಲವೆಡೆ ಕಾಲುವೆಗಳು ತುಂಬಿ ರಸ್ತೆಯಲ್ಲಿ ನೀರು ಹರಿಯಿತು.

ಮಳೆಗಾಲ ಆರಂಭವಾಗಿ ಹಲವು ದಿನವಾಗಿದ್ದು, ಆಗಾಗ ಮೋಡ ಕವಿದ ವಾತಾವರಣ ಕಾಣಿಸಿಕೊಳ್ಳುತ್ತಿದೆ. ಭಾನುವಾರವೂ ಬಿಸಿಲು ಹಾಗೂ ಮೋಡ ಕವಿದ ವಾತಾವರಣವಿತ್ತು.

ರಾಜರಾಜೇಶ್ವರಿನಗರ, ದೀಪಾಂಜಲಿನಗರ, ವಿಜಯನಗರ, ಬಸವೇಶ್ವರನಗರ, ರಾಜಾಜಿನಗರ, ಯಶವಂತಪುರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಸಂಜೆ ಜೋರು ಮಳೆಯಾಯಿತು. ಹೆಬ್ಬಾಳ, ಶಿವಾಜಿನಗರ, ಅಶೋಕನಗರ, ಎಂ.ಜಿ.ರಸ್ತೆ, ಹಲಸೂರು, ಇಂದಿರಾನಗರ, ಸಂಪಂಗಿರಾಮನಗರ, ಕೆ.ಆರ್. ಮಾರುಕಟ್ಟೆ, ಚಾಮರಾಜಪೇಟೆ, ಬಸವನಗುಡಿ, ಹನುಮಂತನಗರ, ಗಿರಿನಗರ ಹಾಗೂ ಸುತ್ತಮುತ್ತ ಸಾಧಾರಣ ಮಳೆ ಸುರಿಯಿತು. ಕೆ.ಆರ್. ಮಾರುಕಟ್ಟೆ, ಚಿಕ್ಕಪೇಟೆ ಹಾಗೂ ಸುತ್ತಮುತ್ತಲಿನ ಮಾರುಕಟ್ಟೆ ಪ್ರದೇಶದಲ್ಲಿಯೂ ಉತ್ತಮ ಮಳೆ ಆಯಿತು. ರಸ್ತೆ ಮೇಲೆ ನೀರು ಹರಿದಿದ್ದರಿಂದ, ವ್ಯಾಪಾರಕ್ಕೆ ತೊಂದರೆ ಉಂಟಾಯಿತು. ಹಲವರು, ಮಳೆಯಿಂದ ರಕ್ಷಣೆ ಪಡೆಯಲು ಕೊಡೆ ಹಿಡಿದು ಹೆಜ್ಜೆ ಹಾಕಿದರು. ಕೆಲವೆಡೆ ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ವಾಹನಗಳು ಸಂಚರಿಸಿ ದವು. ಕೆಲ ವಾಹನಗಳು, ಕೆಟ್ಟು ನಿಂತಿದ್ದವು. ಸಂಚಾರ ಪೊಲೀಸರು, ಹಲವೆಡೆ ನೀರು ತೆರವು ಮಾಡಿದರು.


ಮಾನ್ಯ 75ನೇ ಸಿಸಿಹೆಚ್ ಸಿಟಿ ಸಿವಿಲ್ ಮೇಯೋ ಹಾಲ್ ನ್ಯಾಯಾಲಯ ಬೆಂಗಳೂರು.
ಓ.ಎಸ್. 25910/2023
ಅರ್ಜಿದಾರರು: ಮಹೇಶ್ ಬಸವೇಗೌಡ ಮತ್ತು ಇತರರು –ವಿರುದ್ಧ–
ಎದುರುದಾರರು:NILL
ಸಾರ್ವಜನಿಕ ಪ್ರಕಟಣೆ
ನನ್ನ ಕಕ್ಷಿದಾರರಾದ ಶ್ರೀ ಮಹೇಶ್ ಬಸವೇಗೌಡ ಮತ್ತು ಶ್ರೀಮತಿ ರಜನಿ ವಿದ್ಯಾಗೌಡ ರವರು (ದತ್ತು ಪಡೆದ ಪೋಷಕರು) ತಿಳಿಸುವುದೇನೆಂದರೆ, ಶ್ರೀ ಶಿವಪ್ರಸಾದ್ ಬಿ.ಬಿ, ಹಾಗೂ ವೆಂಕಟಲಕ್ಷ್ಮಿ ಟಿ.ಎನ್ (ದತ್ತು ಕೊಟ್ಟವರು) ರವರ ಪುತ್ರನಾದ ಮಾಸ್ಟರ್ ಆದಿತ್ಯ ಶಿವಪ್ರಸಾದ್ ಅವರನ್ನು ದಿನಾಂಕ: 24–02–2023 ರಂದು ಕೆಂಗೇರಿ ರಿಜಿಸ್ಟ್ರೇಷನ್ ಆಫೀಸಿನಲ್ಲಿ ರಿಜಿಸ್ಟರ್ಡ್ ದತ್ತು ಸ್ವೀಕಾರ ಮಾಡಿರುತ್ತಾರೆ. ಈ ದತ್ತು ಸ್ವೀಕಾರವನ್ನು ದೃಢಪಡಿಸುವ ಸಲುವಾಗಿ ಮಾನ್ಯ ಸಿ. ಸಿ. ಹೆಚ್. 75 ನೇ ಮೇಯೋ ಹಾಲ್ ಕೋರ್ಟಿನ ಮುಂದೆ ಓ.ಎಸ್. 25910/2023 ದಾವೆ ಹೂಡಿದ್ದು, ಈ ಬಗ್ಗೆ ಮೂರನೇ ವ್ಯಕ್ತಿಯ ಆಕ್ಷೇಪಣೆ ಇದ್ದ ಪಕ್ಷದಲ್ಲಿ, ಕೆಳಕಂಡ ನ್ಯಾಯಾಲಯದ ಮುಂದೆ ದಿನಾಂಕ:15–07–2023 ರಂದು ಬೆಳಗ್ಗೆ 11:00 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು.
ನ್ಯಾಯಾಲಯದ ಆದೇಶದ ಮೇರೆಗೆ
ಸಿ. ಸಿ. ಹೆಚ್, 75 ಮೇಯೋ ಹಾಲ್ ಬೆಂಗಳೂರು.
ಅರ್ಜಿದಾರರ ಪರ ವಕೀಲರು
(ಶ್ರೀಮತಿ ಶಕುಂತಲಾ ಶೆಟ್ಟಿ)
ಶೆಟ್ಟಿ & ಅಸೋಸಿಯೇಟ್ಸ್,ವಕೀಲರು ಮತ್ತು ಕಾನೂನು ಸಲಹೆಗಾರರು. ಮೊ.ನಂ.9343113902


# ಕೃಷಿಯಲ್ಲಿ ನೀರಿನ ಬಳಕೆ: ಸ್ಪರ್ಧೆ

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿ ನಾವೀನ್ಯತೆ ಮತ್ತು ನೀರಿನ ಸಮರ್ಥ ಬಳಕೆ ಉತ್ತೇಜಿಸಲು ₹2.6 ಕೋಟಿ ಮೊತ್ತದ ಬಹುಮಾನಗಳನ್ನು ಒಳಗೊಂಡ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಡಿಸಿಎಂ ಶ್ರೀರಾಂ ಫೌಂಡೇಷನ್ ಮತ್ತು ದಿ ನಡ್ಜ್ ಇನ್ಸಿಟ್ಯೂಟ್‌ನ ಸೆಂಟರ್ ಫಾರ್ ಸೋಷಿಯಲ್ ಇನ್ನೋವೇಷನ್ ಸಂಸ್ಥೆಗಳು ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಚೇರಿ ಸಹಭಾಗಿತ್ವದಲ್ಲಿ ಸ್ಪರ್ಧೆ ಏರ್ಪಡಿಸಲಾಗಿದೆ.

ದೇಶದಲ್ಲಿ ಶೇ 80 ರಷ್ಟು ಅಂತರ್ಜಲವನ್ನು ಕೃಷಿಗೆ ಬಳಸಲಾಗುತ್ತಿದೆ. ಆದರೆ, ಈ ಪೈಕಿ ಶೇ 60ರಷ್ಟನ್ನು ಅಸಮರ್ಪಕವಾಗಿ ಬಳಕೆ ಮಾಡಲಾಗುತ್ತಿದೆ. ಪೋಷಕಾಂಶಗಳು ಮತ್ತು ರಸಗೊಬ್ಬರಗಳ ಬಳಕೆಯಲ್ಲಿ ಅಸಮತೋಲನ ಮತ್ತು ಮಣ್ಣಿನ ಸವಕಳಿಗೆ ಕಾರಣವಾಗಿದೆ. ಇದನ್ನು ಮೀರಿ, ನೀರಿನ ಸಮರ್ಪಕ ಬಳಕೆ ಮಾಡಿ ಸಾಧನೆ ಮಾಡಿವವರನ್ನು ಗುರುತಿಸಲು ಉದ್ದೇಶಿಸಲಾಗಿದೆ. 'ಡಿಸಿಎಂ ಶ್ರೀರಾಮ್ ಎಜಿವಾಟರ್ ಚಾಲೆಂಜ್'ನಲ್ಲಿ ವಿಜೇತರಿಗೆ ₹2 ಕೋಟಿ ಬಹುಮಾನ ನೀಡಲಾಗುತ್ತದೆ. ಸುಸ್ಥಿರ ಕೃಷಿ ಅಳವಡಿಕೆಗಳಿಗಾಗಿ ನೀಡಲಾಗುತ್ತಿರುವ ಅತಿ ದೊಡ್ಡ ನಗದು ಬಹುಮಾನವಾಗಿದ್ದು, ಸ್ಪರ್ಧೆಯ ಮಾನದಂಡಗಳನ್ನು ಪೂರೈಸಿ ಫೈನಲ್ ಪ್ರವೇಶಿಸುವ ಮೂರು ಸಂಸ್ಥೆಗಳಿಗೆ ಕ್ರಮವಾಗಿ ₹30 ಲಕ್ಷ, ₹20 ಲಕ್ಷ, ₹10 ಲಕ್ಷ ನೀಡಲಾಗುತ್ತದೆ ಎಂದು ಫೌಂಡೇಷನ್ ಅಧ್ಯಕ್ಷ ಅಮಾನ್ ಪನ್ನು ತಿಳಿಸಿದ್ದಾರೆ.

'ಇತ್ತೀಚೆಗೆ ನೀರಿನ ಸಮಸ್ಯೆ ನಿವಾರಿಸಿಕೊಂಡು ಪರಿಹಾರಗಳನ್ನು ಕೃಷಿಯಲ್ಲಿ ಕಂಡುಕೊಳ್ಳಲಾಗಿದೆ. https://prize.thenudge.org/dcmshriramagwaterchallenge ನಲ್ಲಿ ಅರ್ಜಿ ಸಲ್ಲಿಸಬಹುದು' ಎಂದು ದಿ–ನಡ್ಜ್ ನಿರ್ದೇಶಕ ಕನಿಷ್ಕ ಚಟರ್ಜಿ ತಿಳಿಸಿದರು.

# ಆನ್‌ಲೈನ್ ಅರ್ಜಿ: ನಕಲಿ ಲಿಂಕ್ ಸೃಷ್ಟಿಸಿ ವಂಚನೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ನೋಂದಣಿ ಹೆಸರಿನಲ್ಲಿ ನಕಲಿ ಲಿಂಕ್‌ಗಳನ್ನು ಸೃಷ್ಟಿಸಿ ವಂಚಿಸಲಾಗುತ್ತಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸುವಂತೆ ಸಿಸಿಬಿ ಜಂಟಿ ಕಮಿಷನರ್ ಎಸ್.ಡಿ.ಶರಣಪ್ಪ ಕೋರಿದ್ದಾರೆ.

ಗೃಹ ಜ್ಯೋತಿ ಯೋಜನೆ ನೋಂದಣಿಗೆ ಸೇವಾಸಿಂಧು ಜಾಲತಾಣದಲ್ಲಿ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ, ಗೃಹ ಲಕ್ಷ್ಮಿ, ಶಕ್ತಿ ಹಾಗೂ ಯುವನಿಧಿ ಯೋಜನೆಗಳ ನೋಂದಣಿಗೂ ಆನ್‌ಲೈನ್ ವ್ಯವಸ್ಥೆ ರೂಪಿಸುವುದಾಗಿ ರಾಜ್ಯ ಸರ್ಕಾರ ಹೇಳಿದೆ.

ಇದರ ಬೆನ್ನಲ್ಲೇ, ಸೇವಾ ಸಿಂಧು ಜಾಲತಾಣದ ಲಿಂಕ್ ಹೋಲುವ ರೀತಿಯಲ್ಲಿ ನಕಲಿ ಲಿಂಕ್‌ಗಳನ್ನು ವಂಚಕರು ಸೃಷ್ಟಿಸುತ್ತಿದ್ದಾರೆ. ಈ ಸಂಬಂಧ ಮಾಹಿತಿ ಸಂಗ್ರಹಿಸಿರುವ ಸೈಬರ್ ಠಾಣೆ ಪೊಲೀಸರು, ತಪ್ಪಿತಸ್ಥರ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ. ಜೊತೆಗೆ, ಜನರು ಹೆಚ್ಚು ಜಾಗೃತಿಯಿಂದ ಇರಬೇಕೆಂದು ತಿಳಿಸಿದ್ದಾರೆ.

'ಸರ್ಕಾರದ ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ನಕಲಿ ಜಾಲತಾಣ ಹಾಗೂ ನಕಲಿ ಆ್ಯಪ್ ಸೃಷ್ಟಿಸಿ ಜನರನ್ನು ವಂಚಿಸುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಇಂಥ ಆರೋಪಿಗಳನ್ನು ಪತ್ತೆ ಮಾಡಿ, ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಎಸ್.ಡಿ. ಶರಣಪ್ಪ ಹೇಳಿದರು. 'ರಾಜ್ಯ ಸರ್ಕಾರದ ಸೇವಾಸಿಂಧು ಜಾಲತಾಣದ ಮೂಲಕವಷ್ಟೇ ಜನರು ನೋಂದಣಿ ಮಾಡಿಸಿಕೊಳ್ಳಬೇಕು. ಯಾವುದಾದರೂ ನಕಲಿ ಜಾಲತಾಣ ಹಾಗೂ ನಕಲಿ ಆ್ಯಪ್ ಬಗ್ಗೆ ಮಾಹಿತಿ ಸಿಕ್ಕರೆ, ಪೊಲೀಸರಿಗೆ ತಿಳಿಸಬೇಕು' ಎಂದು ಕೋರಿದ್ದಾರೆ.

## ನವಿಲಿನ ವಿರುದ್ಧ ದೂರು!

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಅರಳಾಳುಸಂದ್ರ ಗ್ರಾಮದ ಮಹಿಳೆ ನವಿಲುವೊಂದರ ವಿರುದ್ಧ ಅರಣ್ಯ ಇಲಾಖೆಗೆ ದೂರು ನೀಡಿದ್ದಾರೆ.

ಗ್ರಾಮದ ಲಿಂಗಮ್ಮ ಎಂಬುವರು 'ನವಿಲೊಂದು ನನ್ನ ಮೇಲೆ ಪದೇ ಪದೇ ದಾಳಿ ಮಾಡುತ್ತಿದ್ದು ಗಾಯಗಳಾಗಿವೆ. ಅದನ್ನು ಸೆರೆ ಹಿಡಿಯಬೇಕು' ಎಂದು ಅರಣ್ಯ ಇಲಾಖೆಗೆ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದಾರೆ.

ಜೂ.26ರಂದು ಮನೆ ಹಿಂಭಾಗ ಕೆಲಸ ಮಾಡುವ ಸಂದರ್ಭದಲ್ಲಿ ನನ್ನ ಮೇಲೆ ದಾಳಿ ಮಾಡಿ ಗಾಯಗೊಳಿಸಿತು. ದಾಳಿಯಿಂದ ಆಗಿರುವ ಗಾಯಕ್ಕೆ ತಾಲ್ಲೂಕಿನ ಬಿ.ವಿ.ಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿರುವುದಾಗಿ ದೂರಿನಲ್ಲಿ ತಿಳಿಸಿದ್ದಾರೆ.


# ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

H.O:#156, 8th Main, 17th Cross, Malleswaram, Bengaluru - 560 055. Ph: 080- 23341972/ 2344 9450/ 2344 2648

## ಸ್ಥಿರಾಸ್ತಿ ಸ್ವಾಧೀನತೆಯ ಪ್ರಕಟಣೆ

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: 11–04–2023ರಂದು ಈ ಕೆಳಗಿನ ಸಾಲಗಾರರರಾದ ಶ್ರೀಮತಿ ಗಿರಿಜಮ್ಮ, ಶ್ರೀ ವೆಂಕಟೇಶ್.ಆರ್ ರವರ ಧರ್ಮಪತ್ನಿ ನಂ. 50/2, ಗುಡ್ಡ ಆಂಜನೇಯಸ್ವಾಮಿ ದೇವಸ್ಥಾನದ ರಸ್ತೆ, 1ನೇ ಮೈನ್, 1ನೇ ಕ್ರಾಸ್, ಕೆಂಗೇರಿ, ಬೆಂಗಳೂರು–560060 ಇವರಿಗೆ ದಿನಾಂಕ **27–06–2023ರ** ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.29,21,544/– + ರೂ.58,53,303/– + ರೂ.2,16,946/–ಒಟ್ಟು ರೂ.90,16,793/– (ತೊಂಬತ್ತು ಲಕ್ಷ ಹದಿನಾರು ಸಾವಿರದ ಏಳುನೂರ ತೊಂಬತ್ತೊಂದು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **27.06.2023** ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, 156, 8ನೇ ಮೈನ್ ರೋಡ್, 17ನೇ ಕ್ರಾಸ, ಮಲ್ಲೇಶ್ವರಂ ಪಶ್ಚಿಮ,** ಬರಿಎಂಗಳೂರು–560 055ಗೆ ದಿನಾಂಕ **31.03.2023** ರವರೆಗೆ ಬರಬೇಕಾದ ಬಾಕಿ **ರೂ.29.21,544/– + ರೂ.58,53,303/– + ರೂ.2,16,946/–ಒಟ್ಟು ರೂ.90,16,793/– (ತೊಂಬತ್ತು ಲಕ್ಷ ಹದಿನಾರು ಸಾವಿರದ ಏಳುನೂರ ತೊಂಬತ್ತೊಂದು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲಿ)್ಲ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

**ಸ್ಥಿರ ಆಸ್ತಿಯ ವಿವರ**

**ಬಿ.ಬಿ.ಎಂ.ಪಿ ವಾರ್ಡ್ 198 (ಹೆಮ್ಮಿಗೆಪುರ) (ಹೊಸ ಪಿ ಐ ಡಿ ನಂ.198–ಎಮ್0106–59 ನಲ್ಲಿರುವಬಿ.ಬಿ.ಎಂ.ಪಿ ವಾರ್ಡ್ ಸ್ಥಿರಾಸ್ತಿ ಸಿ.ಎಮ್.ಸಿ ಖಾತ ನಂ.395/532/1–22/1, ಬಿ.ಬಿ.ಎಂ.ಪಿ ಖಾತ ನಂ.2165/1'928/395/532/1/22/1, ಕೆಂಗೇರಿ ಟೌನ್, ಕೆಂಗೇರಿ ಹೋಬಳಿ, ಬೆಂಗಳೂರು ಸೌತ್ ತಾಲ್ಲೂಕು, ಬೆಂಗಳೂರು ಇಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 22 ಅಡಿ ಮತ್ತು ಉತ್ತರದಿದ ದಕ್ಷಿಣಕ್ಕೆ 72 ಅಡಿ ಇದ್ದು ಚಕ್ಕುಬಂದಿ: ಪೂರ್ವಕ್ಕೆ – ಸಂಜೀವಪ್ಪರವರ ಆಸ್ತಿ; ಪಶ್ಚಿಮಕ್ಕೆ – ರಂಗಣ್ಣರವರ ಖಾಲಿ ನಿವೇಶನ; ಉತ್ತರಕ್ಕೆ – 30 ಅಡಿ ರಸ್ತೆ; ದಕ್ಷಿಣಕ್ಕೆ – ನಾರಾಯಣಪ್ಪರವರ ಸ್ವತ್ತು**

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ: **24–03–2023ರಂದು** ಈ ಕೆಳಗಿನ ಸಾಲಗಾರರರಾದ ಶ್ರೀ ಶ್ರೀನಿವಾಸ್.ಎನ್, ನಾರಾಯಣಪ್ಪ.ಎಸ್ ರವರ ಪುತ್ರ, ನಂ.ಜೆ93, 2ನೇ ಕ್ರಾಸ್, ಹಳೇ ನಂ.8/1, 1ನೇ ಕ್ರಾಸ್, ಆಂಜನೇಯ ಬ್ಲಾಕ್, ಶೇಷಾದ್ರಿಪುರಂ ಬೆಂಗಳೂರು–560020 ಇವರಿಗೆ ದಿನಾಂಕ **24–03–2023**ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.33,46,130/– (ಮೂವತ್ಮೂರು ಲಕ್ಷ ನಲವತ್ತಾರು ಸಾವಿರದ ಒಂದು ನೂರಮೂವತ್ತು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **27.06.2023** ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, 156, 8ನೇ ಮೈನ್ ರೋಡ್**, 17ನೇ ಕ್ರಾಸ, ಮಲ್ಲೇಶ್ವರಂ ಪಶ್ಚಿಮ, ಬರಿಎಂಗಳೂರು–560 055ಗೆ ದಿನಾಂಕ **28.02.2023** ರವರೆಗೆ ಬರಬೇಕಾದ ಬಾಕಿ **ರೂ.33,46,130/– (ಮೂವತ್ಮೂರು ಲಕ್ಷ ನಲವತ್ತಾರು ಸಾವಿರದ ಒಂದು ನೂರಮೂವತ್ತು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲಿ)್ಲ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

**ಸ್ಥಿರ ಆಸ್ತಿಯ ವಿವರ**

**ಸ್ಥಿರಾಸ್ತಿ ಹೊಸ ನಂ.8/1, ಹಳೇ ನಂ.12, 1ನೇ ಕ್ರಾಸ್, ಪೈಪ್ ಲೈನ್ ರೋಡ್, ಮಲ್ಲೇಶ್ವರಂ, ಬೆಂಗಳೂರು ಬಿ.ಬಿ.ಎಮ್.ಪಿ ವಾರ್ಡ್ ನಂ.77 ನಲ್ಲಿರುವ (ದತ್ತಾತ್ರೇಯ ದೇವಸ್ಥಾನ) (ಪಿ.ಐ.ಡಿ ನಂ.6–42–8/1) ಪೂರ್ವದಿಂದ ಪಶ್ಚಿಮಕ್ಕೆ 121/2ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 46 ಅಡಿ ಇದ್ದು ಚಕ್ಕುಬಂದಿ: ಪೂರ್ವಕ್ಕೆ – ರಾಧಾಬಾಯಿ ಅವರ ಸ್ವತ್ತು; ಪಶ್ಚಿಮಕ್ಕೆ – ವೀರಪ್ಪ ರವರ ಆಸ್ತಿ; ಉತ್ತರಕ್ಕೆ – ರಸ್ತೆ; ದಕ್ಷಿಣಕ್ಕೆ – ಶಾರದಮ್ಮರವರ ಸ್ವತ್ತು.**

ಕೆಳಸಹಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ:18–04–2023ರಂದು ಈ ಕೆಳಗಿನ ಸಾಲಗಾರರರಾದ **ಶ್ರೀ ಶಾನವಾಜ ಪಾಷಾ, ಅಬ್ದುಲ್ ಲತೀಫ್ ರವರ ಪುತ್ರ, ನಂ.35, 4ನೇ ಮೈನ್, ರಾಮಚಂದ್ರಪುರ, ಬೆಂಗಳೂರು–560021 ನಾರಾಯಣಪ್ಪ.ಎಸ್ ರವರ ಪುತ್ರ, ನಂ.ಜೆ93, 2ನೇ ಕ್ರಾಸ್,** ಇವರಿಗೆ ದಿನಾಂಕ 18–04–2023ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.9,25,037/– ಮತ್ತು ರೂ16,14,451/– ಒಟ್ಟು ರೂ.25,64,488/– (ಇಪ್ಪತ್ತೈದು ಲಕ್ಷ ಅರವತ್ತನಾಲ್ಕು ಸಾವಿರದ ನಾಲ್ಕು ನೂರಎಂಬತ್ತೆಂಟು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 27.06.2023 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, 156, 8ನೇ ಮೈನ್ ರೋಡ್, 17ನೇ ಕ್ರಾಸ, ಮಲ್ಲೇಶ್ವರಂ ಪಶ್ಚಿಮ, ಬರಿಎಂಗಳೂರು–560 055ಗೆ ದಿನಾಂಕ 31.03.2023 ರವರೆಗೆ ಬರಬೇಕಾದ ಬಾಕಿ **ರೂ.9,25,037/– ಮತ್ತು ರೂ16,14,451/– ಒಟ್ಟು ರೂ.25,64,488/– (ಇಪ್ಪತ್ತೈದು ಲಕ್ಷ ಅರವತ್ತನಾಲ್ಕು ಸಾವಿರದ ನಾಲ್ಕು ನೂರಎಂಬತ್ತೆಂಟು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲಿ)್ಲ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

**ಸ್ಥಿರ ಆಸ್ತಿಯ ವಿವರ**

**ಸರ್ವೆ ನಂ.67, ಕ್ಯಾತಮಾರನಹಳ್ಳಿ, ವಿಲೇಜ್, ನಲ್ಲಿರುವ ಬಿ.ಬಿ.ಎಂ.ಪಿ/ಬಿ.ಡಿ.ಎ ನಂ.35 ಹಳೇ ನಂ.35, 4ನೇ ಮೈನ್, ರಾಮಚಂದ್ರಪುರ, ಬೆಂಗಳೂರು ವಾರ್ಡ್ ನಂ.25 (ರಾಮಚಂದ್ರಪುರ) (ಪಿ.ಐ.ಡಿ ನಂ.25–19–35) ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ, ಉತ್ತರದಿಂದ ದಕ್ಷಿಣಕ್ಕೆ 171/2 ಅಡಿ; ಚಕ್ಕುಬಂದಿ: ಪೂರ್ವಕ್ಕೆ ಮುಂಚೆ ಕನ್ಸರ್ವೆನ್ಸಿ ರೋಡ್ ಈಗ ಖಾಸಗಿ ಸ್ವತ್ತು, ಪಶ್ಚಿಮಕ್ಕೆ ರೋಡ್, ಉತ್ತರಕ್ಕೆ ಇದೇ ಸ್ವತ್ತಿನ ಉತ್ತರ ಭಾಗದ ಸ್ವತ್ತು, ಈಗ ಕಾರ್ಪೊರೇಶನ್ ನಂ.35/2, ಮತ್ತು ದಕ್ಷಿಣಕ್ಕೆ ಖಾಸಗಿ ಆಸ್ತಿ.**

ಕೆಳಸಹಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್**ನ ಅಧಿಕೃತ ಅಧಿಕಾರಿಯಾಗಿದ್ದು, **ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002** (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ ದಿನಾಂಕ:18–04–2023ರಂದು ಈ ಕೆಳಗಿನ ಸಾಲಗಾರರರಾದ **ಶ್ರೀ ಅನಂತ.ಡಿ.ಸಿ ಸಣ್ಣವೀರಭಾರ್.ಕೆ ರವರ ಪುತ್ರ ನಂ.499/30. , 3ನೇ ಮೈನ್, ಎ ಬ್ಲಾಕ್, ರಾಜಾಜಿನಗರ 2ನೇ ಹಂತ, ಸುಬ್ರಮಣ್ಯನಗರ; ಬೆಂಗಳೂರು–560055** ಇವರಿಗೆ ದಿನಾಂಕ 25–04–2023ರ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.10,23,876/– (ಹತ್ತು ಲಕ್ಷ ಇಪ್ಪತ್ತಮೂರು ಸಾವಿರದ'ಎಂಟುನೂರ ಎಪ್ಪತ್ತಾರು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 27.06.2023 ರಂದು ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, 156, 8ನೇ ಮೈನ್ ರೋಡ್, 17ನೇ ಕ್ರಾಸ್, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–560 055ಗೆ** ದಿನಾಂಕ **31.03.2023** ರವರೆಗೆ ಬರಬೇಕಾದ ಬಾಕಿ **.10,23,876/–(ಹತ್ತು ಲಕ್ಷ ಇಪ್ಪತ್ತಮೂರು ಸಾವಿರದ ಎಂಟುನೂರ ಎಪ್ಪತ್ತಾರು ರೂಗಳು ಮಾತ್ರ)** (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲಿ)್ಲ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

**ಸ್ಥಿರ ಆಸ್ತಿಯ ವಿವರ**

ಬಿ.ಬಿ.ಎಂ.ಪಿ ವಾರ್ಡ್ ನಂ.9 (ಸುಬ್ರಮಣ್ಯನಗರ) ನಲ್ಲಿರುವ, ನಂ.499, ಹೊಸ ನಂ.30, 3ನೇ ಮೈನ್ 'ಎ' ಬ್ಲಾಕ್, ಸುಬ್ರಮಣ್ಯನಗರ್, ಬೆಂಗಳೂರು (ಪಿ.ಐ.ಡಿ ನಂ.9–4–30) ಪೂರ್ವದಿಂದ ಪಶ್ಚಿಮಕ್ಕೆ: (37+38)/2 ಅಡಿ, ಉತ್ತರದಿಂದ ದಕ್ಷಿಣಕ್ಕೆ(35+33.06)/2 ಚಕ್ಕುಬಂದಿ: ಪೂರ್ವಕ್ಕೆ ಆಸ್ತಿ ನಂ.491, ಪಶ್ಚಿಮಕ್ಕೆ ರೋಡ್, ಉತ್ತರಕ್ಕೆ–ಆಸ್ತಿ ನಂ.498; ದಕ್ಷಿಣಕ್ಕೆ– ಆಸ್ತಿ ನಂ.500.

ದಿನಾಂಕ: **27.06.2023**
ಬೆಂಗಳೂರು.

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.
ಅಧಿಕೃತ ಅಧಿಕಾರಿ



ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ಪ್ಯಾಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)



ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**BUSINESS**

**Business Offers**

**Finance**

NRI'S Investment And Finance Available On Low Interest Against Properties,Land & Building,Sites,Flats,Converted & Agriculture Lands Call:7204995189

**PERSONAL**

**Change of Name**

JC674070L, SUB/MT, SHIVANA GOUDA B PATIL, Vill- 2499, Kanabargi Road, Ramteerth Nagar, Belagavi, Karnataka changed Son's name GIRISH S PATIL to GIRISH SHIVANAGOUDA PATIL, 01/07/2023, Notary K.V. Mani, Bangalore

DH
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

**TOURS & TRAVEL**

**Travel**

**CONTACT ORCHID** Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru


## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮ್ಯಕ್ ಪ್ರತಿಷ್ಠಾನ ದಿಂದ 2022–23ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯ ಸಂಸ್ಕೃತ ಭಾಷೆಯಲ್ಲಿ ಶೇ 90 ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಜುಲೈ 25ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಸಮ್ಯಕ್ ಪ್ರತಿಷ್ಠಾನ, #67 ಸಹೃತ್, 1ನೇ ಅಡ್ಡರಸ್ತೆ, ಭೂಮಿಕಾ ಬಡಾವಣೆ, ಮೈಲಸಂದ್ರ, ಹೆಮ್ಮಿಗೆಪುರ, ಬೆಂಗಳೂರು.59, (samyak pratishthanam@gmail.com) ಮಾಹಿತಿಗೆ: 8310030121ಗೆ ಸಂಪರ್ಕಿಸಿ.


ಸುಧಾ ಮಯೂರ ಓದಿರಿ

ಬಿಬಿಎಂಪಿ: 7 ತ್ಯಾಜ್ಯ ಸಂಸ್ಕರಣೆ ಘಟಕ ಕಾರ್ಯಾರಂಭ ● ವಾಸನೆ ನಿವಾರಣೆಗೆ ಹೊಸ ಯತ್ನ

# ನೈಸರ್ಗಿಕ ಅನಿಲ ಉತ್ಪಾದನೆಗೆ ಹೆಜ್ಜೆ

● ಆರ್. ಮಂಜುನಾಥ್

**ಬೆಂಗಳೂರು:** ತ್ಯಾಜ್ಯ ಸಂಸ್ಕರಣೆ ಘಟಕಗಳನ್ನು ಸಂಪೂರ್ಣ ಸಾಮರ್ಥ್ಯದಲ್ಲಿ ಕಾರ್ಯಾಚರಣೆ ಆರಂಭಿಸಲು ಬಿಬಿಎಂಪಿ ಮುಂದಾಗಿದೆ. ಇದರೊಂದಿಗೆ, ವಾಸನೆ ಸಮಸ್ಯೆ ನಿವಾರಿಸಲು ನೈಸರ್ಗಿಕ ಅನಿಲ (ಸಿಎನ್‌ಜಿ) ಉತ್ಪಾದಿಸಲೂ ಚಿಂತನೆ ನಡೆಸಿದೆ.

ನಗರದಲ್ಲಿ ತ್ಯಾಜ್ಯ ಸಂಸ್ಕರಣೆ ಅತ್ಯಂತ ಸಮಸ್ಯೆಯನ್ನು ಉಂಟು ಮಾಡಿದ್ದು, ಹೈಕೋರ್ಟ್ ನಿರ್ದೇಶನದಂತೆ ಏಳು ಘಟಕಗಳಲ್ಲೂ ಹಸಿ ತ್ಯಾಜ್ಯ ಸಂಸ್ಕರಣೆಯನ್ನು ಬಿಬಿಎಂಪಿ ಮುಂದಿನ ವಾರದಿಂದ ಪೂರ್ಣ ಸಾಮರ್ಥ್ಯದಲ್ಲಿ ಕೈಗೊಳ್ಳಲಿದೆ.

ಪ್ರತಿನಿತ್ಯ ಸುಮಾರು 2700 ಮೆಟ್ರಿಕ್ ಟನ್ ಹಸಿ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಸ್ಥಳೀಯರ ವಿರೋಧ, ಜನಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿ ಬೇರೆಯವರ ಕಸ ತರಬೇಡಿ ಎಂದು ಒತ್ತಾಯಿಸುತ್ತಿದ್ದಾರೆ. ಚುನಾವಣೆ ಸಂದರ್ಭದಲ್ಲಿ 8 ಘಟಕಗಳಲ್ಲಿ ಮೂರು ಘಟಕಗಳು ಮುಚ್ಚಿದ್ದವು. ಮುಂದಿನ ಎರಡು ವಾರದಲ್ಲಿ ಎಲ್ಲ ಘಟಕಗಳೂ ಕಾರ್ಯಾರಂಭಿಸಬೇಕು ಎಂದು ಸಂಬಂಧಿಸಿದ ಜಂಟಿ ಆಯುಕ್ತರಿಗೆ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತರು ಸೂಚನೆ ನೀಡಿದ್ದಾರೆ.

ಸಂಸ್ಕರಣೆ ಘಟಕಗಳಲ್ಲಿ ಇದೀಗ ಸುಮಾರು 1000 ಮೆಟ್ರಿಕ್ ಟನ್‌ನಷ್ಟು ಹಸಿ ಕಸ ಮಾತ್ರ ಸಂಸ್ಕರಿಸಲಾಗುತ್ತಿದೆ.ಉಳಿದದ್ದು ಮಿಶ್ರ ಕಸವಾಗಿ ಭೂಭರ್ತಿಯಾಗುತ್ತಿದೆ. ಇದನ್ನು ಬಹುತೇಕ ನಿಲ್ಲಿಸಬೇಕೆಂಬ ಉದ್ದೇಶದಿಂದ ಸಂಸ್ಕರಣೆ ಘಟಕಗಳನ್ನು ಆರಂಭಿಸಲಾಗುತ್ತಿದೆ. ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭವಾದರೆ ಇದರಿಂದ ಸುಮಾರು 2200 ಮೆಟ್ರಿಕ್ ಟನ್‌ಗೂ ಹೆಚ್ಚಿನ ಹಸಿ ಕಸವನ್ನು ಸಂಸ್ಕರಿಸಬಹುದಾಗಿದೆ.

**ಸಿಎನ್‌ಜಿ ಉತ್ಪಾದನೆ:** ಏಳೂ ಸಂಸ್ಕರಣೆ ಘಟಕಗಳು ಪ್ರಾರಂಭವಾದರೆ, ವಾಸನೆ ಖಚಿತ. ಹಸಿ ಕಸ ಗೊಬ್ಬರವಾಗಲು 40 ದಿನ ಬೇಕಾಗುತ್ತದೆ. ಇದರಿಂದ ಕೆಲವು ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಆದ್ದರಿಂದ ಈ ಘಟಕಗಳನ್ನೇ ನೈಸರ್ಗಿಕ ಅನಿಲ (ಸಿಎನ್‌ಜಿ) ಉತ್ಪಾದನೆ ಘಟಕಗಳನ್ನಾಗಿ ಪರಿವರ್ತಿಸಲು ಬಿಬಿಎಂಪಿ ಯೋಜಿಸಿದೆ.

ಸಂಸ್ಕರಣೆ ಘಟಕಗಳು ಈಗಿನ ಪರಿಸ್ಥಿತಿಯಲ್ಲಿ ಅವುಗಳಿಗೆ ನಿಗದಿಪಡಿಸಿರುವ ಸಂಪೂರ್ಣ ಸಾಮರ್ಥ್ಯದಲ್ಲಿ ಸಂಸ್ಕರಣೆ ಮಾಡಲು ಸಾಧ್ಯವಿಲ್ಲ. ಯಂತ್ರಗಳು ತಮ್ಮ ಸಾಮರ್ಥ್ಯಗಳನ್ನು ಕಳೆದುಕೊಳ್ಳುತ್ತಿವೆ. ಶೇ 70ರಷ್ಟು ಸಂಸ್ಕರಣೆ ಮಾತ್ರ ಸಾಧ್ಯವಾಗುತ್ತಿದೆ. ಹೀಗಾಗಿ, ಈ ಘಟಕಗಳಲ್ಲಿ ಸಿಎನ್‌ಜಿ ಉತ್ಪಾದನೆ ಮಾಡಲು ಯೋಜನೆ ರೂಪಿಸಲಾಗಿದೆ. ಇದರಿಂದ ವಾಸನೆ ಸೇರಿದಂತೆ ಈಗ ಅನುಭವಿಸುತ್ತಿರುವ ಎಲ್ಲ ಸಮಸ್ಯೆಗಳೂ ನಿವಾರಣೆಯಾಗುತ್ತವೆ. ಅಲ್ಲದೆ, ಸಿಎನ್‌ಜಿಗೆ ಹೆಚ್ಚಿನ ಮೌಲ್ಯ ಇರುವುದರಿಂದ ಪಾಲಿಕೆಗೆ ಆರ್ಥಿಕವಾಗಿ ಲಾಭವೂ ಆಗಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಮಂಡೂರಿನಲ್ಲಿ 'ಗೇಲ್ ಇಂಡಿಯಾ' ಸಂಸ್ಥೆ 300 ಮೆಟ್ರಿಕ್ ಟನ್ ಸಾಮರ್ಥ್ಯ ಹಸಿ ತ್ಯಾಜ್ಯದಿಂದ ಸಿಎನ್‌ಜಿ ಉತ್ಪಾದಿಸುವ ಘಟಕವನ್ನು ನಿರ್ಮಿಸಿದೆ. ಮುಂದಿನ ಕೆಲವು ವಾರಗಳಲ್ಲಿ ಇದು ಕಾರ್ಯಾರಂಭಿಸಲಿದೆ ಎಂದು ಹೇಳಿದರು.

ತ್ಯಾಜ್ಯ ಸಂಸ್ಕರಣೆ ಘಟಕದಲ್ಲಿ ಹಸಿ ಕಸ ವಿಲೇವಾರಿ

## ಕಸ ಇಲ್ಲಿಗೆ ತರಬೇಡಿ: ಶಾಸಕರ ಪತ್ರ

'ಯಶವಂತಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ದೊಡ್ಡಬಿದರಕಲ್ಲು, ಕನ್ನಳ್ಳಿ, ಸೀಗೇಹಳ್ಳಿ ಸಂಸ್ಕರಣೆ ಘಟಕಗಳು ಸೇರಿದಂತೆ ಕುಂಬಳಗೋಡು, ಬನಶಂಕರಿ 6ನೇ ಹಂತದಲ್ಲಿ ನಗರದ ಇತರೆ ಪ್ರದೇಶದ ತ್ಯಾಜ್ಯ ವಿಲೇವಾರಿ ಮಾಡಬಾರದು. ಇವುಗಳನ್ನು ಸಂಪೂರ್ಣವಾಗಿ ಮುಚ್ಚಬೇಕು. ವಾರ್ಡ್‌ವಾರು ಹಾಗೂ ವಿಧಾನಸಭೆ ಕ್ಷೇತ್ರವಾರು ಸಂಸ್ಕರಣ ಘಟಕಗಳನ್ನು ಸ್ಥಾಪಿಸಬೇಕು' ಎಂದು ಶಾಸಕ ಎಸ್.ಟಿ. ಸೋಮಶೇಖರ್ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

'ನಗರದ ಶಾಸಕರು ತಮ್ಮ ಕ್ಷೇತ್ರದ ಘಟಕಗಳಿಗೆ ಇತರೆ ಕಸ ಬರಬಾರದು ಎಂದು ಹೇಳಿದರೆ ಸಂಸ್ಕರಣೆ ಸಾಧ್ಯವಾಗುವುದಿಲ್ಲ. ಹೈಕೋರ್ಟ್ ಇದನ್ನು ಒಪ್ಪುವುದಿಲ್ಲ. ಹೀಗಾಗಿ ಎಲ್ಲ ತ್ಯಾಜ್ಯ ಸಂಸ್ಕರಣೆ ಘಟಕಗಳನ್ನೂ ಆರಂಭಿಸಲಾಗುವುದು' ಎಂದು ಹರೀಶ್ ತಿಳಿಸಿದರು.

## ಜಂಟಿ ಆಯುಕ್ತರಿಗೆ ಜವಾಬ್ದಾರಿ!

'ಸೀಗೇಹಳ್ಳಿ ಹಾಗೂ ಸುಬ್ರಾಯಪಾಳ್ಯ ಸಂಸ್ಕರಣೆ ಘಟಕಗಳು ಕೆಲವು ವರ್ಷದಿಂದ ಕಾರ್ಯನಿರ್ವಹಿಸದೆ ಯಂತ್ರಗಳು ಹಾಳಾಗಿವೆ. ಅವುಗಳನ್ನು ದುರಸ್ತಿಪಡಿಸಿ, ಮುಂದಿನ ಎರಡು ವಾರಗಳಲ್ಲಿ ಸಂಪೂರ್ಣವಾಗಿ ಕಾರ್ಯಾರಂಭಿಸಲು ಸೂಚಿಸಲಾಗಿದೆ. ಹೈಕೋರ್ಟ್ ಆದೇಶವಿರುವುದರಿಂದ ನಾವು ಹಸಿ ಕಸವನ್ನು ಸಂಸ್ಕರಿಸಲೇಬೇಕಿದೆ. ಜಂಟಿ ಆಯುಕ್ತರಿಗೆ ಎಲ್ಲ ಅಧಿಕಾರ ನೀಡಿದ್ದು, ಅವರೇ ಹೈಕೋರ್ಟ್ ಮಾಹಿತಿಯನ್ನೂ ನೀಡಬೇಕಾಗಿರುತ್ತದೆ. ಹೀಗಾಗಿ ಕೂಡಲೇ ಎಲ್ಲ ಸಂಸ್ಕರಣೆ ಘಟಕಗಳು ಕಾರ್ಯಾರಂಭ ಮಾಡುತ್ತವೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ ಎಲ್ಲ ಘಟಕ ಆರಂಭಿಸಲು ಸೂಚಿಸಿದ್ದಾರೆ' ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್‌ಕುಮಾರ್ ತಿಳಿಸಿದರು.

| ಸಂಸ್ಕರಣೆ ಘಟಕ | ಒಟ್ಟು ಸಾಮರ್ಥ್ಯ (ಟನ್/ಪ್ರತಿದಿನ) | ಹಸಿ ತ್ಯಾಜ್ಯ ಸಾಮರ್ಥ್ಯ (ಟನ್/ಪ್ರತಿದಿನ) | ಪ್ರಸ್ತುತ ಸಂಸ್ಕರಣೆ (ಟನ್/ಪ್ರತಿದಿನ) |
|---|---|---|---|
| ಚಿಕ್ಕನಾಗಮಂಗಲ | 500 | 350 | 300 |
| ದೊಡ್ಡಬಿದರಕಲ್ಲು | 200 | 150 | 130 |
| ಕನ್ನಳ್ಳಿ | 500 | 350 | 225 |
| ಕೆಸಿಡಿಸಿ, ಬೊಮ್ಮನಹಳ್ಳಿ | 500 | 350 | 150 |
| ಲಿಂಗಧೀರನಹಳ್ಳಿ | 200 | 150 | 50 |
| ಸೀಗೇಹಳ್ಳಿ | 200 | 120 | - |
| ಸುಬ್ಬರಾಯನಪಾಳ್ಯ | 200 | 150 | - |
| ಎಂಎಸ್‌ಜಿಪಿ ಇನ್‌ಫ್ರಾಟೆಕ್ (ಖಾಸಗಿ) | 750 | 500 | 500 |

**5,200** ಮೆಟ್ರಿಕ್ ಟನ್ ನಗರದಲ್ಲಿ ಪ್ರತಿನಿತ್ಯ ಸಂಗ್ರಹವಾಗುವ ತ್ಯಾಜ್ಯ

**1,000** ಮೆಟ್ರಿಕ್ ಟನ್ ಬೃಹತ್ ಪ್ರಮಾಣದ ಕಸ

**4,200** ಮೆಟ್ರಿಕ್ ಟನ್ ಗೃಹ ತ್ಯಾಜ್ಯ

**2,700** ಮೆಟ್ರಿಕ್ ಟನ್ ಹಸಿ ತ್ಯಾಜ್ಯ

## ವಿಪಕ್ಷನಾಯಕನ ಪಟ್ಟ ಯಾರಿಗೆ?

**ಬೆಂಗಳೂರು:** ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ವಿರೋಧ ಪಕ್ಷ ನಾಯಕ ಇಲ್ಲದೇ ಇರುವುದು ಅಧಿಕೃತ ವಿರೋಧ ಪಕ್ಷ ಬಿಜೆಪಿಗೆ ಮುಜುಗರ ಉಂಟು ಮಾಡಿದೆ.

ಚುನಾವಣೆ ಮುಗಿದು, ಸರ್ಕಾರ ರಚನೆಯಾಗಿ ಬಜೆಟ್ ಅಧಿವೇಶನಕ್ಕೆ ಸಜ್ಜಾಗುತ್ತಿರುವ ಸಂದರ್ಭದಲ್ಲೂ ಬಿಜೆಪಿ ವಿರೋಧ ಪಕ್ಷ ನಾಯಕನನ್ನು ಆಯ್ಕೆ ಮಾಡಿಲ್ಲ. ಇಂತಹದ್ದೊಂದು ಸ್ಥಿತಿ ಇತ್ತೀಚಿನ ವರ್ಷಗಳಲ್ಲಿ ನಡೆದಿಲ್ಲ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗಿದೆ.

ಈ ಕುರಿತು ಸ್ಪಷ್ಟನೆ ನೀಡಿರುವ ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ 'ಸೋಮವಾರವೇ ಸರ್ವ ಸಮ್ಮತವಾಗಿ ವಿರೋಧ ಪಕ್ಷದ ನಾಯಕನ ಆಯ್ಕೆ ಆಗುತ್ತದೆ' ಎಂದು ಹೇಳಿದ್ದಾರೆ.

**ವಿಧಾನಪರಿಷತ್ತಿನಲ್ಲೂ ಗೊಂದಲ:** ವಿಧಾನಪರಿಷತ್‌ನಲ್ಲೂ ವಿರೋಧ ಪಕ್ಷದ ನಾಯಕನ ಆಯ್ಕೆ ಆಗಬೇಕು. ಈ ಬಾರಿ ಕೋಟ ಶ್ರೀನಿವಾಸಪೂಜಾರಿ ಬಿಟ್ಟು ಬೇರೆಯವರಿಗೆ ಅದರಲ್ಲೂ ಉತ್ತರಕರ್ನಾಟಕ ಭಾಗದವರಿಗೆ ನೀಡಬೇಕು ಎಂಬ ಒತ್ತಾಯ ಕೇಳಿ ಬಂದಿದೆ.

ಶ್ರೀನಿವಾಸ ಪೂಜಾರಿ ಅವರು ಸತತ 10 ವರ್ಷಗಳಿಂದ ವಿರೋಧ ಪಕ್ಷ ನಾಯಕ ಮತ್ತು ಸಭಾನಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ. ಬೇರೆಯವರಿಗೆ ಅವಕಾಶ ಕೊಡಬೇಕು. ಸದನದಲ್ಲಿ ಸಾಕಷ್ಟು ಹಿರಿಯರು ಇದ್ದಾರೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಈ ಮಧ್ಯೆ ವಿಧಾನಪರಿಷತ್ ಸದಸ್ಯ ಶಶಿಲ್ ನಮೋಶಿ ಅವರು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಈ ಬಾರಿ ಉತ್ತರ ಕರ್ನಾಟಕದವರಿಗೆ ಆದ್ಯತೆ ನೀಡಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

2 ಸದನಗಳಲ್ಲಿ ವಿರೋಧಪಕ್ಷದ ನಾಯಕರಲ್ಲದೇ, ಉಪನಾಯಕರು, ಸಚೇತಕರನ್ನೂ ನೇಮಿಸಬೇಕಾಗಿದೆ.

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy



ಆಕೃತಿ ಪುಸ್ತಕ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಮರೇಂದ್ರ ಹೊಲ್ಲಂಬಳ್ಳಿ ಅವರ 'ಬಣ್ಣದ ನೆರಳು' ಹಾಗೂ 'ಚಂದ್ರಗುಪ್ತ' ಪುಸ್ತಕಗಳನ್ನು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಬಿಡುಗಡೆಗೊಳಿಸಿದರು

## 'ಬಣ್ಣದ ನೆರಳು', 'ಚಂದ್ರಗುಪ್ತ' ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಲೇಖಕನೊಬ್ಬ ಸಮಾಜದಲ್ಲಿನ ವಿದ್ಯಮಾನಗಳಿಗೆ ಸೂಕ್ಷ್ಮವಾಗಿ ಸ್ಪಂದಿಸಬೇಕು' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ನಗರದ ಭಾನುವಾರ ಆಕೃತಿ ಪುಸ್ತಕ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಮರೇಂದ್ರ ಹೊಲ್ಲಂಬಳ್ಳಿ ಅವರ 'ಬಣ್ಣದ ನೆರಳು' ಹಾಗೂ 'ಚಂದ್ರಗುಪ್ತ' ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಸಾಮಾಜಿಕ ಹೊಣೆಗಾರಿಕೆಯನ್ನು ಹೇಗೆ ಬರಹದ ಜೀವವಾಗಿ ತರಬೇಕು ಎನ್ನುವುದಕ್ಕೆ ಅಮರೇಂದ್ರ ಹೊಲ್ಲಂಬಳ್ಳಿ ಅವರ ಬಣ್ಣದ ನೆರಳು ಕಥಾಸಂಕಲನ ಹಾಗೂ ಚಂದ್ರಗುಪ್ತ ನಾಟಕದ ವಸ್ತು ನಿರ್ವಹಣೆ ಉತ್ತಮ ನಿದರ್ಶನ' ಎಂದು ಪ್ರತಿಪಾದಿಸಿದರು.

ಅಮರೇಂದ್ರ ಹೊಲ್ಲಂಬಳ್ಳಿ ಅವರ ಬಣ್ಣದ ನೆರಳು ಕಥಾ-ಸಂಕಲನ ಕುರಿತು ಮಾತನಾಡಿದ ಲೇಖಕಿ ಅಕ್ಷತಾ ಹುಂಚದಕಟ್ಟೆ, 'ಸಂಕಲನದ ಒಂದೊಂದು ಕತೆಯೂ ಬದುಕಿನ ಒಂದೊಂದು ವಿಶಿಷ್ಟ ಚಿತ್ರವನ್ನು ಕೊಡುತ್ತದೆ. ಎಲ್ಲ ಕತೆಗಳೂ ಮನುಷ್ಯನ ಬದುಕಿನ ತಲ್ಲಣಗಳನ್ನು ಅತ್ಯಂತ ಸೂಕ್ಷ್ಮವಾಗಿ ದಾಖಲಿಸಿವೆ' ಎಂದರು

'ಅಮರೇಂದ್ರರ ಚಂದ್ರಗುಪ್ತ ನಾಟಕವು ಚರಿತ್ರೆಯನ್ನು ಹೊಸ ನೆಲೆಯಲ್ಲಿ ಕಾಣಲು ಯತ್ನಿಸುವ ಕೃತಿಯಾಗಿದೆ. ಸಮಕಾಲೀನ ಸಾಮಾಜಿಕ, ರಾಜಕೀಯ ವಿದ್ಯಮಾನಗಳನ್ನು ಯಶಸ್ವಿಯಾಗಿ ಈ ನಾಟಕದಲ್ಲಿ ಕಟ್ಟಿಕೊಡಲಾಗಿದೆ' ಎಂದು ವಿಮರ್ಶಕ ಹುಲಿಕುಂಟೆ ಮೂರ್ತಿ ಅವರು ಹೇಳಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್. ಸುದರ್ಶನ, 'ಕನ್ನಡ ಸಂಸ್ಕೃತಿಗೆ ಎಲ್ಲವನ್ನೂ ಒಳಗೊಳ್ಳುವ ತಾಯಿ ಗುಣವಿದೆ. ಕನ್ನಡ ಸಾಹಿತ್ಯ ಪರಂಪರೆ ಅದನ್ನು ಅಷ್ಟೇ ಜತನದಿಂದ ಮುಂದುವರಿಸಿಕೊಂಡು ಬಂದಿದೆ. ಅಂತಹ ತಾಯಿಗುಣದ ಪರಂಪರೆಗೆ ಅಮರೇಂದ್ರ ಹೊಲ್ಲಂಬಳ್ಳಿಯವರ ಕೃತಿಗಳು ಸಾರ್ಥಕ ಸೇರ್ಪಡೆಯಾಗಿವೆ ಎಂದು ಅವರು ಹೇಳಿದರು.

ಅಮರೇಂದ್ರ ಹೊಲ್ಲಂಬಳ್ಳಿ, ಪ್ರಕಾಶಕರಾದ ಗುರುಪ್ರಸಾದ್ ಇದ್ದರು.

ಬಿಡದಿ ಸಮೀಪದ ವಂಡರ್ ಲಾ ರೆಸಾರ್ಟ್‌ನಲ್ಲಿ ಲಾನ್ ತಾಣವನ್ನು ನಟಿ ಅದಿತಿ ಪ್ರಭುದೇವ ಉದ್ಘಾಟಿಸಿದರು. ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ. ಚಿಟ್ಟಿಲಪ್ಪಿಲ್ಲಿ ಇದ್ದರು.

## ವಂಡರ್ ಲಾ ರೆಸಾರ್ಟ್‌ನಲ್ಲಿ ನಾಲ್ಕು ಹೊಸ ತಾಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಡದಿ ಸಮೀಪದ ವಂಡರ್‌ಲಾ ರೆಸಾರ್ಟ್‌ನಲ್ಲಿ ಗ್ರಾಹಕರಿಗೆ ನಾಲ್ಕು ಹೊಸ ತಾಣಗಳನ್ನು ಪರಿಚಯಿಸಲಾಗಿದ್ದು, ಆ ತಾಣಗಳನ್ನು ನಟಿ ಅದಿತಿ ಪ್ರಭುದೇವ ಹಾಗೂ ವಂಡರ್‌ಲಾ ಹಾಲಿಡೇಸ್‌ನ ವ್ಯವಸ್ಥಾಪಕ ಅರುಣ್ ಕೆ. ಚಿಟ್ಟಿಲಪ್ಪಿಲ್ಲಿ ಅವರು ಉದ್ಘಾಟಿಸಿದರು.

ಅರುಣ್ ಕೆ. ಚಿಟ್ಟಿಲಪ್ಪಿಲ್ಲಿ ಮಾತನಾಡಿ, 'ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ದಿನವಿಡೀ ಆಟವಾಡಿ ಈಜುಕೊಳದ ಪಕ್ಕದಲ್ಲೇ ಬಂದು ಸಂಭ್ರಮಿಸಬಹುದು. ಅದಕ್ಕೆ ವಿಶೇಷ ತಾಣ ನಿರ್ಮಿಸಲಾಗಿದೆ. ಕೆರಿಬಿಯನ್ ವರ್ಲ್ಡ್ ಪರಿಚಯಿಸಲಾಗಿದೆ' ಎಂದರು.

'ರೆಸಾರ್ಟ್ ಆವರಣದ ಒಳಗೇ ಹೊಸ ವಾಟರ್ ಸ್ಲೈಡ್ ರೈಡ್ ಇದೆ. ಇಲ್ಲಿ ಎಲ್ಲ ವಯಸ್ಸಿನವರೂ ಸುರಕ್ಷಿತ ಹಾಗೂ ಆನಂದದಾಯಕವಾಗಿ ಆಟವಾಡಬಹುದಾಗಿದೆ. ಗ್ರಾಹಕರಿಗೆ ಹೊಸ ಅನುಭೂತಿ ನೀಡಲಿದೆ. ಅಲ್ಲದೇ ಸುಂದರ ಲಾನ್ ತಾಣ ನಿರ್ಮಿಸಲಾಗಿದೆ. ಇಲ್ಲಿ ಮದುವೆ, ಕಂಪನಿಗಳ ಸಮಾರಂಭಗಳು, ದೊಡ್ಡ ಪಾರ್ಟಿಗಳನ್ನು ಆಯೋಜಿಸಬಹುದು. 4 ಸಾವಿರ ಜನರು ಸೇರುವ ಸಾಮರ್ಥ್ಯವಿದೆ' ಎಂದು ಮಾಹಿತಿ ನೀಡಿದರು.

ಅದಿತಿ ಪ್ರಭುದೇವ್ ಮಾತನಾಡಿ, 'ನಾಲ್ಕು ಹೊಸ ತಾಣಗಳ ವಿಶ್ರಾಂತಿ, ಉಲ್ಲಾಸ ನೀಡಲಿವೆ. ಬೆಂಗಳೂರಿನಲ್ಲಿ ಮೊದಲ ವಾಟರ್ ಸ್ಲೈಡ್ ರೈಡ್ ಅನ್ನು ರೆಸಾರ್ಟ್‌ನಲ್ಲಿ ಪರಿಚಯಿಸಲಾಗಿದೆ. ಇಲ್ಲಿಗೆ ಬಂದವರಿಗೆ ಮರೆಯಲಾಗದ ಅನುಭವ ಸಿಗಲಿದೆ' ಎಂದು ಹೇಳಿದರು.

ಐಎಫ್‌ಎಸ್ ಅಧಿಕಾರಿ ಶ್ರೀನಿವಾಸುಲು ಕಳವಳ

# 'ಕಲುಷಿತಗೊಳ್ಳುತ್ತಿದೆ ವಾತಾವರಣ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬದಲಾದ ಪರಿಸ್ಥಿತಿಯಲ್ಲಿ ಇಡೀ ವಾತಾವರಣ ಕಲುಷಿತಗೊಳ್ಳುತ್ತಿದೆ. ದಿನನಿತ್ಯ ನಾವು ಬಳಸುವ ತರಕಾರಿಗಳೂ ವಿಷಕಾರಿಯಾಗುತ್ತಿವೆ' ಎಂದು ಐಎಫ್‌ಎಸ್ ಅಧಿಕಾರಿ ಶ್ರೀನಿವಾಸುಲು ಕಳವಳ ವ್ಯಕ್ತಪಡಿಸಿದರು.

ಬೆನಕ ಬುಕ್ಸ್ ಬ್ಯಾಂಕ್ ಹಾಗೂ ಎಲ್.ಬಿ.ಎಸ್ ಪ್ರಕಾಶನ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತಿ ಹೆಗಡೆ ಅವರ 'ಪಂಚಮವೇದ' ಹಾಗೂ ಹರ್ಷ ಡಿ.ಎನ್. ಅವರ 'ವೇದ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಮಾರುಕಟ್ಟೆಯಲ್ಲಿ ಸಿಗುವ ರಾಸಾಯನಿಕ ಪೋಷಿತ ತರಕಾರಿಗಳು ಅನಾರೋಗ್ಯಕ್ಕೆ ಆಹ್ವಾನ ನೀಡುವ ಸಾಧ್ಯತೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಸಾವಯವ ವಿಧಾನದ ಮೂಲಕ ಸ್ವಯಂ ಕೃಷಿಯತ್ತ ಹೊರಳಬೇಕು. ಈ ವಿಧಾನದ ಮೂಲಕ ಬೆಳೆದ ಬೆಳೆಗಳು ಆರೋಗ್ಯ ವೃದ್ಧಿಗೆ ಪೂರಕವಾಗಿರುತ್ತವೆ. ಇದರಿಂದ ಪರಿಸರವನ್ನೂ ರಾಸಾಯನಿಕದಿಂದ ಮುಕ್ತಗೊಳಿಸಲು ಬೆಂಬಲ ಸಿಗುತ್ತದೆ' ಎಂದು ಹೇಳಿದರು.

ಶಿವಮೊಗ್ಗದ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಆರ್.ಸಿ. ಜಗದೀಶ, 'ಕೃಷಿ ವಿಶ್ವವಿದ್ಯಾಲಯಗಳ ಪಠ್ಯಗಳಲ್ಲಿ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಸಿಗಬೇಕು. ಇಲ್ಲವಾದಲ್ಲಿ ಕೃಷಿ ಕ್ಷೇತ್ರದ ವಾಸ್ತವ ವಿದ್ಯಾರ್ಥಿಗಳಿಗೆ ಪರಿಚಯ ಆಗುವುದಿಲ್ಲ. ವೇದಾ ಮನೋಹರ್ ಅವರು ತಾವು ವಾಸವಿರುವ ಪ್ರದೇಶದಲ್ಲಿ ಸಾವಯವ ಕೃಷಿಯನ್ನು ಪ್ರಯೋಗ ಶಾಲೆಯಂತೆ ರೂಪಿಸಿದ್ದಾರೆ. ಹೀಗಾಗಿ, ನಮ್ಮಲ್ಲಿನ ವಿದ್ಯಾರ್ಥಿಗಳನ್ನೂ ಅವರ ತೋಟಗಳಿಗೆ ಕರೆದೊಯ್ಯಲಾಗುತ್ತದೆ. ಕೃಷಿ ಭೂಮಿಯಲ್ಲಿ ಕೆಲಸ ಮಾಡಿ, ಯಶಸ್ಸು ಸಾಧಿಸಿದವರು ನಿಜವಾದ ಸಾಧಕರು. ಅಂತಹವರ ಕುರಿತ ಪುಸ್ತಕ ವಿದ್ಯಾರ್ಥಿಗಳಿಗೆ ಪಠ್ಯವಾಗಬೇಕು' ಎಂದರು.

ಸಾಹಿತಿ ಕಮಲಾ ಹಂಪನಾ, 'ವೇದಾ ಮನೋಹರ ಅವರು ಭದ್ರಾವತಿ ಸಮೀಪ ತಮ್ಮ ಶ್ರಮದಿಂದ ಒಂದು ತೋಟ ಮಾಡಿ, ಅನೇಕ ಕನಸುಗಳನ್ನು ಬಿತ್ತಿ ಬೆಳೆಯುತ್ತಿದ್ದಾರೆ. ಇವರು ಇತರರನ್ನು ಕಾರ್ಯತತ್ಪರನ್ನಾಗಿ ಮಾಡಿ, ದುಡಿದು ಉಣ್ಣುವ ದಾರಿಯನ್ನು ತೋರಿಸುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೇಖಕಿ ಭಾರತಿ ಹೆಗಡೆ, 'ಕನ್ನಡದಲ್ಲಿ ಆತ್ಮಕಥನಗಳು ಕಡಿಮೆ ಸಂಖ್ಯೆಯಲ್ಲಿವೆ. ಅದರಲ್ಲೂ ಮಹಿಳೆಯರ ಆತ್ಮಕಥನಗಳು ನಿರೀಕ್ಷಿತ ಪ್ರಮಾಣದಲ್ಲಿಲ್ಲ. ಮಹಿಳೆಯರ ಆತ್ಮಕಥನ ಕಟ್ಟಿಕೊಡುವುದು ಅಪರೂಪದ ಕೆಲಸವಾಗಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀನಿವಾಸುಲು (ಎಡದಿಂದ ಮೂರನೆಯವರು) ಅವರು 'ಪಂಚಮವೇದ' ಮತ್ತು 'ವೇದ' ಪುಸ್ತಕವನ್ನು ಬಿಡುಗಡೆ ಮಾಡಿದರು. (ಎಡದಿಂದ) ಲೇಖಕ ಹರ್ಷ.ಡಿ.ಎನ್, ಆರ್.ಸಿ. ಜಗದೀಶ, ಕಮಲಾ ಹಂಪನಾ, ವೇದಾ ಮನೋಹರ ಮಸ್ಕಿ, 'ಪ್ರಾಫಿಟ್ ಪ್ಲಸ್' ಮಾಸಪತ್ರಿಕೆ ಸಂಪಾದಕಿ ಸುಧಾ ಶರ್ಮ ಚವತ್ತಿ ಮತ್ತು ಲೇಖಕಿ ಭಾರತಿ ಹೆಗಡೆ ಇದ್ದಾರೆ —ಪ್ರಜಾವಾಣಿ ಚಿತ್ರ

## ಹಂಪಿಯಲ್ಲಿ 9ರಿಂದ ಜಿ–20 ಶೃಂಗಸಭೆ

**ಹೊಸಪೇಟೆ (ವಿಜಯನಗರ):** ಜಿ-20 ಮೂರನೇ ಪ್ರಮುಖ (ಶೆರ್ಪಾ) ಸಭೆ ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ ಇದೇ 9ರಿಂದ 16ರ ವರೆಗೆ ನಡೆಯಲಿದ್ದು, ಶೃಂಗಸಭೆಯ ಮುಖ್ಯ ಆಯೋಜಕ (ಶೆರ್ಪಾ) ಅಮಿತಾಭ್ ಕಾಂತ್ ಅವರು ಭಾನುವಾರ ಸಿದ್ಧತೆ ಪರಿಶೀಲಿಸಿದರು.

'20 ಸದಸ್ಯ ರಾಷ್ಟ್ರಗಳು, 9 ಆಹ್ವಾನಿತ ರಾಷ್ಟ್ರಗಳು ಸೇರಿದಂತೆ ಒಟ್ಟು 43 ರಾಷ್ಟ್ರಗಳು ಈ ಸಭೆಯಲ್ಲಿ ಭಾಗವಹಿಸಲಿವೆ. ರಾಜ್ಯ ಪ್ರವಾಸೋದ್ಯಮ ಉನ್ನತೀಕರಣಕ್ಕೆ ಇದು ನೆರವಾಗಲಿದೆ. ಇಲ್ಲಿನ ಕಲೆ, ಸಂಸ್ಕೃತಿ ಜಗದಗಲ ಪ್ರಚುರಗೊಳ್ಳಲಿದೆ. ಸಿರಿಧಾನ್ಯಗಳ ಮಹತ್ವ ಸಾರುವ ಜೊತೆಗೆ ಇವುಗಳ ಜಾಗತಿಕ ಪರಿಚಯ ಹಾಗೂ ಮಾರುಕಟ್ಟೆ ಕಂಡುಕೊಳ್ಳಲು ವಿಪುಲ ಅವಕಾಶ ದೊರೆಯಲಿದೆ' ಎಂದು ಅವರು ಬಳಿಕ ಸುದ್ದಿಗಾರರಿಗೆ ತಿಳಿಸಿದರು.

'ಈಗಾಗಲೇ ರಾಜಸ್ಥಾನದ ಉದಯಪುರ, ಅಸ್ಸಾಮಿನ ಕುಮಾರ್ಗಮ್‌ನಲ್ಲಿ ಶೆರ್ಪಾ ಸಭೆಗಳು ನಡೆದಿವೆ' ಎಂದರು.

## ನಾಟಕ ಪ್ರದರ್ಶನ: ಲಿಮ್ಕಾ ದಾಖಲೆ ಪ್ರಯತ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಂಗಪಯಣ ತಂಡವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜುಲೈ 31ರಂದು ಏಕಕಾಲದಲ್ಲಿ '55 ನಿಮಿಷದ ಒಂದು ಪ್ರೇಮ ಕಥೆ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ. ಈ ಮೂಲಕ ಲಿಮ್ಕಾ ದಾಖಲೆ ನಿರ್ಮಿಸಲು ಮುಂದಾಗಿದೆ.

31 ವೇದಿಕೆಗಳಲ್ಲಿ ನಡೆಯುವ ಈ ನಾಟಕದಲ್ಲಿ, 31 ಕಲಾವಿದರು ಅಭಿನಯಿಸಲಿದ್ದಾರೆ. 'ನಾಟಕದೊಳ್ ಕರ್ನಾಟಕ' ಎಂಬ ಶೀರ್ಷಿಕೆಯಡಿ ರಂಗ ಪ್ರಯೋಗಗಳನ್ನು ತಂಡ ಕೈಗೊಂಡಿದೆ. ಯುವಪೀಳಿಗೆಯನ್ನು ರಂಗಭೂಮಿ ಕಡೆಗೆ ಕರೆತರುವುದು ನಾಟಕ ಪ್ರದರ್ಶನದ ಮುಖ್ಯ ಉದ್ದೇಶವಾಗಿದೆ.

'ಸಂಜೆ 7 ಗಂಟೆಗೆ ಏಕಕಾಲದಲ್ಲಿ ಪ್ರದರ್ಶನ ಪ್ರಾರಂಭವಾಗುತ್ತದೆ. 2015ರಲ್ಲಿ ಬೆಂಗಳೂರಿನ 9 ರಂಗ ಮಂದಿರದಲ್ಲಿ ಇದೇ ನಾಟಕವನ್ನು ಏಕಕಾಲದಲ್ಲಿ ಪ್ರದರ್ಶನ ನೀಡಿ ಲಿಮ್ಕಾ ದಾಖಲೆ ನಿರ್ಮಿಸಿದ್ದೆವು. ಈಗ ರಾಜ್ಯದಾದ್ಯಂತ ಪ್ರದರ್ಶನ ನೀಡಲಾಗುತ್ತಿದೆ. ವಿಶ್ವ ರಂಗಭೂಮಿಯಲ್ಲಿ ಈ ರೀತಿಯ ಪ್ರಯತ್ನ ನಡೆದಿಲ್ಲ. ಈ ದಾಖಲೆ ಪಯತ್ನಕ್ಕೆ ಅರ್ಜಿ ಸಲ್ಲಿಸಿದ್ದು, ಅನುಮೋದನೆ ದೊರೆತಿದೆ. ಗಿನ್ನಿಸ್ ದಾಖಲೆಗೂ ಅರ್ಜಿ ಸಲ್ಲಿಸಲಾಗಿದೆ. ಅವರಿಂದ ಅನುಮೋದನೆ ನಿರೀಕ್ಷೆಯಲ್ಲಿದ್ದೇವೆ' ಎಂದು ರಂಗಪಯಣ ತಂಡದ ನಯನಾ ಸೂಡ ತಿಳಿಸಿದರು.

'ನಮ್ಮ ದಾಖಲೆಯನ್ನು ನಾವೇ ಮುರಿಯುತ್ತಿದ್ದೇವೆ. ಯುವಜನರನ್ನು ರಂಗಭೂಮಿಯತ್ತ ಆಕರ್ಷಿಸುವುದು ಈ ಪ್ರದರ್ಶನದ ಮುಖ್ಯ ಉದ್ದೇಶ. 8 ಜನರಲ್ಲಿ ಪ್ರಾರಂಭವಾದ ತಂಡ ಇದೀಗ 60ಕ್ಕೂ ಹೆಚ್ಚು ಕಲಾವಿದರನ್ನು ಒಳಗೊಂಡಿದ್ದು, ಸಾಮಾಜಿಕ ನಾಟಕಗಳನ್ನು ಹೆಚ್ಚಾಗಿ ಪ್ರಯೋಗಿಸಲಾಗುತ್ತಿದೆ' ಎಂದು ಅವರು ಹೇಳಿದರು.

## ರಾಷ್ಟ್ರಪತಿಯೊಂದಿಗೆ ಸಂವಾದ ಇಂದು

**ಬೆಂಗಳೂರು:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರು, ಚಾಮರಾಜನಗರ, ಕೊಡಗು, ಉಡುಪಿ, ದಕ್ಷಿಣ ಕನ್ನಡ, ಜಿಲ್ಲೆಗಳ ಬುಡಕಟ್ಟು ಸಮುದಾಯಗಳ ಜನರೊಂದಿಗೆ ಬೆಂಗಳೂರಿನಲ್ಲಿ ಜುಲೈ 3ರಂದು ಸಂವಾದ ನಡೆಸಲಿದ್ದಾರೆ.

ದ್ರೌಪದಿ ಮುರ್ಮು

ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಂಜೆ 7ರಿಂದ 7.30ರವರೆಗೆ ಸಂವಾದ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಉಪಸ್ಥಿತರಿರುವರು.

ಗುಂಡ್ಲುಪೇಟೆಯ ದೇಶಿಪುರ ಕಾಲೊನಿಯ ಸಿದ್ದಮ್ಮ, ಪುಟ್ಟಮ್ಮ, ಮದ್ದೂರು ಕಾಲೊನಿಯ ಗೋವಿಂದ, ಎಚ್. ಡಿ.ಕೋಟೆಯ ಬಸಮ್ಮ, ರಾಜೇಶ್, ಅಯ್ಯಪ್ಪ, ಭೈರಾ, ಸಿ. ಭಾಸ್ಕರ, ಪುಟ್ಟಬಸವಯ್ಯ, ಹುಣಸೂರಿನ ಜೆ.ಪಿ. ಪಾರ್ವತಿ, ಸುಮಾ, ರಾಜಪ್ಪ, ಸಚಿನ್, ಪಿರಿಯಾಪಟ್ಟಣದ ಜಯಮ್ಮ, ಗೌರಿ, ಲಕ್ಷ್ಮೀ, ಜಾನಕಮ್ಮ, ಬಸವಣ್ಣ, ಬಸಪ್ಪ, ಸರಗೂರಿನ ವಿಜಯ್, ಸೋಮವಾರಪೇಟೆಯ ಜೆ.ಕೆ. ಮುತ್ತಮ್ಮ, ಬಿ.ಕೆ. ಧರ್ಮಪ್ಪ, ಉಡುಪಿ ಜಿಲ್ಲೆಯ ನಳಿನಿ, ಡಾ. ಸಬಿತಾ, ಸುಶೀಲಾ, ಪ್ರಕೃತಿ, ಶಕೀಲಾ, ಸುನಂದಾ, ಕುಡ್ವಾ, ಬಾಬು, ರಮೇಶ್, ಕೊಗ್ಗ, ಅಕ್ಷಯ್, ಕುಮಾರ್, ಸಂಜೀವ ಕೊರಗ, ಕೆ.ಪುತ್ರಯ, ದಕ್ಷಿಣ ಕನ್ನಡ ಜಿಲ್ಲೆಯ ರತ್ನ, ಚಂದ್ರವತಿ, ಶಶಿಕಲಾ, ರಾಧಾ, ಎಂ.ಸುಂದರ್, ಬಾಬು, ಮಥಾಡಿ, ಶ್ಯಾಮ್ ಭಾಗವಹಿಸಲಿದ್ದಾರೆ ಎಂದು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಬಿ. ನಾಗೇಂದ್ರ ತಿಳಿಸಿದ್ದಾರೆ.

## ನಗರದಲ್ಲಿ ಇಂದು

**ದಲಿತ ಹಕ್ಕೊತ್ತಾಯ ರಾಜ್ಯ ಸಮಾವೇಶ:** ಉದ್ಘಾಟನೆ: ಅರವಿಂದ ಮಾಲಗತ್ತಿ, ಅತಿಥಿಗಳು: ಟಿ.ಆರ್. ಚಂದ್ರಶೇಖರ, ಮಾಳಮ್ಮ, ನಾಗರಾಜ್ ಎನ್., ಬಿ. ರಾಜಶೇಖರಮೂರ್ತಿ, ಅಧ್ಯಕ್ಷತೆ: ಗೋಪಾಲಕೃಷ್ಣ ಹರಳಹಳ್ಳಿ, ಆಯೋಜನೆ: ದಲಿತ ಹಕ್ಕುಗಳ ರಾಜ್ಯ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ

**ಅಂತರವರ್ಗೀಯ ಕನ್ನಡ ನಾಟಕ ಸ್ಪರ್ಧೆ 2022–23ರ ಬಹುಮಾನ ವಿತರಣಾ ಸಮಾರಂಭ:** ಅತಿಥಿ: ರಮೇಶ್ ಅರವಿಂದ್, ಅಧ್ಯಕ್ಷತೆ: ಎಚ್. ಎನ್. ಸುಬ್ರಮಣ್ಯ, ಅತಿಥಿಗಳು: ವೈ.ಜಿ. ಮಧುಸೂದನ್, ವಿ. ವೆಂಕಟಶಿವಾರೆಡ್ಡಿ, ಬಿ.ಎಸ್. ಅರುಣ್ ಕುಮಾರ್, ತಲ್ಲಂ ಆರ್. ದ್ವಾರಕನಾಥ್, ವಿ. ಮಂಜುನಾಥ್, ಸುಧಾಕರ್ ಇಸ್ಲೂರಿ, ಪಿ.ಎಲ್. ವೆಂಕಟರಾಮ ರೆಡ್ಡಿ, ಕಲಾಗಂಗೋತ್ರಿ ಕಿಟ್ಟಿ, ರಘು ಟಿ., ಛಾಯಾ ಭಾರ್ಗವಿ ಎಸ್.ಎಚ್., ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ 3.30

**ಶಿವಶರಣ ಹಡಪದ ಅಪ್ಪಣ್ಣ ಜಯಂತಿ:** ಸಾನ್ನಿಧ್ಯ: ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ್ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

**ಅರ್ಪಣೆ ಧ್ವನಿಸಾದ್ರಿಕೆ ಬಿಡುಗಡೆ:** ಇಂಚರ ಪ್ರವೀಣಕುಮಾರ್, ಸಿ.ಡಿ. ಬಿಡುಗಡೆ: ಶ್ರೀಕಂಠ ದೀಕ್ಷಿತ್, ಉಪಸ್ಥಿತಿ: ಆನಂದ್ ಮಾದಲಗೆರೆ, ಮಮತಾ ಆನಂದ್, ಆಯೋಜನೆ: ಇಂಚರ ಸುಗಮಸಂಗೀತ ಸಂಸ್ಥೆ, ಸ್ಥಳ: ಗವಿಗಂಗಾಧರ ದೇವಸ್ಥಾನದ ಆವರಣ, ಸಂಜೆ 6.30

### ಗುರುಪೂರ್ಣಿಮೆ ವಿಶೇಷ

**ಶಿರಡಿ ಸಾಯಿಬಾಬಾರಿಗೆ ಕಾಕಡ ಆರತಿ:** ಕಾಕಡ ಆರತಿ ಬೆಳಿಗ್ಗೆ 6ಕ್ಕೆ, ಅಭಿಷೇಕ 6.30ಕ್ಕೆ, ವಿಶೇಷ ಹೂವಿನ ಅಲಂಕಾರ 8.15ಕ್ಕೆ, ಸಂಗೀತ ಕಾರ್ಯಕ್ರಮ: ಗಾಯನ: ಜಿ.ವೈ. ಪದ್ಮನಾಗರಾಜ್, ಪಿಟೀಲು: ರುದ್ರಾರಾಧ್ಯ, ಮೃದಂಗ: ಶಶಿಕಲಾ, ಬೆಳಿಗ್ಗೆ 10.30ಕ್ಕೆ, ವಿಶೇಷ ಪಂಚಾರತಿ ಮಧ್ಯಾಹ್ನ 12.30ಕ್ಕೆ, ಆಯೋಜನೆ ಮತ್ತು ಸ್ಥಳ: ಶಿರಡಿ ಸಾಯಿಬಾಬು ಮಂದಿರ, ಹೊರವರ್ತುಲ ರಸ್ತೆ, ಲಗ್ಗೆರೆ

**ಗುರುಪೂರ್ಣಿಮೆ ಕಾರ್ಯಕ್ರಮ:** ಕಾಕಡ ಆರತಿ ಬೆಳಿಗ್ಗೆ 6ಕ್ಕೆ, ಗಣಪತಿ ಪೂಜೆ 7ಕ್ಕೆ, ಸಾಯಿಬಾಬಾರಿಗೆ ಪಂಚಾಮೃತ ಅಭಿಷೇಕ 7.30ಕ್ಕೆ, ಮಂಗಳಾರತಿ 9ಕ್ಕೆ, ಸತ್ಯನಾರಾಯಣ ಪೂಜೆ 9.30ಕ್ಕೆ, ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ಸಾಯಿಬಾಬಾರಿಗೆ ಆರತಿ 11.30ಕ್ಕೆ, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸನ್ಮಾನ ಸಮಾರಂಭ ಸಂಜೆ 6ಕ್ಕೆ, ಅತಿಥಿಗಳು: ಡಿ.ಕೆ. ಶಿವಕುಮಾರ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಎನ್. ಚಲುವರಾಯಸ್ವಾಮಿ, ಆಯೋಜನೆ: ಅಮೃತನಗರ ಮಾರಿಯಮ್ಮ ಚಾರಿಟಬಲ್ ಟ್ರಸ್ಟ್, ಆಯೋಜನೆ: ಅಮೃತನಗರ ಮಾರಿಯಮ್ಮ ಚಾರಿಟಬಲ್ ಟ್ರಸ್ಟ್, ಸ್ಥಳ: ಅಮೃತನಗರ

**ಹುಣ್ಣಿಮೆ ಹಾಡು 175:** ಸಂಗೀತ: ಕನ್-ಫ್ಯೂಷನ್ ತಂಡ, ಅತಿಥಿ: ಶೀತಲ್ ಶೆಟ್ಟಿ, ಅಧ್ಯಕ್ಷತೆ: ಬಿ.ಕೆ. ಶಿವರಾಂ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

**ಬೆಂಗಳೂರು:** ಚಕ್ರವರ್ತಿ ಲೇಔಟ್‌ನಲ್ಲಿರುವ ದತ್ತಗುರು ಸದಾನಂದ ಮಹಾರಾಜರ ಆಧ್ಯಾತ್ಮಿಕ ಮತ್ತು ಧ್ಯಾನ ಕೇಂದ್ರದಿಂದ ಸೋಮವಾರ (ಜುಲೈ 3) ಗುರುಪೂರ್ಣಿಮಾ ಮಹೋತ್ಸವ ನಡೆಯಲಿದೆ.

ಸೋಮವಾರ ಬೆಳಿಗ್ಗೆ 7ರಿಂದ ರಾತ್ರಿ 10 ಗಂಟೆಯವರೆಗೆ ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 9.30ಕ್ಕೆ ಶೇಷಾದ್ರಿಪುರ ರಸ್ತೆಯ ಸ್ವಸ್ತಿಕ್ ವೃತ್ತದಲ್ಲಿರುವ ರಾಮ ಮಂದಿರದಿಂದ ದತ್ತಗುರು ಸದಾನಂದ ಮಹಾರಾಜರ ಹೂವಿನ ತೇರಿನ ಮೆರವಣಿಗೆಯನ್ನು ಸಕಲ ಮಂಗಳ ವಾದ್ಯಗಳೊಂದಿಗೆ ದತ್ತಗುರು ಆಶ್ರಮದವರೆಗೆ ಕರೆತರಲಾಗುತ್ತದೆ. ಮಧ್ಯಾಹ್ನ 1ಕ್ಕೆ ಪಾದುಕ ಪೂಜೆ, ಅರ್ಚನೆ, ಆರತಿ ಹಾಗೂ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ಜರುಗಲಿವೆ ಎಂದು ಪ್ರಕಟಣೆ ತಿಳಿಸಿದೆ.

# ಶಿಕ್ಷಣ

## ಬೇಡಿಕೆ ನಿರೀಕ್ಷಿಸಬಹುದಾದ ಉದ್ಯೋಗಗಳು

# ಯಾವ ವೃತ್ತಿ ಯಾವ ಕೋರ್ಸ್?

ಭವಿಷ್ಯದ ವೃತ್ತಿ ಬೇಡಿಕೆಯನ್ನು ಖಚಿತವಾಗಿ ಅಂದಾಜಿಸುವುದು ಕಷ್ಟ. ಆದರೂ ಅನುಭವಾಧಾರಿತವಾಗಿ ಯೋಚಿಸುವುದಾದರೆ, ಎಲ್ಲ ವೃತ್ತಿಗಳಿಗೂ ಬೇಡಿಕೆಯಿರುತ್ತವೆ. ಆದರೆ, ಆರೋಗ್ಯ, ವಿಜ್ಞಾನ–ತಂತ್ರಜ್ಞಾನ, ಮಾರುಕಟ್ಟೆ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹೆಚ್ಚಿನ ವೃತ್ತಿ ಬೇಡಿಕೆಯನ್ನು ನಿರೀಕ್ಷಿಸಬಹುದು.

**ಪ್ರದೀಪ್ ವೆಂಕಟರಾಮ್**

ಇತ್ತೀಚೆಗೆ ವಿದ್ಯಾರ್ಥಿಗಳೊಡನೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಒಂಬತ್ತು ಮತ್ತು ಹತ್ತನೇ ತರಗತಿಯ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆ; 'ಮುಂದಿನ ಹತ್ತು ವರ್ಷಗಳಲ್ಲಿ ಯಾವ ವೃತ್ತಿಗಳು ಹೆಚ್ಚಿನ ಬೇಡಿಕೆಯನ್ನು ಉಳಿಸಿಕೊಂಡಿರುತ್ತವೆ ?'

ಮಕ್ಕಳ ಕುತೂಹಲಕಾರಿ ಪ್ರಶ್ನೆ, ವಿಮರ್ಶಾತ್ಮಕವಾಗಿಯೂ ಇತ್ತು. ಭವಿಷ್ಯದ ಬಗೆಗಿನ ಅವರ ಚಿಂತನೆ, ಸಂವಾದದಲ್ಲಿ ಆರೋಗ್ಯಕರ ಚರ್ಚೆಯನ್ನೂ ಹುಟ್ಟು ಹಾಕಿತು.

ಆದರೆ ಈ ಪ್ರಶ್ನೆಗೆ 'ಇದ ಮಿತ್ತಂ' ಎನ್ನುವಂತೆ ಉತ್ತರಿಸುವುದು ತುಸು ಕಷ್ಟವೇ. ಏಕೆಂದರೆ, ತಂತ್ರಜ್ಞಾನದ ಅಭಿವೃದ್ಧಿ, ಅಲ್ಲಲ್ಲಿ ನಡೆಯುತ್ತಿರುವ ಆವಿಷ್ಕಾರಗಳು, ಗ್ರಾಹಕರ ಆದ್ಯತೆಗಳು, ಜಾಗತಿಕ ಪರಿಸ್ಥಿತಿ, ಸರ್ಕಾರದ ನೀತಿಗಳಲ್ಲಾಗುತ್ತಿರುವ ಬದಲಾವಣೆ.. ಇಂಥ ಹಲವು ಅಂಶಗಳು ಉದ್ಯೋಗ ಕ್ಷೇತ್ರದ ಮೇಲೆ ತುಂಬಾ ಪ್ರಭಾವ ಬೀರುತ್ತಿವೆ. ಈ ಹಿನ್ನೆಲೆಯಲ್ಲಿ ಭವಿಷ್ಯದ ವೃತ್ತಿ ಬೇಡಿಕೆಯನ್ನು ಖಚಿತವಾಗಿ ಅಂದಾಜಿಸುವುದು ಕಷ್ಟ. ಆದರೂ, ಒಂದಷ್ಟು ಅನುಭವವಾಧಾರಿತವಾಗಿ ಯೋಚಿಸುವುದಾದರೆ, ಆರೋಗ್ಯ, ವಿಜ್ಞಾನ–ತಂತ್ರಜ್ಞಾನ, ಮಾರುಕಟ್ಟೆ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಭವಿಷ್ಯದಲ್ಲೂ ಹೆಚ್ಚಿನ ವೃತ್ತಿ ಬೇಡಿಕೆಯನ್ನು ನಿರೀಕ್ಷಿಸಬಹುದು. ಅಂಥ ಐದು ಕ್ಷೇತ್ರಗಳ ಕುರಿತು ಇಲ್ಲಿ ಮಾಹಿತಿ ಹಂಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ.

### 1. ಆರೋಗ್ಯ ಕ್ಷೇತ್ರ

ಜನಸಂಖ್ಯೆ ಹೆಚ್ಚಳ, ಜೊತೆಗೆ ವಯಸ್ಸಾದವರ ಪ್ರಮಾಣವೂ ಹೆಚ್ಚುತ್ತಿದೆ. ಇದಲ್ಲದೆ, ಹವಾಮಾನ ಬದಲಾವಣೆ, ನೈಸರ್ಗಿಕ ವಿಪತ್ತುಗಳು-ಇಂತಹ ಹಲವಾರು ಬದಲಾವಣೆಗಳು ಆರೋಗ್ಯ ಕ್ಷೇತ್ರಕ್ಕೆ ವೃತ್ತಿಪರ ಸಿಬ್ಬಂದಿಯ ಅವಶ್ಯಕತೆಯನ್ನು ಸೃಷ್ಟಿಸುತ್ತವೆ. ಹಾಗೆಯೇ, ಆರೋಗ್ಯ, ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಸಮನ್ವಯತೆಯಿಂದ ನೂತನ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಉದಾಹರಣೆಗೆ ವಿನೂತನ ಔಷಧಿಗಳ ಅನ್ವೇಷಣೆ, ಟೆಲಿಮೆಡಿಸಿನ್, ರೋಗಗಳನ್ನು ತಡೆಗಟ್ಟುವ ಮುಂಜಾಗ್ರತಾ ಕ್ರಮಗಳು, ಜೀವನ ಶೈಲಿಯ ಸುಧಾರಣೆಗಳು ಇತ್ಯಾದಿ. ಹಾಗಾಗಿ, ವೈದ್ಯರು, ಮನೋವಿಜ್ಞಾನಿಗಳು, ತಂತ್ರಜ್ಞರು, ದಾದಿಯರು, ಔಷಧಿಕಾರರು, ಆರೋಗ್ಯ ನಿರ್ವಾಹಕರು ಮುಂತಾದ ವೃತ್ತಿಪರರಿಗೆ ಬೇಡಿಕೆ ಇರುತ್ತದೆ.

ಈ ಕ್ಷೇತ್ರದಲ್ಲಿ ವೃತ್ತಿ ಪಡೆಯಲು ಕೆಲವೊಂದು ಪ್ರಮುಖ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಪ್ರಮುಖವಾಗಿ ವೃತ್ತಿಯ ಬಗ್ಗೆ ಒಲವು, ಸೇವಾ ಮನೋಭಾವ, ಜ್ಞಾಪಕ ಶಕ್ತಿ, ನಿಷ್ಠೆ, ಪ್ರಾಮಾಣಿಕತೆ, ಅನುಭೂತಿ, ಸಮಯದ ನಿರ್ವಹಣೆ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಸಮತೋಲನ ಇತ್ಯಾದಿ.

**ಏನೇನು ಕೋರ್ಸ್ ಓದಬಹುದು:** ಎಂಬಿಬಿಎಸ್, ಬಿಡಿಎಸ್, ಬಿಎಎಂಎಸ್, ಬಿಎನ್‌ವೈಎಸ್, ಬಿ.ಫಾರ್ಮಾ, ಬಿ.ಎಸ್ಸಿ (ಮೆಡಿಕಲ್, ಆರೋಗ್ಯ ಮತ್ತು ಸ್ವಾಸ್ಥ್ಯ ಸಂಬಂಧಿತ) ಇತ್ಯಾದಿ. ನರ್ಸಿಂಗ್, ಲ್ಯಾಬ್ ಟೆಕ್ನೀಷಿಯನ್ಸ್‌ಗಳಂತಹ ಪ್ಯಾರಾ ಮೆಡಿಕಲ್ ಕೋರ್ಸ್‌ಗಳು, ಫಾರ್ಮಸಿಯಂತಹ ಡಿಪ್ಲೊಮಾ ಮತ್ತು ಪದವಿ ಕೋರ್ಸ್‌ಗಳು.

### 2. ವಿಜ್ಞಾನ/ತಂತ್ರಜ್ಞಾನ

ಎಂಜಿನಿಯರಿಂಗ್ ಕ್ಷೇತ್ರದ ಕೃತಕ ಬುದ್ಧಿಮತ್ತೆ(ಎಐ), ಮಷೀನ್ ಲರ್ನಿಂಗ್, ಡೇಟಾ ಸೈನ್ಸ್, ಅನಾಲಿಟಿಕ್ಸ್, ಸೈಬರ್ ಸೆಕ್ಯುರಿಟಿ, ರೊಬೋಟಿಕ್, ನವೀಕರಿಸಬಹುದಾದ ಇಂಧನ, ಪರಿಸರ (ಎನ್ವಿರಾನ್‌ಮೆಂಟಲ್), ಬಯೋಮೆಡಿಕಲ್ – ಈ ವಿಭಾಗಗಳಿಗೆ ಹೆಚ್ಚಿನ ಬೇಡಿಕೆಯಿರುತ್ತದೆ ಎಂದು ನಿರೀಕ್ಷಿಸಬಹುದು. ಇದರರ್ಥ ಇನ್ನಿತರ ವಿಭಾಗಗಳಿಗೆ ಬೇಡಿಕೆ ಇರುವುದಿಲ್ಲ ಎಂದಲ್ಲ. ಎಂಜಿನಿಯರಿಂಗ್ ಕ್ಷೇತ್ರದ ಎಲ್ಲಾ ವಿಭಾಗಗಳಿಗೆ ಬೇಡಿಕೆ ಇರುತ್ತದೆಯಾದರೂ, ಆಯಾ ವಿಭಾಗಗಳ ವಿದ್ಯಾರ್ಥಿಗಳು ಜ್ಞಾನಾರ್ಜನೆಯ ಜೊತೆಗೆ ವೃತ್ತಿಪರ ವ್ಯಕ್ತಿತ್ವ ಮತ್ತು ಕೌಶಲಗಳೊಂದಿಗೆ ಪದವೀಧರರಾಗಬೇಕು. ಮೂಲ ಸೌಕರ್ಯಗಳು ಮತ್ತು ಕ್ಯಾಂಪಸ್ ನೇಮಕಾತಿಯಿರುವ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಅಧ್ಯಯನ ಮಾಡುವುದರಿಂದ, ಭವಿಷ್ಯವನ್ನು ರೂಪಿಸಿಕೊಳ್ಳುವುದು ಸುಲಭವಾಗುತ್ತದೆ.

ಈಗ ಎಂಜಿನಿಯರಿಂಗ್‌ನಲ್ಲಿ ಸುಮಾರು 50ಕ್ಕೂ ಹೆಚ್ಚು ಆಯ್ಕೆಗಳಿದ್ದು, ನಿಮ್ಮ ಆಸಕ್ತಿ, ಅಭಿರುಚಿಯಂತೆ ವಿಭಾಗವನ್ನು ಆಯ್ಕೆ ಮಾಡುವುದು ಸೂಕ್ತ. ವೃತ್ತಿಯೋಜನೆಯ ಗುರಿಯನ್ನು ಸಾಧಿಸಲು ಎಂಜಿನಿಯರಿಂಗ್ ಅಲ್ಲದೆ ಬಿ.ಎಸ್ಸಿ ಕೋರ್ಸ್ ಮೂಲಕ ಪರ್ಯಾಯ ಮಾರ್ಗಗಳೂ ಇವೆ ಎನ್ನುವುದು ನಿಮ್ಮ ಗಮನದಲ್ಲಿರಲಿ.

ಇತ್ತೀಚೆಗೆ ಐಟಿಐ, ಡಿಪ್ಲೊಮಾ ಹಂತದಲ್ಲಿ ಪ್ರಾಥಮಿಕವಾಗಿ ರೊಬೊಟಿಕ್ ಸೈನ್ಸ್, ಮಷಿನ್ ಲರ್ನಿಂಗ್ ಲ್ಯಾಂಗ್ವೇಜ್, 3ಡಿ ಯಂತಹ ಎಂಜಿನಿಯರಿಂಗ್ ಪದವಿ ಕೋರ್ಸ್‌ಗಳನ್ನು ಕಲಿಸಲಾಗುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕೌಶಲಾಭಿವೃದ್ಧಿ ಯೋಜನೆಯಡಿ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಸಂಸ್ಥೆ(ಜಿಟಿಟಿಸಿ)ಯಂತಹ ಸರ್ಕಾರಿ ಸಂಸ್ಥೆಗಳು, ಉದ್ಯೋಗಾಧಾರಿತ ಕೋರ್ಸ್‌ಗಳನ್ನು ಆರಂಭಿಸಿವೆ.

ವಿಜ್ಞಾನ/ತಂತ್ರಜ್ಞಾನ ಕುರಿತ ಸಂಶೋಧನೆ ಕ್ಷೇತ್ರಕ್ಕೂ ಬೇಡಿಕೆಯನ್ನು ನಿರೀಕ್ಷಿಸಬಹುದು. ಹಾಗಾಗಿ, ಈ ಕ್ಷೇತ್ರದಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳು ನಾಲ್ಕು ವರ್ಷದ ಬಿ.ಎಸ್ಸಿ ಪದವಿಯ ನಂತರ ಪಿಎಚ್.ಡಿ ಮಾಡಬಹುದು.

**ಪ್ರಮುಖ ಕೌಶಲಗಳು:** ಗಣಿತದಲ್ಲಿ ತಜ್ಞತೆ, ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ ಇತ್ಯಾದಿ.

**ಮಾಡಬಹುದಾದ ಕೋರ್ಸ್‌ಗಳು:** ಬಿ.ಇ/ಬಿ.ಟೆಕ್/ಬಿಸಿಎ/ಬಿ.ಎಸ್ಸಿ/ಎಂ.ಎಸ್ಸಿ/ಎಂಸಿಎ /ಎಂ.ಇ/ಎಂ.ಟೆಕ್/ಎಂ.ಎಸ್/ಪಿಎಚ್.ಡಿ.

### 3. ಶಿಕ್ಷಣ ಕ್ಷೇತ್ರ

ಮೂಲಗಳ ಪ್ರಕಾರ ದೇಶದಲ್ಲಿ ಪ್ರಸ್ತುತ ಸುಮಾರು ಒಂದು ದಶಲಕ್ಷ ಶಿಕ್ಷಕರ ಕೊರತೆ ಇದೆ. ಜೊತೆಗೆ, ಶಿಕ್ಷಣ ನೀತಿಯಲ್ಲಿನ ಅಮೂಲಾಗ್ರ ಬದಲಾವಣೆಗಳು, ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಶಾಲೆಗಳಿಗೆ ಒಟ್ಟು ದಾಖಲಾತಿಯ ಅನುಪಾತ (ಜಿಇಆರ್-ಗ್ರಾಸ್ ಎನ್‌ರೋಲ್‌ಮೆಂಟ್ ರೇಷಿಯೊ) ಹೆಚ್ಚಾಗುವ ನಿರೀಕ್ಷೆಯಿಂದ ಶಿಕ್ಷಕರು, ಉಪನ್ಯಾಸಕರು, ತರಬೇತುದಾರರಿಗೆ ಬೇಡಿಕೆಯನ್ನು ನಿರೀಕ್ಷಿಸಬಹುದು.

**ಪ್ರಮುಖ ಕೌಶಲಗಳು:** ವಿಷಯದ ತಜ್ಞತೆ, ಸಂವಹನ ಕೌಶಲ, ಸಮಯದ ನಿರ್ವಹಣೆ, ತಾಳ್ಮೆ, ಸಹನೆ, ನಾಯಕತ್ವದ ಕೌಶಲ ಮತ್ತು ವೃತ್ತಿಯ ಬಗ್ಗೆ ಒಲವು.

**ಮಾಡಬಹುದಾದ ಕೋರ್ಸ್‌ಗಳು:** ಎಲ್ಲಾ ವಿಭಾಗಗಳ ಪದವಿ/ಸ್ನಾತಕೋತ್ತರ ಕೋರ್ಸ್‌ಗಳು, ಬಿ.ಇಡಿ, ಬಿ.ಇಡಿ (ಇಂಟಿಗ್ರೇಟೆಡ್), ಪಿಎಚ್.ಡಿ

### 4. ಮಾರ್ಕೆಟಿಂಗ್ ( ರೀಟೇಲ್, ಇ-ಕಾಮರ್ಸ್ ಇತ್ಯಾದಿ)

ಚಿಲ್ಲರೆ ವ್ಯಾಪಾರ (ರೀಟೇಲ್) ಕ್ಷೇತ್ರ ದೇಶದ ಒಟ್ಟು ಉತ್ಪಾದನೆಯ (ಜಿಡಿಪಿ) ಶೇಕಡ 10ರಷ್ಟಿದ್ದು, ಒಟ್ಟಾರೆ ಶೇ 8ರಷ್ಟು ಉದ್ಯೋಗವನ್ನು ಸೃಷ್ಟಿಸಿದೆ. ಮುಂದಿನ ವರ್ಷಗಳಲ್ಲಿ, ಈ ಕ್ಷೇತ್ರಗಳಲ್ಲಿ ವ್ಯಾಪಕವಾದ, ತ್ವರಿತವಾದ ಪ್ರಗತಿ ನಿರೀಕ್ಷಿಸಬಹುದು. ಮಾರ್ಕೆಟಿಂಗ್, ಲಾಜಿಸ್ಟಿಕ್ಸ್ ಮತ್ತು ಗ್ರಾಹಕ ಸೇವೆಯಂತಹ ಕ್ಷೇತ್ರಗಳಲ್ಲಿ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆಯಿರುತ್ತದೆ.

**ಪ್ರಮುಖ ಕೌಶಲಗಳು:** ವೃತ್ತಿಯ ಬಗ್ಗೆ ಒಲವು, ವ್ಯವಹಾರ ಕೌಶಲ, ಸಂವಹನ, ಕ್ಷಿಪ್ರ ಗ್ರಹಿಕೆ, ಸಮಯ ಪ್ರಜ್ಞೆ ಇತ್ಯಾದಿ.

**ಮಾಡಬಹುದಾದ ಕೋರ್ಸ್‌ಗಳು:** ಎಲ್ಲಾ ವಿಭಾಗಗಳ ಪದವಿ ಕೋರ್ಸ್‌ಗಳು, ಬಿಬಿಎ/ಎಂಬಿಎ, ಕೌಶಲಾಭಿವೃದ್ಧಿ ಕೋರ್ಸ್‌ಗಳು.

### 5. ಹಣಕಾಸು ಕ್ಷೇತ್ರ

ಹಣಕಾಸು ವಿಶ್ಲೇಷಕರು, ಅಕೌಂಟೆಂಟ್‌ಗಳು ಮತ್ತು ಹೂಡಿಕೆ ಬ್ಯಾಂಕರ್‌ಗಳಂತಹ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆಯೊಂದಿಗೆ, ಭಾರತದಲ್ಲಿ ಹಣಕಾಸು ಕ್ಷೇತ್ರದ ಬೆಳವಣಿಗೆಯ ಮುಂದುವರೆಯುವ ನಿರೀಕ್ಷೆಯಿದೆ.

**ಪ್ರಮುಖ ಕೌಶಲಗಳು:** ನಿಯಮ ಮತ್ತು ನಿಬಂಧನೆಗಳ ಅರಿವು, ವಿಷಯದ ತಜ್ಞತೆ, ಯೋಜನಾ ಸಾಮರ್ಥ್ಯ, ವಿಶ್ಲೇಷಾತ್ಮಕ ಕೌಶಲ, ಆರ್ಥಿಕ ನಿರ್ವಹಣೆ, ಪ್ರಾಮಾಣಿಕತೆ ಇತ್ಯಾದಿ.

**ಮಾಡಬಹುದಾದ ಕೋರ್ಸ್‌ಗಳು:** ಬಿ.ಕಾಂ, ಎಂ.ಕಾಂ, ಸಿಎ, ಎಸಿಎಸ್, ಸಿಎಂಎ, ಎಂಬಿಎ ಇತ್ಯಾದಿ.

(ಲೇಖಕರು ಶಿಕ್ಷಣತಜ್ಞರು ಮತ್ತು ವೃತ್ತಿ ಸಲಹೆಗಾರರು)

# ಪರಿಕಲ್ಪನಾತ್ಮಕ ಕಲಿಕೆ

## ವಿವಿಧ ಕಲಿಕಾ ತಂತ್ರಗಳ ಸಂಗಮ

**ಆರ್.ಬಿ.ಗುರುಬಸವರಾಜ**

ಪರಿಕಲ್ಪನಾತ್ಮಕ ಕಲಿಕೆಯು ವಿವಿಧ ಕಲಿಕಾ ತಂತ್ರಗಳ ಸಮ್ಮಿಳಿತವಾಗಿದೆ. ಇದರಲ್ಲಿ ಪ್ರಯೋಗ, ವಿಮರ್ಶೆ, ಸತತ ಅಭ್ಯಾಸ ಕ್ರಮ, ಅಂತರ್ ಸಂಬಂಧಿತ ಅನ್ವಯಿಕ ಇದೆ. ಚರ್ಚೆ, ಸಂವಾದ,, ಸ್ವಯಂ ಮೌಲ್ಯಮಾಪನ ಇದೆ. ಇದು ಕಲಿಕಾ ವಿಧಾನಗಳ ಸಮಿಶ್ರಣವಾಗಿದ್ದು, ಎಲ್ಲರಿಗೂ ಎಲ್ಲಾ ಕಾಲಕ್ಕೂ ಉಪಯುಕ್ತವಾಗುತ್ತದೆ.

'ಏಯ್ ನೋಡ್ರೋ, ಈ ಕಾನ್ಸೆಪ್ಟ್ ಸರಿಯಾಗಿ ಅರ್ಥ ಮಾಡಿಕೊಂಡರೆ ಪರೀಕ್ಷೆಯಲ್ಲಿ ಸುಲಭವಾಗಿ ಅಂಕ ಗಳಿಸಬಹುದು' – ಇದು ತರಗತಿಯಲ್ಲಿ ಪ್ರತಿ ವಿಷಯದ ಶಿಕ್ಷಕರು(Subject Teachers) ವಿದ್ಯಾರ್ಥಿಗಳಿಗೆ ನೀಡುವ ಸಾಮಾನ್ಯ ಸಲಹೆ.

ಇಂಗ್ಲಿಷ್‌ನ ಕಾನ್ಸೆಪ್ಟ್‌ಗೆ (Concept) ಕನ್ನಡದಲ್ಲಿ ಪರಿಕಲ್ಪನೆ ಎನ್ನುತ್ತಾರೆ. ನಿರ್ದಿಷ್ಟ ಕಲಿಕಾಂಶವನ್ನು ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ ಕಲಿಯುವ ವಿಧಾನವನ್ನು ಪರಿಕಲ್ಪನಾತ್ಮಕ ಕಲಿಕೆ ಎನ್ನುತ್ತಾರೆ. ಇದು ಒಂದು ನಿರ್ದಿಷ್ಟ ಕಲಿಕಾಂಶವನ್ನು ವಿವಿಧ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಹಾಗೂ ಅದನ್ನು ಸಂದರ್ಭಕ್ಕನುಸಾರವಾಗಿ ಅನ್ವಯಿಸುವ ಕಲಿಕೆಯಾಗಿದೆ. ಒಟ್ಟಾರೆ ನಿರ್ದಿಷ್ಟ ವಿಷಯದ ಸಮಗ್ರ ಕಲಿಕೆಯೇ ಪರಿಕಲ್ಪನಾತ್ಮಕ ಕಲಿಕೆಯಾಗಿದೆ.

### ಪರಿಕಲ್ಪನಾತ್ಮಕ ಕಲಿಕೆ ಹೇಗಿರುತ್ತದೆ?

ಪರಿಕಲ್ಪನಾತ್ಮಕ ಕಲಿಕೆಯನ್ನು ಅರ್ಥೈಸಿಕೊಳ್ಳಲು ಈ ಉದಾಹರಣೆಯನ್ನು ಗಮನಿಸಿ; ಈಗ ನಾವು ವಿಜ್ಞಾನ ವಿಷಯದಲ್ಲಿನ ಪಾಸ್ಟಿಕ್ ಮಾಲಿನ್ಯ ಎಂಬ ವಿಷಯವನ್ನು ತೆಗೆದುಕೊಳ್ಳೋಣ. ಇದರಲ್ಲಿ 'ಪ್ಲಾಸ್ಟಿಕ್‌ನಿಂದಾಗುವ ಮಾಲಿನ್ಯ' ಎಂಬುದು ಕಲಿಯುವ ಅಂಶ. ಇದು ನಮಗೆ ಗೊತ್ತಿದೆ. ಹಾಗಾಗಿ, ಇದನ್ನು ವಿವಿಧ ಆಯಾಮಗಳಿಂದ ಅರ್ಥ ಮಾಡಿಕೊಳ್ಳಬೇಕು. ಅಂದರೆ, ಮಾಲಿನ್ಯಕ್ಕೆ ಕಾರಣಗಳೇನು? ಮಾಲಿನ್ಯದಿಂದಾಗುವ ಪರಿಣಾಮಗಳೇನು ? ಪರಿಹಾರ ಹೇಗೆ ? ವಿದ್ಯಾರ್ಥಿಗಳು, ಪೋಷಕರು ಏನು ಮಾಡಬೇಕು ? ಸಂಘ ಸಂಸ್ಥೆಗಳು, ಸರ್ಕಾರಗಳ ಪಾತ್ರವೇನು ? ನಿವಾರಣೆ ಅಥವಾ ನಿಯಂತ್ರಣಕ್ಕಿರುವ ಸಾಧ್ಯತೆಗಳು ಯಾವುದು ? – ಹೀಗೆ ವಿವಿಧ ಆಯಾಮಗಳಿಂದ ಯೋಚಿಸಿ, ಅದಕ್ಕೆ ಬೇಕಾದ ಮಾಹಿತಿಯನ್ನು ವಿವಿಧ ಕ್ಷೇತ್ರಗಳಿಂದ ಸಂಗ್ರಹಿಸಿ, ನಂತರ ಅದನ್ನು ವಿಂಗಡಿಸಿದರೆ ವಿಷಯವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ, ಸಂದರ್ಭಾನುಸಾರ ಅನ್ವಯಿಸಿಕೊಳ್ಳಲು ಅನುಕೂಲವಾಗುತ್ತದೆ.

ಈ ವಿಧಾನವನ್ನು ವಿಜ್ಞಾನ ವಿಷಯದಲ್ಲಿ ಮಾತ್ರವಲ್ಲ, ಗಣಿತಕ್ಕೂ ಅನ್ವಯಿಸಬಹುದು. ಗಣಿತ ವಿಷಯದಲ್ಲಿ ದಶಮಾಂಶಗಳ ಸ್ಪಷ್ಟ ತಿಳುವಳಿಕೆ ಪಡೆದರೆ, ಭಿನ್ನರಾಶಿಗಳು, ಶೇಕಡಾವಾರು ಮತ್ತು ಅನುಪಾತಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು ಹಾಗೂ ಪರಸ್ಪರ ಪರಿವರ್ತನೆಯನ್ನು ಸುಲಭವಾಗಿ ಮಾಡಬಹುದು.

ಸಮಾಜ ವಿಜ್ಞಾನದಲ್ಲಿ ಸಮಾಜ ಸುಧಾರಕರ ಬಗ್ಗೆ ಸಮಗ್ರ ತಿಳಿವಳಿಕೆ ಇದ್ದರೆ, ಆ ಕಲಿಕಾಂಶದ ಎಲ್ಲ ಪ್ರಶ್ನೆಗಳಿಗೂ ಸುಲಭವಾಗಿ ಉತ್ತರಿಸಬಹುದು. ಅಲ್ಲದೇ ಭವಿಷ್ಯದಲ್ಲಿ ಅದನ್ನು ವಿವಿಧ ಕಲಿಕೆಗೆ ಸುಲಭವಾಗಿ ಅನ್ವಯಿಸಿಕೊಳ್ಳಬಹುದು.

ಅಂತೆಯೇ ಒಂದು ಭಾಷಾ ವಿಷಯದಲ್ಲಿ ಕಲಿತ ಭಾಷಾ ಕೌಶಲವನ್ನು ಇನ್ನೊಂದು ಭಾಷಾ ಕಲಿಕೆಯಲ್ಲಿ ಬಳಸಿಕೊಳ್ಳಬಹುದು. ಪರಿಕಲ್ಪನೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಮೈಂಡ್ ಮ್ಯಾಪ್ ಅಥವಾ ಫ್ಲೋಚಾರ್ಟ್ ಬಳಸಬಹುದು.

### ಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲ

ಸಿಬಿಎಸ್‌ಇ, ಐಸಿಎಸ್‌ಇ ಮತ್ತು ಎನ್.ಸಿ.ಇ.ಆರ್.ಟಿ ಪಠ್ಯಕ್ರಮಗಳಲ್ಲಿ ಪರಿಕಲ್ಪನಾತ್ಮಕ ಕಲಿಕೆ ಬಳಕೆಯಲ್ಲಿದೆ. 10 ಮತ್ತು 12 ನೇ ತರಗತಿ ವಾರ್ಷಿಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಲು ಪರಿಕಲ್ಪನಾತ್ಮಕ ಕಲಿಕೆ ಹೆಚ್ಚು ಸಹಾಯ ಮಾಡುತ್ತದೆ. ಮಕ್ಕಳು ಪ್ರಾಥಮಿಕ ಹಂತದಲ್ಲೇ ಇದನ್ನು ಅಭ್ಯಾಸ ಮಾಡುವುದರಿಂದ ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ತುಂಬಾ ಅನುಕೂಲವಾಗುತ್ತದೆ. ಅಲ್ಲಿ ನಿರ್ದಿಷ್ಟ ವಿಷಯದ ಕುರಿತ ಪ್ರಬಂಧ ರಚನೆ ಹಾಗೂ ವಸ್ತುನಿಷ್ಠ ಪ್ರಶ್ನೆಗಳಿಗೆ ಖಚಿತ ಉತ್ತರ ನೀಡಲು ಈ ಕಲಿಕೆ ಪೂರಕ ಜ್ಞಾನ ನೀಡುತ್ತದೆ.



### ಈ ಕಲಿಕಾ ವಿಧಾನ ಏಕೆ ಮುಖ್ಯ?

ಪರಿಕಲ್ಪನಾತ್ಮಕ ಕಲಿಕೆಯು ಶಿಕ್ಷಣ ವ್ಯವಸ್ಥೆಯ ಭವಿಷ್ಯವಾಗಿದೆ ಎಂದು ರಾಷ್ಟ್ರೀಯ ಶಿಕ್ಷಣ ನೀತಿ-2020(ಎನ್‌ಇಪಿ) ಒತ್ತಿ ಹೇಳುತ್ತದೆ. ಈ ವಿಧಾನದಿಂದ ಕಲಿತ ಕಲಿಕಾಂಶಗಳು ಇನ್ನೊಂದು ಕಲಿಕಾಂಶದ ತಿಳಿವಳಿಕೆಗೆ ಸಹಾಯ ಮಾಡುತ್ತದೆ. ಪರಿಕಲ್ಪನೆಗಳು ಪರಸ್ಪರ ಅಂತರ್ ಸಂಬಂಧ ಹೊಂದಿರುವುದರಿಂದ ಕಲಿಕೆ ಸುಲಭ ಹಾಗೂ ಪರಿಣಾಮಕಾರಿಯಾಗಿರುತ್ತದೆ. ಈ ವಿಧಾನದಿಂದ ಕಲಿತ ಕಲಿಕೆಯು ಶಾಶ್ವತವಾಗಿರುತ್ತದೆ ಮತ್ತು ಸಂದರ್ಭಕ್ಕನುಸಾರವಾಗಿ ಬಳಕೆಯಾಗುತ್ತದೆ.

ಇದು, ಕಂಠಪಾಠ ಕಲಿಕೆ ಮತ್ತು ಮಾಹಿತಿ ಕಲಿಕೆಯಲ್ಲಿನ ದೋಷಗಳನ್ನು ನಿವಾರಿಸಿ ಭವಿಷ್ಯಕ್ಕೆ ಬೇಕಾದ ಅನ್ವಯಿಕ ಜ್ಞಾನವನ್ನು ನೀಡುತ್ತದೆ. ಆರಂಭಿಕ ಕಲಿಕೆಯು ಸ್ಪಷ್ಟತೆಯಿಂದ ಕೂಡಿದ್ದರೆ ಭವಿಷ್ಯದಲ್ಲಿ ಎಂತಹ ಸಮಸ್ಯೆಗಳಿಗೂ ಸೂಕ್ತ ಕಂಡುಕೊಳ್ಳಬಹುದು ಎಂಬುದನ್ನು ಈ ಕಲಿಕೆ ತಿಳಿಸುತ್ತದೆ.

### ಪ್ರಯೋಜನಗಳೇನು ?

ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಅನ್ವಯಿಸಲು ಶಕ್ತರಾಗಬೇಕಾದರೆ ವಿವಿಧ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ರೀತಿಯ ಕಲಿಕೆಯು ಹೊಸ ವಿಷಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಅಥವಾ ಅವರು ಅನುಭವಿಸಿದ್ದನ್ನು ಕಲಿಕೆಗೆ ಬಳಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುತ್ತದೆ.

ವಿದ್ಯಾರ್ಥಿಗಳಲ್ಲಿ ಅನ್ವಯಿಕ ಮತ್ತು ಪ್ರಾಯೋಗಿಕ ಅಭ್ಯಾಸಗಳನ್ನು ಬಲಪಡಿಸಲು ಪರಿಕಲ್ಪನಾತ್ಮಕ ಕಲಿಕೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಕಲಿಕೆಯನ್ನು ಸ್ವಯಂ ವಿಶ್ಲೇಷಿಸಲು ಮತ್ತು ಪ್ರೋತ್ಸಾಹಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುತ್ತದೆ. ಚರ್ಚೆ, ಸಂವಾದ, ಗುಂಪು ಅಧ್ಯಯನ, ಕಾರ್ಯಾಗಾರಗಳ ಮೂಲಕ ನಿರ್ದಿಷ್ಟ ವಿಷಯದ ವಿವಿಧ ಆಯಾಮಗಳನ್ನು ಕಲಿಯಲು ಉತ್ತೇಜಿಸುತ್ತದೆ.

### ಇನ್ನಷ್ಟು ಪ್ರಯೋಜನಗಳು

- ನಿರ್ದಿಷ್ಟ ವೇಗದಲ್ಲಿ ಪ್ರಗತಿ ಸಾಧಿಸಲು ಅನುವು ಮಾಡಿಕೊಡುತ್ತದೆ.
- ಕ್ರಿಯಾತ್ಮಕ ಕಲಿಕಾ ವ್ಯವಸ್ಥೆಗಳನ್ನು ಪ್ರೋತ್ಸಾಹಿಸುತ್ತದೆ.
- ಕಲಿಕೆಯನ್ನು ಫಲಿತಾಂಶದ ಮೇಲೆ ಕೇಂದ್ರೀಕರಿಸುತ್ತದೆ.
- ಹಿಂದಿನ ಕಲಿಕೆಗೆ ಹೊಸ ಮಾಹಿತಿಯನ್ನು ಸಂಬಂಧೀಕರಿಸುತ್ತದೆ.
- ಜ್ಞಾನವನ್ನು ನೀಡುತ್ತದೆ ಮತ್ತು ಕಲಿಕೆಯನ್ನು ಖಾತ್ರಿಪಡಿಸುತ್ತದೆ.
- ಹೊಂದಿಕೊಳ್ಳುವ ಮತ್ತು ನಿರಂತರ ಸುಧಾರಣೆಗೆ ಅನುವು ಮಾಡಿಕೊಡುತ್ತದೆ
- ಕಲಿಕೆಯ ಪ್ರಕ್ರಿಯೆಯ ಫಲಿತಾಂಶದ ಮೇಲೆ ಕೇಂದ್ರೀಕರಿಸಲು ನೆರವಾಗುತ್ತದೆ
- ಪರಿಕಲ್ಪನಾ ಕಲಿಕೆಯು ವಿಷಯದಲ್ಲಿ ಪ್ರಗತಿಯನ್ನು ಸಾಧಿಸುತ್ತದೆ.
- ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆಯ ಕೌಶಲಗಳನ್ನು ಬೆಳೆಸುತ್ತದೆ.

# 'ಐಐಎಸ್‌ಸಿ'ಯಲ್ಲಿ ಪದವಿ ಕಲಿಕೆ ಹೇಗೆ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

**ಪ್ರದೀಪ್ ಕುಮಾರ್ ವಿ.**

ಇನ್ನಷ್ಟು ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಾಂದರ್ಭಿಕ ಚಿತ್ರ

**1. ನಾನು ಮೂರನೇ ವರ್ಷದ ಫಾರ್ಮ್.ಡಿ ಕೋರ್ಸ್ ಮಾಡುತ್ತಿದ್ದೇನೆ. ಮುಂದೆ ಬ್ರಿಟನ್/ಅಮೆರಿಕ ದೇಶಗಳಲ್ಲಿ ವೃತ್ತಿಯನ್ನು ಅರಸಬೇಕು. ಹಾಗಾಗಿ, ಅಲ್ಲಿ ಪರವಾನಗಿ ಪಡೆಯಲು ಮಾಡಬೇಕಾದ ಅರ್ಹತಾ ಪರೀಕ್ಷೆಯ ವಿವರವನ್ನು ತಿಳಿಸಿ.**

**ಚರಣ್,** ಊರು ತಿಳಿಸಿಲ್ಲ

ನಮಗಿರುವ ಮಾಹಿತಿಯಂತೆ ಫಾರ್ಮ್.ಡಿ ಕೋರ್ಸ್ (ಡಾಕ್ಟರೇಟ್ ಕೋರ್ಸ್) ಮಾಡಿದ ನಂತರ ಅಮೆರಿಕ ದೇಶದಲ್ಲಿ ವೃತ್ತಿಯನ್ನು ಅರಸಬೇಕಾದರೆ, ಮೊದಲು ಇಂಗ್ಲಿಷ್ ಭಾಷಾ ಪರಿಣತಿ (The Test of English Language as a Foreign Language – ಟಿಒಇಎಫ್‌ಎಲ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ನಂತರ ಸ್ಥಳೀಯ ಅರ್ಹತಾ ಪರೀಕ್ಷೆ ( Foreign Pharmacy Graduate Equivalency Examination– ಎಫ್‌ಪಿಜಿಇ) ಯಲ್ಲಿ ಉತ್ತೀಣರಾಗಬೇಕು. ಇದಾದ ನಂತರ, ನಾರ್ತ್ ಅಮೆರಿಕ ಫಾರ್ಮಾಸಿಸ್ಟ್ ಲೈಸೆನ್ಸ್ (ಎನ್‌ಎಪಿಎಲ್‌ಇ) ಎಕ್ಸಾಂ ಮೂಲಕ ಫಾರ್ಮಸಿ ಲೈಸೆನ್ಸ್ ಪಡೆಯಬೇಕು. ಬ್ರಿಟನ್ ದೇಶದಲ್ಲಿಯೂ ಸ್ಥಳೀಯ ಅರ್ಹತಾ ಪರೀಕ್ಷೆ ಮತ್ತು ಪ್ರಾಯೋಗಿಕ ತರಬೇತಿಯ ನಂತರ ಲೈಸೆನ್ಸ್ ಪಡೆಯಬಹುದು.

**ಹೆಚ್ಚಿನ ಮಾಹಿತಿಗಾಗಿ ಗಮನಿಸಿ:** https://nabp.pharmacy/programs/foreign-pharmacy/

**2. ನಾನು ಪಿಯುಸಿ ಓದುತ್ತಿದ್ದು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಸಂಸ್ಥೆಯಲ್ಲಿ ಬಿ.ಎಸ್ಸಿ/ಎಂ.ಎಸ್ಸಿ (ಸಂಶೋಧನೆ) ಕೋರ್ಸ್ ಮಾಡಲು ಬಯಸಿದ್ದೇನೆ. ಮಾರ್ಗದರ್ಶನ ನೀಡಿ.**

**ರಿಷಿತ,** ಬೆಂಗಳೂರು

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ನಾಲ್ಕು ವರ್ಷದ ಬಿ.ಎಸ್ಸಿ (ಸಂಶೋಧನೆ) ಕೋರ್ಸ್ ಮಾಡಲು ಜೆಇಇ (ಮೇನ್ಸ್ ಅಥವಾ ಅಡ್ವಾನ್ಸ್), ನೀಟ್, ಕೆವಿಪಿವೈ ಅಥವಾ ಐಐಎಸ್‌ಇಆರ್ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು. ಈ ಪರೀಕ್ಷೆಗಳ ಫಲಿತಾಂಶದ ಆಧಾರದ ಮೇಲೆ ಸೀಟ್ ಹಂಚಿಕೆಯಾಗುತ್ತದೆ. ಈ ಕೋರ್ಸ್ ಅನ್ನು ಜೀವವಿಜ್ಞಾನ, ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತ, ಪರಿಸರ ವಿಜ್ಞಾನ ಮುಂತಾದ ವಿಷಯಗಳಲ್ಲಿ ಮಾಡಬಹುದು. ಬಿ.ಎಸ್ಸಿ (ಸಂಶೋಧನೆ) ಕೋರ್ಸ್ ಅನ್ನು ಇನ್ನಿತರ ಪ್ರತಿಷ್ಠಿತ ಸಂಸ್ಥೆಗಳಲ್ಲಿಯೂ ಮಾಡಬಹುದು ಎನ್ನುವುದು ನಿಮ್ಮ ಗಮನದಲ್ಲಿರಲಿ. ಬಿ.ಎಸ್ಸಿ ನಂತರ ಹೆಚ್ಚಿನ ತಜ್ಞತೆಗಾಗಿ, ನೇರವಾಗಿ ಪಿಎಚ್.ಡಿ ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://bs-ug.iisc.ac.in/info_brochure.html

**2. ನಾನು ಬಿಎ (ಇಂಗ್ಲಿಷ್) ಪೂರ್ಣಗೊಳಿಸಿದೆ. ಬಿ.ಇಡಿ ಕೋರ್ಸ್ ಕಲಿಯುತ್ತಿದ್ದೆ. ಇಂಗ್ಲಿಷ್ ಕಷ್ಟವೆಂದು ಆ ಕೋರ್ಸ್ ಅನ್ನು ಅರ್ಧಕ್ಕೇ ನಿಲ್ಲಿಸಿದ್ದೇನೆ. ಮನೆಯಲ್ಲಿ, ಎಂ.ಎ (ಕನ್ನಡ) ಮಾಡು ಎನ್ನುತ್ತಿದ್ದಾರೆ. ನನಗೆ ರಂಗಭೂಮಿ ಕಲೆಯ ಬಗ್ಗೆ ಹೆಚ್ಚು ಆಸಕ್ತಿ ಇದೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಗೊಂದಲವಿದೆ. ಪರಿಹಾರ ತಿಳಿಸಿ.**

**ಹೆಸರು, ಊರು ತಿಳಿಸಿಲ್ಲ**

ನಿಖರವಾದ ವೃತ್ತಿಯೋಜನೆಯಿಲ್ಲದೆ ವಿಭಿನ್ನವಾದ ಕೋರ್ಸ್‌ಗಳನ್ನು ಮಾಡಿದರೆ ಇಂತಹ ಗೊಂದಲಗಳಾಗುವುದು ಸಹಜ. ಈಗಲೂ ಕಾಲ ಮಿಂಚಿಲ್ಲ; ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ ಮತ್ತು ಅಭಿರುಚಿ ಯಾವ ಕ್ಷೇತ್ರದಲ್ಲಿದೆಯೆಂದು ಗುರುತಿಸಿ, ವೃತ್ತಿಯೋಜನೆಯನ್ನು ಮಾಡಿ, ಅದಕ್ಕೆ ಅನುಗುಣವಾಗಿ ಮುಂದಿನ ಕೋರ್ಸ್ ಆಯ್ಕೆಯಿರಲಿ. ಮೇಲ್ನೋಟಕ್ಕೆ ಬಿ.ಇಡಿ ಕೋರ್ಸ್ ಮಾಡುವುದರಿಂದ ವೃತ್ತಿಯನ್ನು ಅರಸಲು ಅನುಕೂಲವಾಗಬಹುದು.

ಔಪಚಾರಿಕ ಶಿಕ್ಷಣದ ಜೊತೆಗೆ ರಂಗಭೂಮಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂವಹನ, ಅಂತರ್-ವೈಯಕ್ತಿಕ ನೈಪುಣ್ಯ, ನಾಯಕತ್ವದ ಕೌಶಲ ಮುಂತಾದ ವೃತ್ತಿಗೆ ಪೂರಕವಾದ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಂಡು ವೃತ್ತಿಯಲ್ಲೂ, ವೈಯಕ್ತಿಕ ಬದುಕಿನಲ್ಲೂ ಸಂತೃಪ್ತಿಯನ್ನು ಗಳಿಸಬಹುದು. ವೃತ್ತಿಯೋಜನೆಯನ್ನು ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

**4. ನಾನು ಡಿಪ್ಲೊಮಾ (ಮೆಕ್ಯಾನಿಕಲ್) ಮಾಡುತ್ತಿದ್ದು, ಮುಂದೆ ಎಂಜಿನಿಯರಿಂಗ್ ಮಾಡುವ ಆಸೆಯಿದೆ. ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿಗೆ ಸೇರುವುದು ಹೇಗೆ? ದಯವಿಟ್ಟು ತಿಳಿಸಿ.**

**ಹೆಸರು, ಊರು ತಿಳಿಸಿಲ್ಲ**

ಮೂರು ವರ್ಷದ ಡಿಪ್ಲೊಮಾ ನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆಯೋಜಿಸುವ ಡಿಪ್ಲೊಮಾ ಸಿಇಟಿ ಪ್ರವೇಶ ಪರೀಕ್ಷೆಯ ಮೂಲಕ, 2ನೇ ವರ್ಷದ ಯಾವುದೇ ಎಂಜಿನಿಯರಿಂಗ್ ಕೋರ್ಸ್‌ಗೆ ಸೇರಬಹುದು. ಹೆಚ್ಚಿನ ಮಾಹಿತಿಗಾಗಿ, ಕಳೆದ ವರ್ಷದ ಈ ಸುತ್ತೋಲೆಯನ್ನು ಗಮನಿಸಿ:https://cetonline.karnataka.gov.in/keawebentry456/dcet22/20220924153843kannada.pdf

**5. ನಾನು ಎಂಬಿಎ (ಅರ್ಥಶಾಸ್ತ್ರ) ಮಾಡಬಹುದೇ? ಇದರಿಂದ ಅನುಕೂಲವಾಗುತ್ತದೆಯೇ? ಈ ಕೋರ್ಸ್ ಯಾವ ಸರ್ಕಾರಿ ಕಾಲೇಜುಗಳಲ್ಲಿವೆ. ತಿಳಿಸಿ.**

**ಹೆಸರು, ಊರು ತಿಳಿಸಿಲ್ಲ**

ನಮ್ಮ ದೇಶದಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಎಂಬಿಎ ಕಾಲೇಜುಗಳು/ವಿಶ್ವವಿದ್ಯಾಲಯಗಳಿವೆ. ಸಾಮಾನ್ಯವಾಗಿ ಎಲ್ಲಾ ಎಂಬಿಎ ಕೋರ್ಸ್‌ಗಳಲ್ಲಿ ಮಾರ್ಕೆಟಿಂಗ್, ಹಣಕಾಸು, ಮಾನವ ಸಂಪನ್ಮೂಲ, ಉತ್ಪಾದನೆ, ಲಾಜಿಸ್ಟಿಕ್ಸ್ ಮುಂತಾದ ವಿಭಾಗಗಳಿದ್ದು, ಈ ಎಲ್ಲಾ ಪಠ್ಯಕ್ರಮಗಳಲ್ಲಿ ಅರ್ಥಶಾಸ್ತ್ರ ಒಂದು ಪ್ರಮುಖ ಕಲಿಕೆಯ ವಿಷಯವಾಗಿರುತ್ತದೆ. ಆದರೂ, ಎಂಬಿಎ (ಅರ್ಥಶಾಸ್ತ್ರ) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಅಮಿಟಿ ವಿಶ್ವವಿದ್ಯಾಲಯ ಮುಂತಾದ ಕೆಲವೇ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಮಾತ್ರ ಲಭ್ಯ. ಹಾಗಾಗಿ, ಸಾರ್ವಜನಿಕ ಅರ್ಥಶಾಸ್ತ್ರ, ಅಂತರಾಷ್ಟ್ರೀಯ ಅರ್ಥಶಾಸ್ತ್ರ, ಅನ್ವಯಿಕ ಅರ್ಥಶಾಸ್ತ್ರ, ಸಾರ್ವಜನಿಕ ವಲಯದ ಉದ್ಯಮಗಳು ಮುಂತಾದ ಕ್ಷೇತ್ರಗಳಲ್ಲಿ ವಿಶೇಷವಾದ ಆಸಕ್ತಿಯಿದ್ದು, ನಿರ್ದಿಷ್ಟ ವೃತ್ತಿಯನ್ನು ಅನುಸರಿಸುವ ಯೋಜನೆಯಿದ್ದರೆ, ಈ ಕೋರ್ಸ್ ಮಾಡಿ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

## ವಿದ್ಯಾರ್ಥಿ ವೇತನ ಕೈಪಿಡಿ

### ಜೆಎಂ ಸೇಥಿಯಾ ಮೆರಿಟ್ ಸ್ಕಾಲರ್‌ಶಿಪ್ ಸ್ಕೀಮ್

**ವಿವರ:** 9 ರಿಂದ 12ನೇ ತರಗತಿ, ಪದವಿ, ಸ್ನಾತಕೋತ್ತರ ಪದವಿ ಮತ್ತು ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾದ ಪ್ರತಿಭಾವಂತ ವಿದ್ಯಾರ್ಥಿಗಳು ವಿವಿಧ ಹಂತಗಳಲ್ಲಿ ಶಿಕ್ಷಣ ಮುಂದುವರಿಸಲು ನೆರವಾಗುವುದಕ್ಕಾಗಿ ಜೆಎಂ ಸೇಥಿಯಾ ಚಾರಿಟಬಲ್ ಟ್ರಸ್ಟ್ (ಎನ್‌ಜಿಒ) ಈ ಸ್ಕಾಲರ್‌ಷಿಪ್ ಸ್ಕೀಮ್ ಆರಂಭಿಸಿದೆ.

**ಅರ್ಹತೆ:** 9 ರಿಂದ 12ನೇ ತರಗತಿ, ಪದವಿ, ಸ್ನಾತಕೋತ್ತರ ಪದವಿ ಮತ್ತು ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಆಯಾ ತರಗತಿ/ಕೋರ್ಸ್‌ಗೆ ನಿರ್ದಿಷ್ಟಪಡಿಸಲಾದ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಬೇಕು.

**ಆರ್ಥಿಕ ಸಹಾಯ:** ತಿಂಗಳಿಗೆ ₹ 1,000 ವರೆಗೆ

**ಅರ್ಜಿ ಸಲ್ಲಿಸಲು ಕೊನೆ ದಿನ:** 31-07-2023

**ಅರ್ಜಿ ಸಲ್ಲಿಸುವ ವಿಧಾನ:** ಆಫ್‌ಲೈನ್:

ವಿಳಾಸ: ಜೆಎಂ ಸೇಥಿಯಾ ಚಾರಿಟೇಬಲ್ ಟ್ರಸ್ಟ್ 133, ಬಿಪ್ಲಬಿ ರಾಶ್ ಬಿಹಾರಿ ಬಸು ರಸ್ತೆ, 3 ನೇ ಮಹಡಿ, ಕೊಠಡಿ ಸಂಖ್ಯೆ. 15, ಕೋಲ್ಕತ್ತಾ - 700 001 ಅಥವಾ ಗಾಂಧಿ ಹೌಸ್, 5 ನೇ ಮಹಡಿ, 16, ಗಣೇಶ್ ಚಂದ್ರ ಅವೆನ್ಯೂ, ಕೋಲ್ಕತ್ತ-700 013, ಇ–ಮೇಲ್ ಐಡಿ - jms_trust @yahoo.co.in

**ಹೆಚ್ಚಿನ ಮಾಹಿತಿಗೆ:** www.b4s.in/praja/JMSM5

### ಟೆಕ್ನಾಲಜಿ ಟ್ರಾನ್ಸ್‌ಲೇಷನ್ ಅವಾರ್ಡ್

**ವಿವರ:** ಟೆಕ್ನಾಲಜಿ ಟ್ರಾನ್ಸ್‌ಲೇಷನ್ ಅವಾರ್ಡ್ (ಸರ್ಬ್-ಟೆಟ್ರಾ) 2023, ಸೈನ್ಸ್ ಅಂಡ್ ಎಂಜಿನಿಯರಿಂಗ್ ರಿಸರ್ಚ್ ಬೋರ್ಡ್ (ಸರ್ಬ್) ಪಿಎಚ್.ಡಿ ಅಥವಾ ಎಂ.ಡಿ. / ಎಂ.ಎಸ್. / ಎಂ.ಡಿ.ಎಸ್. / ಎಂ.ವಿ.ಎಸ್‌ಸಿ ಪದವೀಧರರಿಗಾಗಿ ನೀಡುವ ಪುರಸ್ಕಾರವಾಗಿದೆ.

**ಅರ್ಹತೆ:** ಅನುದಾನಕ್ಕಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಅರ್ಜಿದಾರರು ವಿಜ್ಞಾನ, ಗಣಿತ ಅಥವಾ ಎಂಜಿನಿಯರಿಂಗ್‌ನಲ್ಲಿ ಪಿಎಚ್.ಡಿ ಪದವಿ ಅಥವಾ ಎಂ.ಡಿ./ ಎಂ.ಎಸ್./ ಎಂ.ಡಿ.ಎಸ್./ ಎಂ.ವಿ.ಎಸ್‌ಸಿಯಲ್ಲಿ ಪದವಿ ಪಡೆದಿರುವ ಭಾರತೀಯ ನಾಗರಿಕರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆ ಅಥವಾ ರಾಷ್ಟ್ರೀಯ ಪ್ರಯೋಗಾಲಯದಲ್ಲಿ ಅಥವಾ ಭಾರತದ ಯಾವುದೇ ಮಾನ್ಯತೆ ಪಡೆದ ಆರ್ ಆ್ಯಂಡ್ ಡಿ ಸಂಸ್ಥೆಯಲ್ಲಿ ನಿಯಮಿತ ಶೈಕ್ಷಣಿಕ/ಸಂಶೋಧನಾ ಸ್ಥಾನವನ್ನು ಹೊಂದಿರುವ ಜೊತೆಗೆ ಅವರಿಗೆ ಕನಿಷ್ಠ 3 ವರ್ಷಗಳ ಸೇವೆ ಉಳಿದಿರಬೇಕು.

**ಆರ್ಥಿಕ ಸಹಾಯ:** ವರ್ಷಕ್ಕೆ ₹ 15 ಲಕ್ಷದವರೆಗೆ

**ಅರ್ಜಿ ಸಲ್ಲಿಸಲು ಕೊನೆ ದಿನ:** 10-08-2023

**ಅರ್ಜಿ ಸಲ್ಲಿಸುವ ವಿಧಾನ :** ಆನ್‌ಲೈನ್

**ಹೆಚ್ಚಿನ ಮಾಹಿತಿಗೆ:** www.b4s.in/praja/TTA9

ಕೃಪೆ: www.buddy4study.com

# ಕುಂದು ಕೊರತೆ

## ಜನದನಿ

ನಿಮ್ಮ ಅಹವಾಲುಗಳನ್ನು ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು

### ‘ರಸ್ತೆ ದುರಸ್ತಿಗೊಳಿಸಿ’

ನಗರದ ಕಬ್ಬನಪೇಟೆಯ 15ನೇ ಅಡ್ಡರಸ್ತೆ ಸಂಪೂರ್ಣ ಹದಗೆಟ್ಟಿದೆ. ವಾಹನ ಸಂಚಾರಕ್ಕೆ ಅನನಕೂಲವಾಗಿದೆ. ಈ ರಸ್ತೆ ದುರಸ್ತಿಗೊಳಿಸುವಂತೆ ಬಿಬಿಎಂಪಿ ಅವರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಈ ರಸ್ತೆಯು ಡಾಂಬರು ಕಂಡು ವರ್ಷಗಳೇ ಆಗಿವೆ. ಇದರಿಂದ ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತಿದ್ದು, ವಾಹನ ಸವಾರರ ಆರೋಗ್ಯವನ್ನು ಹಾಳು ಮಾಡುತ್ತಿದೆ. ಸದ್ಯ ಮಳೆಗಾಲ ಪ್ರಾರಂಭವಾಗಿದ್ದು, ರಸ್ತೆಯೆಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ಅಧಿಕಾರಿಗಳು ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

**ರಮೇಶ್, ಶಂಕರ್**
ವಾಹನ ಸವಾರರು



### ಇನ್ನು ಸ್ವಚ್ಛ ಶೌಚಾಲಯ

**ವರದಿ ಪರಿಣಾಮ**

ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಐಟಿಐ ದೂರವಾಣಿ ನಗರದ ಬೆಸ್ಕಾಂ ಉಪವಿಭಾಗ ಕಚೇರಿಯ ಆವರ್ಣದಲಿರುವ ಸಾರ್ವಜನಿಕ ಶೌಚಾಲಯವನ್ನು ಸ್ವಚ್ಛಗೊಳಿಸಲಾಗಿದೆ. ಈ ಬಗ್ಗೆ ‘ಪ್ರಜಾವಾಣಿ’ಯ ‘ಕುಂದು ಕೊರತೆ’ ವಿಭಾಗದಲ್ಲಿ ಜೂನ್ 26ರಂದು ‘ಶೌಚಾಲಯ ಸ್ವಚ್ಛಗೊಳಿಸಿ’ ಎಂಬ ಶೀರ್ಷಿಕೆ ಅಡಿಯಲ್ಲಿ ಸುದ್ದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚತ್ತ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

### ‘ಕುಸಿದ ಪಾದಚಾರಿ ಮಾರ್ಗ’

ಟ್ರಿನಿಟಿ ಮೆಟ್ರೊ ನಿಲ್ದಾಣದ ಬಳಿಯ ಎಚ್‌ಎಸ್‌ಬಿಸಿ ಸೆಂಟರ್ ಮುಂಭಾಗದ ಪಾದಚಾರಿ ಮಾರ್ಗ ಕುಸಿದು ಬಿದ್ದಿದೆ. ಪ್ರತಿನಿತ್ಯ ಎಚ್‌ಎಸ್‌ಬಿಸಿ ಸೆಂಟರ್‌ಗೆ ಬರುವ ಗ್ರಾಹಕರು ಹಳೆ ಮದ್ರಾಸ್ ಮುಖ್ಯರಸ್ತೆಯಲ್ಲಿ ಸಾಗಬೇಕಾದ ಅನಿವಾರ್ಯ ನಿರ್ಮಾಣವಾಗಿದೆ. ಟ್ರಿನಿಟಿ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗವಾಗಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ಸಮಸ್ಯೆಯಾಗಿದೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಗಮನವಹಿಸಿ, ಈ ಪಾದಚಾರಿ ಮಾರ್ಗದ ದುರಸ್ತಿಗೆ ಕ್ರಮಕೈಗೊಳ್ಳಿ.

**ಶ್ರೀಶೈಲ್, ಆನಂದ್**
ಪಾದಚಾರಿಗಳು



### ‘ರಸ್ತೆ ಸರಿಪಡಿಸಿ’

ಸುಬ್ರಹ್ಮಣ್ಯಪುರ ಮುಖ್ಯರಸ್ತೆಯಲ್ಲಿ ಬರುವ ಟೆಲಿಕಾಂ ಬಡಾವಣೆಯ (ದೊಡ್ಡ ಗೌಡನಪಾಳ್ಯ ಎದುರಿನ) ರಸ್ತೆಗೆ ಡಾಂಬರು ಹಾಕಿ ಹತ್ತು ವರ್ಷಗಳೇ ಆಗಿವೆ. ಚುನಾವಣೆಯ ಸಂದರ್ಭದಲ್ಲಿ ಟೆಲಿಕಾಂ ಬಡಾವಣೆಯ ರಸ್ತೆಗಳನ್ನು ಬಿಟ್ಟು, ಈ ಭಾಗದ ಎಲ್ಲ ರಸ್ತೆಗಳಿಗೂ ಡಾಂಬರು ಹಾಕಲಾಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ಪ್ರಶ್ನಿಸಿದರೆ ಯಾವುದೇ ಉತ್ತರ ನೀಡುತ್ತಿಲ್ಲ. ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕೂಡಲೇ ಈ ರಸ್ತೆಗೆ ಡಾಂಬರು ಹಾಕಿ, ಸಂಚಾರ ಯೋಗ್ಯವನ್ನಾಗಿ ಮಾಡಬೇಕು. ಜೊತೆಗೆ ಬಡಾವಣೆಯ ಸೌಂದರ್ಯವನ್ನು ಹೆಚ್ಚಿಸಲು ಕೈಜೋಡಿಸಬೇಕು.

**ನಳಿನಿ ಶಿವಶಂಕರ್,** ಸ್ಥಳೀಯ ನಿವಾಸಿ

ಇಳುವರಿ ಕುಸಿತ; ದೇಶದಾದ್ಯಂತ ಬೆಲೆಯಲ್ಲಿ ಭಾರಿ ಹೆಚ್ಚಳ

# ಟೊಮೆಟೊಗೆ ಎಲೆ ಸುರುಳಿ ರೋಗ

• ಅನಿತಾ ಪೈಲೂರು

**ಮುಖ್ಯಾಂಶಗಳು**

- ಕೋಲಾರ ಮಾರುಕಟ್ಟೆ: ಟೊಮೆಟೊ ಆವಕದಲ್ಲಿ ಕುಸಿತ
- ರೋಗದಿಂದ ಎಲೆ ಒಣಗುವಿಕೆ

**ಪ್ರಜಾವಾಣಿ ವಿಶೇಷ**

ಬೆಂಗಳೂರು: ಎಲೆ ಸುರುಳಿ ರೋಗದಿಂದ ಟೊಮೆಟೊ ಇಳುವರಿಯಲ್ಲಿ ಕುಸಿತವಾಗಿರುವ ಹಿನ್ನೆಲೆಯಲ್ಲಿ ದೇಶದಾದ್ಯಂತ ಬೆಲೆ ಹೆಚ್ಚಾಗಿದೆ.

ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ದೇಶದಾದ್ಯಂತ ಟೊಮೆಟೊ ಪೂರೈಕೆ ಮಾಡುವ ವಿತರಕರಲ್ಲಿ ಒಂದಾಗಿದ್ದು, ಇಲ್ಲಿನ ಆವಕದಲ್ಲಿ ಕುಸಿತವಾಗಿದೆ.

ಈ ಬಾರಿ ಜೂನ್‌ನಲ್ಲಿ ಎಪಿಎಂಸಿಗೆ 3.2 ಲಕ್ಷ ಕ್ವಿಂಟಲ್ ಟೊಮೆಟೊ ಮಾತ್ರ ಬಂದಿದ್ದು, 2022ರ ಜೂನ್‌ನಲ್ಲಿ 5.45 ಕ್ವಿಂಟಲ್ ಆವಕವಿತ್ತು. 2021ರಲ್ಲಿ 9.37 ಕ್ವಿಂಟಲ್ ಜೂನ್‌ನಲ್ಲೇ ಬಂದಿತ್ತು.

‘ಕೋಲಾರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಎಲೆ ಸುರುಳಿ ರೋಗ ತಗುಲಿದ್ದು, ಟೊಮೆಟೊ ಇಳುವರಿ ಕಡಿಮೆಯಾಗಿದೆ. ಪ್ರತಿ ವರ್ಷ ಸಾಮಾನ್ಯವಾಗಿ 15 ಸುತ್ತು ಹಣ್ಣುಗಳ ಕೊಯ್ಲು ನಡೆಯುತ್ತದೆ. ಆದರೆ, ಈ ಬಾರಿ ರೋಗದಿಂದ ಎಲೆಗಳೆಲ್ಲ ಒಣಗುತ್ತಿರುವುದರಿಂದ ಮೂರರಿಂದ ಐದು ಸುತ್ತು ಮಾತ್ರ ಕೊಯ್ಲು ಮಾಡಲಾಗುತ್ತದೆ’ ಎಂದು ರೈತ ಮಹಿಳೆ ನಳಿನಿ ಗೌಡ ತಿಳಿಸಿದರು.

ಮೂರು ಎಕರೆಯಲ್ಲಿ 9 ಸಾವಿರ ಬಾಕ್ಸ್ (ಒಂದು ಬಾಕ್ಸ್‌ನಲ್ಲಿ 15 ಕೆ.ಜಿ) ಟೊಮೆಟೊ ಇಳುವರಿಯನ್ನು ನಿರೀಕ್ಷಿಸಲಾಗಿತ್ತು. ಇದೀಗ 1,800 ಬಾಕ್ಸ್‌ನಷ್ಟು ಮಾತ್ರ ಇಳುವರಿಯಾಗಿದೆ. ಸಸಿ ನೆಟ್ಟ 70 ದಿನಗಳಲ್ಲಿ ಹಣ್ಣು ಬಿಡುತ್ತದೆ. 45 ದಿನಗಳಿಗೊಮ್ಮೆ ಕೊಯ್ಲು ಮಾಡಲಾಗುತ್ತದೆ ಎಂದು ಅವರು ವಿವರಿಸಿದರು.

ಟೊಮೆಟೊ ಎಲೆ ಸುರುಳಿ ರೋಗದಿಂದ ಕೋಲಾರದ ಹಳ್ಳಿಗಳಲ್ಲಿ ಶೇ 50ರಷ್ಟು ಇಳುವರಿ ಕಡಿಮೆಯಾಗಿದೆ ಎಂದು ಐಸಿಎಆರ್– ಐಐಎಚ್‌ಆರ್ ವಿಜ್ಞಾನಿಗಳು ಕ್ಷೇತ್ರ ವೀಕ್ಷಣೆ ನಂತರ ನೀಡಿದ ವರದಿಯಲ್ಲಿ ತಿಳಿಸಿದ್ದಾರೆ.

‘ಟೊಮೆಟೊ ಗುಣಮಟ್ಟವೂ ಪ್ರಮುಖ ವಾಗಿದ್ದು, 72 ಗಂಟೆ ತಾಜಾವಾಗಿ ಉಳಿಯುವ ಹಣ್ಣುಗಳನ್ನು ಮಾತ್ರ ದೂರದ ದೆಹಲಿಯಂತಹ ಪ್ರದೇಶಗಳಿಗೆ ವಿತರಣೆ ಮಾಡಬಹುದು. ಈಗಿನ ಹಣ್ಣುಗಳು 52 ಗಂಟೆಗಳ ನಂತರ ತಮ್ಮ ಗಟ್ಟಿತನವನ್ನು ಕಳೆದುಕೊಳ್ಳುತ್ತಿವೆ. ಗಾತ್ರ, ಬಣ್ಣ ಮತ್ತು ದೃಢತನದಿಂದ ಹಣ್ಣುಗಳ ಗುಣಮಟ್ಟವನ್ನು ನಿರ್ಧರಿಸಲಾಗುತ್ತದೆ. ಹಿಂದಿನ ವರ್ಷಗಳಲ್ಲಿ, ಜೂನ್‌ನಲ್ಲಿ ಸರಾಸರಿ 2.5 ಲಕ್ಷದಿಂದ 3 ಲಕ್ಷ ಬಾಕ್ಸ್‌ಗಳನ್ನು ಪ್ರತಿನಿತ್ಯ ಸರಬರಾಜು ಮಾಡಲಾಗುತ್ತಿತ್ತು. ಈ ಬಾರಿ 28 ಟ್ರಕ್ ಲೋಡ್‌ಗಳನ್ನು (68,912 ಬಾಕ್ಸ್) ಮಾತ್ರ ದೇಶದ 10 ರಾಜ್ಯಗಳಿಗೆ ಕಳುಹಿಸಲಾಗಿದೆ. ಈ ಎಪಿಎಂಸಿಯಿಂದ ಬಾಂಗ್ಲಾದೇಶ ಹಾಗೂ ಶ್ರೀಲಂಕಾಕ್ಕೂ ಟೊಮೆಟೊ ಸರಬರಾಜು ಮಾಡಲಾಗುತ್ತದೆ’ ಎಂದು ಕೋಲಾರ ಎಪಿಎಂಸಿಯ ಕಾರ್ಯದರ್ಶಿ ವಿಜಯಲಕ್ಷ್ಮಿ ಎನ್. ತಿಳಿಸಿದರು.

ಈಗಿರುವ ಬೆಳೆ ಒಣಗುತ್ತಿದ್ದು, ಮುಂದಿನ ಕೊಯ್ಲಿಗೆ 70 ರಿಂದ 100 ದಿನ ಕಾಯಬೇಕಾಗಿದೆ. ಹೀಗಾಗಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಸಮಸ್ಯೆ ಸೃಷ್ಟಿಯಾಗಬಹುದು ಎಂದರು.

‘ಬೆಳೆಗಾರರಿಗೆ ಈ ಬಾರಿ ಬೆಳೆಗೆ ವೆಚ್ಚ ಮಾಡಿರುವ ಹಣವೂ ವಾಪಸ್ ಬರುವುದಿಲ್ಲ. ಒಂದು ಎಕರೆಯಲ್ಲಿ ಟೊಮೆಟೊ ಬೆಳೆಯಲು ಸುಮಾರು ₹2.5 ಲಕ್ಷ ವೆಚ್ಚವಾಗುತ್ತದೆ. ವಾರಕ್ಕೆ ಎರಡು ಬಾರಿ ಔಷಧ ಸಿಂಪಡಣೆ ಮಾಡಲಾ ಗಿದೆ. ರಾಸಾಯನಿಕದ ವೆಚ್ಚ ದುಪ್ಪಟ್ಟಾಗಿರುವುದರಿಂದ ರೈತರ ಹೂಡಿಕೆ ಇನ್ನಷ್ಟು ಹೆಚ್ಚಾಗಿದೆ’ ಎಂದು ರೈತ ಅಬ್ಬಾನಿ ಶಿವಪ್ಪ ಹೇಳಿದರು.

‘ಕೆ.ಸಿ ವ್ಯಾಲಿಯಿಂದ ಸಂಸ್ಕರಣೆಯಾಗದ ನೀರು ಪೂರೈಕೆಯಿಂದ ಕೋಲಾರದ ಭಾಗದಲ್ಲಿ ಟೊಮೆಟೊಗೆ ಕೀಟಬಾಧೆ ಹಾಗೂ ರೋಗ ಹೆಚ್ಚಾಗುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸಲು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ರೈತರು ಮನವಿ ಮಾಡಿಕೊಂಡಿದ್ದಾರೆ. ಆರು ತಿಂಗಳಿಂದ ಎಲೆ ಸುರುಳಿ ರೋಗದಿಂದ ರೈತರಿಗೆ ಸಮಸ್ಯೆ ಉಂಟಾಗುತ್ತಿದೆ’ ಎಂದರು.

ಕಳೆದ ವರ್ಷವೂ ಹೆಚ್ಚಿನ ಮಳೆಯಿಂದಾಗಿ ಹಣ್ಣು ಬಣ್ಣ ಕಳೆದುಕೊಳ್ಳುವ ಜೊತೆಗೆ ಇಳುವರಿ ಕುಸಿದಿತ್ತು. ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಬಹುತೇಕ ಭಾಗಗಳಲ್ಲಿ ಈ ವರ್ಷ ರೋಗ ಬಾಧಿಸುತ್ತಿದ್ದು, ಶೇ 10ರಷ್ಟು ಬೆಳೆ ನಷ್ಟವಾಗಿದೆ ಎಂದು ತೋಟಕಾರಿಕೆ ಇಲಾಖೆಯ ಕೋಲಾರ ಜಿಲ್ಲೆಯ ಉಪ ನಿರ್ದೇಶಕ ಎಸ್.ಆರ್. ಕುಮಾರಸ್ವಾಮಿ ಹೇಳಿದರು.

# ಹಿಂಬಾಕಿ ಇದ್ದರೂ ‘ಗೃಹಜ್ಯೋತಿ’ಗೆ ಅರ್ಹರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಹಕರು ವಿದ್ಯುತ್ ಬಿಲ್ ಹಿಂಬಾಕಿ ಉಳಿಸಿಕೊಂಡಿದ್ದರೂ ‘ಗೃಹಜ್ಯೋತಿ’ ಯೋಜನೆಯ ಪ್ರಯೋಜನ ಸಿಗಲಿದೆ. ಆದರೆ, ಹಿಂಬಾಕಿ ಮೊತ್ತವನ್ನು ಸೆ. 30ರ ಒಳಗೆ (ಮೂರು ತಿಂಗಳು ಕಾಲಾವಕಾಶ) ಪಾವತಿಸಬೇಕು’ ಎಂದು ಇಂಧನ ಇಲಾಖೆ ತಿಳಿಸಿದೆ.

ಗೃಹಜ್ಯೋತಿ ಯೋಜನೆಗೆ ಗ್ರಾಹಕರು ಜುಲೈ 25ರ ಒಳಗೆ ನೋಂದಾಯಿಸಿಕೊಂಡರೆ, ಆಗಸ್ಟ್ ತಿಂಗಳ ಬಿಲ್‌ನಲ್ಲಿ ಪ್ರಯೋಜನ ಸಿಗಲಿದೆ. ಅದೇ ರೀತಿ ಜುಲೈ 25ರಿಂದ ಆಗಸ್ಟ್ 25ರ ಒಳಗೆ ನೋಂದಾಯಿಸಿಕೊಂಡರೆ ಸೆಪ್ಟೆಂಬರ್ ತಿಂಗಳ ಬಿಲ್‌ನಲ್ಲಿ ಪ್ರಯೋಜನ ದೊರೆಯಲಿದೆ (ಪ್ರತಿ ತಿಂಗಳು 25ನೇ ತಾರೀಕಿನಿಂದ ನಂತರದ ತಿಂಗಳ 25ನೇ ತಾರೀಕಿನವರೆಗೆ ಬಿಲ್ ಮಾಡಲಾಗುತ್ತದೆ).

ಯೋಜನೆಯ ಪ್ರಯೋಜನ ಪಡೆಯಲು ವಿದ್ಯುತ್ ಬಳಕೆಯ ಸರಾಸರಿ 200 ಯೂನಿಟ್ ಮೀರಿರಬಾರದು. ಗ್ರಾಹಕರು ಜುಲೈ 25ರ ನಂತರ ಅರ್ಜಿ ಸಲ್ಲಿಸಿದರೆ ಅವರಿಗೆ ಆಗಸ್ಟ್ ತಿಂಗಳಲ್ಲಿ ಬರುವ ಬಿಲ್‌ನಲ್ಲಿ ಪ್ರಯೋಜನ ಸಿಗುವುದಿಲ್ಲ. ಆದರೆ, ಯೋಜನೆಯ ಪ್ರಯೋಜನವನ್ನು ಸೆಪ್ಟೆಂಬರ್ ತಿಂಗಳಲ್ಲಿ ಪಡೆಯಲಿದ್ದಾರೆ. ಹೀಗಾಗಿ, ಯೋಜನೆಯ ಪ್ರಯೋಜನ ಪಡೆಯಲು ತಕ್ಷಣವೇ ನೋಂದಣಿ ಮಾಡಿಕೊಳ್ಳಬೇಕು ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

**ಧಾರವಾಡ ಕಡೆಗೆ ಶೇ 70, ಬೆಂಗಳೂರು ಕಡೆಗೆ ಶೇ 76 ಸೀಟು ಭರ್ತಿ**

# ವಂದೇ ಭಾರತ್‌ಗೆ ಉತ್ತಮ ಸ್ಪಂದನೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಐದು ದಿನದ ಹಿಂದೆ ಬೆಂಗಳೂರು-ಧಾರವಾಡ ನಡುವೆ ಆರಂಭಗೊಂಡಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ವಾರಾಂತ್ಯದಲ್ಲಿ ಶೇ 70ಕ್ಕೂ ಹೆಚ್ಚು ಸೀಟುಗಳು ಭರ್ತಿಯಾಗಿದ್ದವು. ಪ್ರಯಾಣಿಕರ ಉತ್ತಮ ಸ್ಪಂದನೆಯಿಂದ ಈ ರೈಲು ಆರಂಭಿಕ ಯಶಸ್ಸನ್ನು ಪಡೆದಿದೆ.

8 ಕೋಚ್‌ಗಳ ಈ ರೈಲಿನಲ್ಲಿ 52 ಸೀಟುಗಳು ಎಕ್ಸಿಕ್ಯುಟಿವ್ ಕ್ಲಾಸ್‌ದ್ದಾಗಿವೆ. 478 ಸೀಟುಗಳು ಎಸಿ ಚೇರ್ ಕಾರ್ ಆಗಿವೆ. ಬೆಂಗಳೂರಿನಿಂದ ಬೆಳಿಗ್ಗೆ ಹೊರಟರೆ ಮಧ್ಯಾಹ್ನದೊಳಗೆ ಧಾರವಾಡಕ್ಕೆ ತಲುಪುವ, ಮಧ್ಯಾಹ್ನ ಧಾರವಾಡದಿಂದ ಹೊರಟು ಸಂಜೆ ಬೆಂಗಳೂರಿಗೆ ತಲುಪುತ್ತಿರುವುದು ಪ್ರಯಾಣಿಕರ ಸ್ಪಂದನೆ ಜಾಸ್ತಿಯಾಗಲು ಕಾರಣವಾಗಿದೆ. ಇತರೇ ರೈಲುಗಳಿಗಿಂತ ದರ ಬಹಳ ಅಧಿಕವಿದ್ದರೂ ನೂಕುನುಗ್ಗಲು ಇಲ್ಲದ, ಸುಖ ಪ್ರಯಾಣಕ್ಕಾಗಿ ವಂದೇ ಭಾರತ್‌ಗೆ ಆದ್ಯತೆ ನೀಡುತ್ತಿದ್ದಾರೆ.

‘ಬೆಂಗಳೂರಿನಿಂದ ದಾವಣಗೆರೆಗೆ ಬಹಳ ಬೇಗ ತಲುಪುತ್ತಿದೆ. ಕರಜಗಿಯಿಂದ ನಿಧಾನವಾಗುತ್ತದೆ. ಕುಂದಗೋಳದ ನಂತರ ಸಿಗುವ ಕ್ಲಿಷ್ಟ ಸೇತುವೆಗಳು, ತಿರುವುಗಳು ಇದಕ್ಕೆ ಕಾರಣ. ನಾನು ಬೆಂಗಳೂರಿನಿಂದ ಧಾರವಾಡಕ್ಕೆ ಇದೇ ರೈಲಲ್ಲಿ ಹೋಗಿದ್ದು, ನಿಗದಿತ ಸಮಯಕ್ಕಿಂತ 15 ನಿಮಿಷ ಮೊದಲೇ ತಲುಪಿತ್ತು. ಆಧುನಿಕ ಆಸನ, ಉತ್ತಮ ಸೌಲಭ್ಯಗಳಿರುವ ಈ ರೈಲಿನಲ್ಲಿ ಸದ್ದೇ ಇಲ್ಲ. ಪ್ರಯಾಣ ಸಾಗಿದ್ದೇ ಗೊತ್ತಾಗುವುದಿಲ್ಲ’ ಎಂದು ಪ್ರಯಾಣಿಕ ಕೃಷ್ಣಕುಮಾರ್ ಅವರು ‘ಪ್ರಜಾವಾಣಿ’ ಜೊತೆಗೆ ಅನುಭವ ಹಂಚಿಕೊಂಡರು.

ಪ್ರಯಾಣಿಕರಿಗೆ ಉತ್ತಮ ಸೌಲಭ್ಯ, ವೇಗವಾದ ಪ್ರಯಾಣ ಸಿಗುತ್ತಿರುವುದರಿಂದ ದಿನದಿಂದ ದಿನಕ್ಕೆ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿದೆ. ಮೈಸೂರು–ಚೆನ್ನೈ ವಂದೇ ಭಾರತ್ ಯಶಸ್ವಿಯಾದಂತೆ ಬೆಂಗಳೂರು– ಧಾರವಾಡ ವಂದೇ ಭಾರತ್ ಎಕ್ಸ್‌ಪ್ರೆಸ್ ಕೂಡ ಯಶಸ್ವಿಯಾಗಲಿದೆ ಎಂದು ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ ವಿಶ್ವಾಸ ವ್ಯಕ್ತಪಡಿಸಿದರು.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು

**ಬೆಂಗಳೂರು–ಧಾರವಾಡ ವಂದೇ ಭಾರತ್‌ನಲ್ಲಿ ಪ್ರಯಾಣಿಸಿದವರ ಪ್ರಮಾಣ (ಶೇ)**

| ದಿನಾಂಕ | ಎಸಿ ಚೇರ್ ಕಾರ್ | ಎಕ್ಸಿಕ್ಯುಟಿವ್ ಕ್ಲಾಸ್ |
|---|---|---|
| ಜೂನ್ 28 | 31 | 53 |
| ಜೂನ್ 29 | 68 | 75 |
| ಜೂನ್ 30 | 42 | 53 |
| ಜುಲೈ 1 | 70 | 76 |

### ಮೈಸೂರು–ಚೆನ್ನೈ ವಂದೇ ಭಾರತ್‌ಗೂ ಪ್ರಯಾಣಿಕರ ಕೊರತೆ ಇಲ್ಲ

ಬೆಂಗಳೂರು ಮೂಲಕ ಸಾಗುವ ಮೈಸೂರು–ಚೆನ್ನೈ ವಂದೇ ಭಾರತ್ ರೈಲು ಕಳೆದ ವರ್ಷ ನವೆಂಬರ್‌ನಲ್ಲಿ ಆರಂಭವಾಗಿತ್ತು. ಸರಾಸರಿ ಶೇ 75ಕ್ಕಿಂತ ಹೆಚ್ಚು ಸೀಟ್ ಭರ್ತಿಯಾಗುತ್ತಿವೆ.

ಮೈಸೂರಿನಿಂದ ಚೆನ್ನೈಗೆ ಜೂನ್ ತಿಂಗಳಲ್ಲಿ ಎಸಿ ಚೇರ್ ಕಾರ್‌ನಲ್ಲಿ ಶೇ 68ರಷ್ಟು ಜನರು ಪ್ರಯಾಣಿಸಿದ್ದರೆ, ಎಕ್ಸಿಕ್ಯುಟಿವ್ ಕ್ಲಾಸ್‌ನಲ್ಲಿ ಶೇ 77 ಜನರು ಪ್ರಯಾಣಿಸಿದ್ದರು. ಚೆನ್ನೈಯಿಂದ ಮೈಸೂರಿಗೆ ಹೆಚ್ಚು ಪ್ರಯಾಣಿಕರು ಈ ರೈಲಿನಲ್ಲಿ ಬಂದಿದ್ದಾರೆ. ಎಸಿ ಚೇರ್ ಕಾರ್‌ನಲ್ಲಿ ಶೇ 79ರಷ್ಟು ಮತ್ತು ಎಕ್ಸಿಕ್ಯುಟಿವ್ ಕ್ಲಾಸ್‌ನಲ್ಲಿ ಶೇ 83ರಷ್ಟು ಜನರು ಪ್ರಯಾಣಿಸಿದ್ದಾರೆ ಎಂದು ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕಿ ಕುಸುಮಾ ಹರಿಪ್ರಸಾದ್ ಮಾಹಿತಿ ನೀಡಿದರು.

‘ತುಮ್ಹಾರೆ ಸಿವಾ ಔರ್ ಕೋಯಿ ನಹಿ’ ನೃತ್ಯರೂಪಕ

# ಹಿಂದಿಯಲ್ಲಿ ವಚನಗಳ ಸಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 12ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಗೆ ಕಾರಣವಾಗಿದ್ದ ಶರಣರ ವಚನಗಳನ್ನು ನೃತ್ಯರೂಪಕಗಳ ಮೂಲಕ ಕಲಾವಿದರು ಕಟ್ಟಿಕೊಟ್ಟರು. ಪ್ರೇಕ್ಷಕರು ತನ್ಮಯರಾಗಿ ನೃತ್ಯಗಳನ್ನು ವೀಕ್ಷಿಸಿದರು.

ಬಸವಣ್ಣರ ವಚನಗಳನ್ನು ಆಧರಿಸಿ ಹಿಂದಿ ಭಾಷೆಯಲ್ಲಿ ‘ತುಮ್ಹಾರೆ ಸಿವಾ ಔರ್ ಕೋಯಿ ನಹಿ’ (ನೀನಲ್ಲದೆ ಮತ್ತಾರೂ ಇಲ್ಲವಯ್ಯ) ನೃತ್ಯರೂಪಕವನ್ನು ದೇಶದ 14 ರಾಜ್ಯಗಳಲ್ಲಿ ಪ್ರದರ್ಶಿಸಲು ಸಾಣೇಹಳ್ಳಿ ಶಿವಕುಮಾರ ಕಲಾಸಂಘ ಮುಂದಾಗಿದೆ. ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಭಾನುವಾರ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕನ್ನಡದಲ್ಲಿಯೇ ಕಲಾಸಂಘವು ನೃತ್ಯರೂಪಕ ಪ್ರದರ್ಶಿಸಿತು.

‘ನೀ ಒಲಿದರೆ ಕೊರಡು ಕೊನರುವುದಯ್ಯ’, ‘ನುಡಿದರೆ ಮುತ್ತಿನ ಹಾರದಂತಿರಬೇಕು’, ‘ವಚನದಲ್ಲಿ ನಾಮಾಮೃತ ತುಂಬಿ’, ‘ತಂದೆಯೂ ನೀನು ತಾಯಿಯು ನೀನು’ ಹೀಗೆ ಅನೇಕ ವಚನಗಳನ್ನು ನೃತ್ಯ ಮತ್ತು ಭಾವಾಭಿನಯಗಳ ಮೂಲಕ ಪ್ರೇಕ್ಷರಿಗೆ ತಲುಪಿಸಿದರು.

ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾರ್ಗದರ್ಶನದಲ್ಲಿ ಶ್ರೀನಿವಾಸ ಜಿ.ಕಪ್ಪಣ್ಣ ಅವರ ಪರಿಕಲ್ಪನೆಯ ಈ ರಂಗರೂಪಕವನ್ನು ಸ್ನೇಹ ಕಪ್ಪಣ್ಣ ವಿನ್ಯಾಸ ಮಾಡಿದ್ದರು. ವಚನಗಳನ್ನು ನಿವೃತ್ತ ಹಿರಿಯ ವಿಜ್ಞಾನಿಗಳಾದ ಕುಲವಂತ್ ಸಿಂಗ್ ಮತ್ತು ಸುರೇಶ್ ಕುಮಾರ್ ಹಿಂದಿಗೆ ಅನುವಾದಿಸಿದ್ದರು. 24 ಕಲಾವಿದರು, 6 ತಂತ್ರಜ್ಞರು ಸೇರಿ 30 ಮಂದಿಯ ತಂಡವು 14 ರಾಜ್ಯಗಳ 25 ನಗರಗಳಲ್ಲಿ 50ಕ್ಕೂ ಹೆಚ್ಚು ಪ್ರದರ್ಶನ ನೀಡಲಿದ್ದಾರೆ.

ನಗರದಲ್ಲಿ ಸಾಣೇಹಳ್ಳಿ ಶಿವಕುಮಾರ ಕಲಾಸಂಘ ಆಯೋಜಿಸಿದ್ದ ದೇಶದ ಪ್ರಥಮ ವಚನ ಸಾಂಸ್ಕೃತಿಕ ಅಭಿಯಾನದಲ್ಲಿ ಕಲಾವಿದರು ‘ಬಸವಣ್ಣನವರ ವಚನಗಳನ್ನು ಆಧರಿಸಿದ ನೃತ್ಯರೂಪಕ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

## ‘ಪಠ್ಯದಲ್ಲಿ ಬದಲಾವಣೆ ತನ್ನಿ’

ಪಠ್ಯ ಪರಿಷ್ಕರಣೆಯ ಹೆಸರಲ್ಲಿ ಬಸವಣ್ಣ, ಕುವೆಂಪು ಸಹಿತ ಅನೇಕ ಮಹನೀಯರ ಪಠ್ಯಗಳನ್ನು ಕೈ ಬಿಡಲಾಗಿತ್ತು. ಬಳಿಕ ಕೆಲವನ್ನು ಸೇರಿಸಲಾಗಿತ್ತು. ಈ ಸರ್ಕಾರ ಈಗ ಪಠ್ಯ ಸರಿಪಡಿಸುವ ಕೆಲಸಕ್ಕೆ ಮುಂದಾಗಿರುವುದು ಒಳ್ಳೆಯ ವಿಚಾರ. ಇದರ ಜತೆಗೆ ವಚನಗಳು ವಿದ್ಯಾರ್ಥಿಗಳಿಗೆ ಪಠ್ಯಗಳಾಗಬೇಕು. ಆಗ ಮಕ್ಕಳ ಮನೋಭಾವ ಬದಲಾಗಲು ಸಾಧ್ಯ ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದರು.

**ಸಿದ್ದರಾಮಯ್ಯ ಚಾಲನೆ:** ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ‘ಜಾತಿಗೆ ಚಲನೆ ಇಲ್ಲ. ಚಲನೆ ಇಲ್ಲದಲ್ಲಿ ಬದಲಾವಣೆ ಸಾಧ್ಯವಿಲ್ಲ. ಬಸವಣ್ಣಾದಿ ಶರಣರು 12ನೇ ಶತಮಾನದಲ್ಲಿಯೇ ಇದನ್ನು ಬದಲಾಯಿಸಲು ಪ್ರಯತ್ನಿಸಿದರು. ಈ ನೃತ್ಯರೂಪಕವು ನೋಡುಗರಿಗೆ ಖುಷಿ ನೀಡುವುದರ ಜೊತೆಗೆ ವಚನಗಳ ಸಂದೇಶ ತಲುಪಬೇಕು’ ಎಂದು ಅವರು ಆಶಿಸಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಶಾಸಕರಾದ ಶಾಮನೂರು ಶಿವಶಂಕರಪ್ಪ, ಶ್ರೀನಿವಾಸ್, ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಶುಭ ಹಾರೈಸಿದರು.

ಡಾ.ಫ.ಗು. ಹಳಕಟ್ಟಿ ಫೌಂಡೇಶನ್ ಬೆಂಗಳೂರಿನ ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ ಕುಳಿತವರು) ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಮತ್ತು ಸಮಾಜ ಸೇವಕಿ ಎಸ್.ಜಿ. ಸುಶೀಲಮ್ಮ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ವಚನ ಪಿತಾಮಹ ಫ.ಗು. ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಿದರು. ಫೌಂಡೇಶನ್‌ನ ಕಾರ್ಯ ನಿರ್ವಾಹಕ ಟ್ರಸ್ಟಿ ಪವಿತ್ರಾ ಹಳಕಟ್ಟಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಬೇಲಿಮಠದ ಶಿವರುದ್ರ ಸ್ವಾಮೀಜಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹಾಗೂ ಫೌಂಡೇಶನ್‌ನ ಟ್ರಸ್ಟಿ ಶೀಲಾ ಹಳಕಟ್ಟಿ ಇದ್ದಾರೆ. ಈ ಪ್ರಶಸ್ತಿ ತಲಾ ₹ 1 ಲಕ್ಷ ನಗದು ಒಳಗೊಂಡಿದೆ ಪ್ರಜಾವಾಣಿ ಚಿತ್ರ

# ಮುನಿಯಪ್ಪ, ಹಂದೆಗೆ ಗೌರವ ಡಾಕ್ಟರೇಟ್

**ಕೋಲಾರ:** ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಪಿಂಡಿ ಪಾಪನಹಳ್ಳಿ ತಮಟೆ ಕಲಾವಿದ ಮುನಿವೆಂಕಟಪ್ಪ, ನಾಲ್ಕು ದಶಕಗಳಿಂದ ದಲಿತ ಪರ ಹೋರಾಟದಲ್ಲಿ ತೊಡಗಿರುವ ಕೋಲಾರದ ಸಿ.ಎಂ. ಮುನಿಯಪ್ಪ ಹಾಗೂ ಸೆಲ್ಕೊ ಇಂಡಿಯಾದ ಹರೀಶ್ ಹಂದೆ ಅವರಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಕಟಿಸಿದೆ.


ಮುನಿಯಪ್ಪ

ಹರೀಶ್ ಹಂದೆ

ಮುನಿವೆಂಕಟಪ್ಪ

ನಗರ ಹೊರ ವಲಯದ ನಂದಿನಿ ಪ್ಯಾಲೇಸ್‌ನಲ್ಲಿ ಮಂಗಳವಾರ (ಜುಲೈ 4) ನಡೆಯಲಿರುವ ವಿವಿ 3ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಹಾಗೂ ಪದವಿ ಪ್ರದಾನ ಮಾಡಲಿದ್ದಾರೆ.

ಪಿ.ಸಾಯಿನಾಥ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಪಾಲ್ಗೊಳ್ಳಲಿದ್ದಾರೆ ಎಂದು ವಿಶ್ವವಿದ್ಯಾಲಯ ಕುಲಪತಿ ಪ್ರೊ.ನಿರಂಜನ ವಾನಳ್ಳಿ ಭಾನುವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

# ‘ಮೌಢ್ಯ ಆಚರಣೆ ಜೀವಂತ’

## ಮೂವರಿಗೆ ‘ಫ.ಗು.ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಮಾಜ ಸುಧಾರಕ ಬಸವಣ್ಣ ಅವರು 12ನೇ ಶತಮಾನದಲ್ಲಿಯೇ ಮೌಢ್ಯಗಳ ಆಚರಣೆ ಹೊಡೆದೊಡಿಸಲು ಶ್ರಮಿಸಿದರು. ಆದರೆ, ಇನ್ನೂ ಮೌಢ್ಯಗಳ ಆಚರಣೆ ಜೀವಂತ ವಾಗಿಯೇ ಇದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಡಾ.ಫ.ಗು.ಹಳಕಟ್ಟಿ ಫೌಂಡೇಶನ್ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಮತ್ತು ಸಮಾಜ ಸೇವಕಿ ಎಸ್.ಜಿ.ಸುಶೀಲಮ್ಮ ಅವರಿಗೆ ‘ವಚನ ಪಿತಾಮಹ ಫ.ಗು.ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು.

‘ಅನುಭವ ಮಂಟಪದ ಆಶಯವನ್ನು, ವಚನಗಳ ಮಹತ್ವವನ್ನು ಮುಂದಿನ ತಲೆಮಾರುಗಳಿಗೆ ದಾಟಿಸಿದವರಲ್ಲಿ ಫ.ಗು.ಹಳಕಟ್ಟಿ ಅವರು ಪ್ರಮುಖರು’ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ‘ಹತ್ತಾರು ವಿಶ್ವವಿದ್ಯಾಲಯ, ಸರ್ಕಾರ ಮಾಡಬಹುದಾದ ಕೆಲಸವನ್ನು ಫ.ಗು. ಹಳಕಟ್ಟಿ ಮಾಡಿದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

# ಇಬ್ಬರು ಮಕ್ಕಳ ತಾಯಿ ರಾಜ್ಯಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

**ಆನೇಕಲ್:** ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಬಿ.ಇಡಿ ಪದವಿಯಲ್ಲಿ ಎರಡು ಮಕ್ಕಳ ತಾಯಿಯಾಗಿರುವ ಎಂ.ಎಲ್.ಪವಿತ್ರ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸುವುದರೊಂದಿಗೆ ಚಿನ್ನದ ಪದಕ ಪಡೆದಿದ್ದಾರೆ.

ತಾಲ್ಲೂಕಿನ ಸರ್ಜಾಪುರ ಸಮೀಪದ ಸುಲ್ತಾನ್‌ಪಾಳ್ಯದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹಶಿಕ್ಷಕಿಯಾಗಿರುವ ಪವಿತ್ರ ಅವರು ಭಾನುವಾರ ನಡೆದ ವಿಶ್ವವಿದ್ಯಾಲಯದ 18ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಂದ ಪದವಿ ಮತ್ತು ಪದಕ ಸ್ವೀಕರಿಸಿದರು.

‘ಓದಬೇಕು ಎಂಬ ಛಲವಿದ್ದರೆ ಸಾಧಿಸಲು ಅವಕಾಶಗಳಿವೆ. ಗೃಹಿಣಿಯಾಗಿ, ಎರಡು ಮಕ್ಕಳ ತಾಯಿಯಾಗಿರುವ ನಾನು ಸತತ ಅಧ್ಯಯನ ಮಾಡಿ ಬಿ.ಇಡ್‌ನಲ್ಲಿ ಪ್ರಥಮ ಸ್ಥಾನ ಪಡೆಯಲು ಸಾಧ್ಯವಾಗಿರುವುದು ಸಂತಸ ತಂದಿದೆ’ ಎಂ.ಎಲ್.ಪವಿತ್ರ ಹೇಳಿದರು.

‘ನನ್ನ ಪತಿ ಸಂತೋಷ್ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದಾರೆ. ಅವರ ಪ್ರೋತ್ಸಾಹ ಮತ್ತು ವಿಶ್ವವಿದ್ಯಾಲಯವು ನೀಡಿದ ಉತ್ತಮ ಮಾರ್ಗದರ್ಶನದಿಂದ ಸಾಧನೆ ಸಾಧ್ಯವಾಗಿದೆ. ಸೇವಾ ನಿರತರಾಗಿರುವವರಿಗೆ ಮುಕ್ತ ವಿಶ್ವವಿದ್ಯಾಲಯದಲ್ಲಿ ವಿವಿಧ ಪದವಿಗಳನ್ನು ಪಡೆಯಲು ಉತ್ತಮ ವೇದಿಕೆಯಾಗಿದೆ’ ಎಂದರು.

**ಗುರು ತೇರಿನಲ್ಲಿ ಮೆರವಣಿಗೆ, ಹೂ ಎರಚಿ ಅಭಿಮಾನ ಮೆರೆದ ಶಿಷ್ಯಂದಿರು**

# ನಿವೃತ್ತ ಉಪ ಪ್ರಾಚಾರ್ಯರ ಅದ್ದೂರಿ ಮೆರವಣಿಗೆ

ಪ್ರಜಾವಾಣಿ ವಾರ್ತೆ

**ಯಲಬುರ್ಗಾ (ಕೊಪ್ಪಳ ಜಿಲ್ಲೆ):** ತಾಲ್ಲೂಕಿನ ಹಿರೇವಂಕಲಕುಂಟಾ ಗ್ರಾಮದ ಪ್ರೌಢಶಾಲೆ, ಪಿಯು ಕಾಲೇಜಿನಲ್ಲಿ 34 ವರ್ಷ ಸೇವೆ ಸಲ್ಲಿಸಿದ ಉಪ ಪ್ರಾಚಾರ್ಯ ಚಂದ್ರಕಾಂತಯ್ಯ ಕಲ್ಯಾಣಮಠ ಅವರು ಜೂನ್ 30ರಂದು ಸೇವಾ ನಿವೃತ್ತಿ ಹೊಂದಿದ್ದರಿಂದ ಅವರ ಶಿಷ್ಯ ಬಳಗ ಭಾನುವಾರ ಅದ್ದೂರಿಯಾಗಿ ಗುರುವಂದನೆ ಸಲ್ಲಿಸಿತು.

ತಾಲ್ಲೂಕಿನ ಹಿರೇವಂಕಲಕುಂಟಾ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಮೂರು ದಶಕದ ಹಿಂದೆಯೇ ನಿಯೋಜನೆಗೊಂಡು ಇಲ್ಲಿವರೆಗೆ ವಿವಿಧ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ಹಿರೇವಂಕಲಕುಂಟಾ ಹೋಬಳಿ ವ್ಯಾಪ್ತಿಯ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ಬೋಧನೆ ಮಾಡಿದ್ದಾರೆ.

ಇವರ ವಿದ್ಯಾರ್ಥಿಗಳು ವಕೀಲರು, ವೈದ್ಯರು, ಎಂಜಿನಿಯರ್, ಶಿಕ್ಷಕರು, ಪೊಲೀಸರು ಹಾಗೂ ಜನಪ್ರತಿನಿಧಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಯಲಬುರ್ಗಾ ತಾಲ್ಲೂಕು ಹಿರೇವಂಕಲಕುಂಟಾ ಗ್ರಾಮದಲ್ಲಿ ಭಾನುವಾರ ಹಳೆಯ ವಿದ್ಯಾರ್ಥಿಗಳ ಬಳಗ ಆಯೋಜಿಸಿದ್ದ ಗುರು ತೇರು ಕಾರ್ಯಕ್ರಮದ ಪ್ರಯುಕ್ತ ನಿವೃತ್ತ ಉಪಪ್ರಾಚಾರ್ಯ ಚಂದ್ರಕಾಂತಯ್ಯ ಕಲ್ಯಾಣಮಠ ದಂಪತಿ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಗ್ರಾಮದ ವಿವಿಧ ಬೀದಿಗಳಲ್ಲಿ ದಂಪತಿಯ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು. ಗುರು ತೇರು ಎಂಬ ಹೆಸರಿನಡಿಯಲ್ಲಿ ಮೆರವಣಿಗೆ ಮಾಡಲಾಯಿತು. ಜನಪದ ಮೇಳಗಳ ಅಬ್ಬರ, ಹೂವಿನಮಳೆಯ ಜೊತೆಗೆ ಗ್ರಾಮಸ್ಥರ ಅಭಿಮಾನದ ಹೊಳೆಯೇ ಹರಿದಂತಿತ್ತು. ಮೆರವಣಿಗೆಯಲ್ಲಿ ಹಳೆಯ ವಿದ್ಯಾರ್ಥಿಗಳ ಕುಣಿತವು ಜೋರಾಗಿಯೇ ಇತ್ತು.

### ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 18ನೇ ಘಟಿಕೋತ್ಸವ ಸಂಭ್ರಮ

# ಚಿನ್ನದ ಬೆಳಕಲ್ಲಿ ಹೊಳೆದ ಪ್ರತಿಭೆಗಳು

ಪ್ರಜಾವಾಣಿ ವಾರ್ತೆ

ಮೈಸೂರಿನಲ್ಲಿ ಭಾನುವಾರ ನಡೆದ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 18ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕದೊಂದಿಗೆ ನಗೆ ಬೀರಿದ ಫಾತಿಮಾ ಜಹ್ರಾ (ಉರ್ದು) ಎಚ್‌.ಎಂ. ಸೌಭಾಗ್ಯ (ಕನ್ನಡ) ಹಾಗೂ ನಜ್ಮಾ ನಿಖತ್ (ಉರ್ದು) –ಪ್ರಜಾವಾಣಿ ಚಿತ್ರ

**ಮೈಸೂರು:** ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ಘಟಿಕೋತ್ಸವ ಭವನ ಭಾನುವಾರ ಪದವೀಧರರಿಂದ ತುಂಬಿತ್ತು. ಪ್ರತಿಭಾನ್ವಿತರ ಕೊರಳಲ್ಲಿ ಬಂಗಾರದ ಪದಕ, ಪದವಿ ಪಡೆದವರ ಮೊಗದಲ್ಲಿ ಚಿನ್ನದಂಥ ಹೊಳಪಿನ ನಗುವಿತ್ತು. ಹಿರಿಯ ನಾಗರಿಕರು, ಸರ್ಕಾರಿ ನೌಕರರು, ವಕೀಲರು... ಹೀಗೆ ನಾನಾ ವರ್ಗ–ವಯಸ್ಸಿನವರು ಪದವಿ ಪಡೆದು ಸಂಭ್ರಮಿಸಿದರು.

**ಮಾತೃಭಾಷೆಯಲ್ಲಿ 'ಬಂಗಾರ':** ಸಾರ್ವಜನಿಕ ಶಿಕ್ಷಣ ಇಲಾಖೆಯ ತುಮಕೂರು ಡಿಡಿಪಿಐ ಕಚೇರಿಯಲ್ಲಿ ಇಸಿಒ ಆಗಿ ಕೆಲಸ ಮಾಡುತ್ತಿರುವ ಫಾತಿಮಾ ಜಹ್ರಾ ಸ್ನಾತಕೋತ್ತರ ವಿಭಾಗದಲ್ಲಿ ಉರ್ದು ವಿಷಯದಲ್ಲಿ 2 ಚಿನ್ನದ ಪದಕದೊಂದಿಗೆ ಮೊದಲ ರ‍್ಯಾಂಕ್ ತಮ್ಮದಾಗಿಸಿಕೊಂಡರು. ಭೌತವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವೀಧರೆ ಆಗಿರುವ ಫಾತಿಮಾ ಮಾತೃಭಾಷೆಯಲ್ಲಿ ಪದವಿ ಪಡೆಯುವ ಕನಸಿನೊಂದಿಗೆ ಈ ಕೋರ್ಸ್‌ಗೆ ಸೇರಿದ್ದಾಗಿ ಹೇಳಿದರು. ಮುಂದೆ ಪಿಎಚ್‌.ಡಿ ಮಾಡುವ ಕನಸು ತೆರೆದಿಟ್ಟರು.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹಿರೇಮಾಗಡಿ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕಿ ಎಚ್‌.ಎಂ. ಸೌಭಾಗ್ಯ ಕನ್ನಡ ಸ್ನಾತಕೋತ್ತರ ಪದವಿಯಲ್ಲಿ 2 ಬಂಗಾರದ ಪದಕಕ್ಕೆ ಕೊರಳೊಡ್ಡಿದರು. 'ಕೆಲಸದಲ್ಲಿ ಇದ್ದುಕೊಂಡು ಓದುವುದು ಆರಂಭದಲ್ಲಿ ಕಷ್ಟ ಎನಿಸಿತ್ತು. ಕನ್ನಡವನ್ನು ತುಂಬಾ ಇಷ್ಟಪಡುತ್ತೇನೆ. ಹೀಗಾಗಿ ಈ ಸಾಧನೆ ಸಾಧ್ಯವಾಗಿದೆ' ಎಂದು ವಿವರಿಸಿದರು.

**ಗ್ರಂಥಪಾಲಕನಾದ ಎಂಜಿನಿಯರ್:** ಗ್ರಂಥಾಲಯ ವಿಜ್ಞಾನದಲ್ಲಿ (ಎಂ.ಲಿಬ್) ಚಿನ್ನದ ಪದಕ ಪಡೆದ ವಿಷ್ಣು ಹೇಮಂತ ರಾಥೋಡ್ ಮೂಲತಃ ಎಂಜಿನಿಯರಿಂಗ್ ಪದವೀಧರ. ಸದ್ಯ ಬಾಗಲಕೋಟೆ ಜಿಲ್ಲೆಯ ಬದಾಮಿ ಪಟ್ಟಣದ ಕಾಳಿದಾಸ ಶಿಕ್ಷಣ ಸಂಸ್ಥೆಯಲ್ಲಿ ಗ್ರಂಥಪಾಲಕರಾಗಿ ಕೆಲಸ ಮಾಡುತ್ತಿದ್ದಾರೆ.

'ಗ್ರಂಥಾಲಯ ವಿಜ್ಞಾನದಲ್ಲಿ ಮೊದಲಿನಿಂದಲೂ ಆಸಕ್ತಿ ಇತ್ತು. ನನ್ನ ಎಂಜಿನಿಯರಿಂಗ್ ಜ್ಞಾನ ಬಳಸಿಕೊಂಡು ಈ ಕ್ಷೇತ್ರಕ್ಕೆ ಅಗತ್ಯವಾದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ಕನಸಿನೊಂದಿಗೆ ಈ ಪದವಿ ಪಡೆದಿದ್ದೇನೆ' ಎಂದು ವಿಷ್ಣು ಹೇಳಿದರು.

**66ನೇ ವಯಸ್ಸಿನಲ್ಲಿ ಪದವಿ:** ಚೆನ್ನೈ ಮೂಲದ ನಿವೃತ್ತ ಬ್ಯಾಂಕ್ ಅಧಿಕಾರಿ ಅರ್ಧನಾರಿ ತಮ್ಮ 66ನೇ ವಯಸ್ಸಿನಲ್ಲಿ ಸಂಸ್ಕೃತ ವಿಷಯದಲ್ಲಿ ನಗದು ಪುರಸ್ಕಾರದೊಂದಿಗೆ ಸ್ನಾತಕೋತ್ತರ ಪದವಿ ಪ್ರಮಾಣಪತ್ರ ಸ್ವೀಕರಿಸಿ ಗಮನಸೆಳೆದರು. 'ಈಗಾಗಲೇ ನಾಲ್ಕು ವಿಷಯದಲ್ಲಿ ಪದವಿ ಪಡೆದಿದ್ದೇನೆ. ಸಂಸ್ಕೃತ ವಿಷಯದಲ್ಲಿ ಓದಿಗಾಗಿ ಹುಡುಕುತ್ತಿದ್ದಾಗ ಮುಕ್ತ ವಿ.ವಿ. ಬಗ್ಗೆ ತಿಳಿದು ಇಲ್ಲಿಗೆ ದಾಖಲಾದೆ. ಮುಂದೆ ಇದೇ ವಿಷಯದಲ್ಲಿ ಪಿಎಚ್‌.ಡಿ ಮಾಡಬೇಕು ಎಂದಿದ್ದೇನೆ' ಎಂದು ಅವರು ಹೇಳಿದರು.

**ಪದವಿ ಪ್ರದಾನ:** ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಹೈಕೋರ್ಟ್ ನ್ಯಾಯಮೂರ್ತಿ ಅಶೋಕ್ ಕಿಣಗಿ ಪದವಿ ಪ್ರದಾನ ಮಾಡಿದರು. ಶಿಕ್ಷಣ ತಜ್ಞರಾದ ಬೆಂಗಳೂರಿನ ಎನ್. ರಾಮಚಂದ್ರಯ್ಯ ಹಾಗೂ ಎಸ್‌.ಎನ್. ವೆಂಕಟಲಕ್ಷ್ಮಿನರಸಿಂಹ ರಾಜು ಅವರಿಗೆ ಗೌರವ ಡಾಕ್ಟರೇಟ್ ನೀಡಲಾಯಿತು. ಗೌರವ ಡಾಕ್ಟರೇಟ್‌ಗೆ ಆಯ್ಕೆಯಾಗಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಬಂದಿರಲಿಲ್ಲ. ಕುಲಪತಿ ಪ್ರೊ. ಶರಣಪ್ಪ ಹಲಸೆ ಇದ್ದರು.

### ಏಕೈಕ ಪಿಎಚ್‌.ಡಿ ಪದವೀಧರೆ

ಎನ್‌. ಭಾಗ್ಯಶ್ರೀ

ಈ ಬಾರಿ ಘಟಿಕೋತ್ಸವದಲ್ಲಿ ಒಬ್ಬರಷ್ಟೆ ಪಿಎಚ್‌.ಡಿ ಪದವಿ ಪಡೆದರು. ಅವರು ಮೈಸೂರಿನ ಎನ್‌. ಭಾಗ್ಯಶ್ರೀ.

ರಾಜ್ಯಶಾಸ್ತ್ರ ವಿಭಾಗದಲ್ಲಿ 'ಭಾರತದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ–ಕಾರ್ಯಾಚರಣೆ ಮತ್ತು ಮುಂದಿನ ನಿರೀಕ್ಷೆಗಳು' ಕುರಿತು ಅವರು ಸಂಶೋಧನಾ ಪ್ರಬಂಧ ಮಂಡಿಸಿದ್ದರು. ಮೈಸೂರು ವಿ.ವಿ. ಸಂಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಲೇ, ಐದಾರು ವರ್ಷ ದೆಹಲಿ, ಬೆಂಗಳೂರು ಮೊದಲಾದ ಕಡೆಗಳಲ್ಲಿ ಸುತ್ತಿ ಸಂಶೋಧನಾ ಪ್ರಬಂಧ ಸಿದ್ಧಪಡಿಸಿದ ಕಸರತ್ತನ್ನು ಅವರು ಹಂಚಿಕೊಂಡರು. ಕುಟುಂಬದ ಸಹಕಾರವನ್ನೂ ನೆನೆದರು.

# 'ರಾಜ್ಯದಲ್ಲೀಗ ವೈಎಸ್‌ಟಿ ತೆರಿಗೆ'

### ಮಧ್ಯರಾತ್ರಿವರೆಗೂ ಗುಪ್ತ ಸಭೆ: ಕುಮಾರಸ್ವಾಮಿ ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಹೊಸದಾಗಿ 'ವೈಎಸ್‌ಟಿ' ತೆರಿಗೆ ಆರಂಭವಾಗಿದೆ' ಎಂದು ಜೆಡಿಎಸ್ ಶಾಸಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಸುದ್ದಿಗಾರರ ಜೊತೆ ಅವರು ಭಾನುವಾರ ಮಾತನಾಡಿದರು.

'ವೈಎಸ್‌ಟಿ' ಎಂದರೆ ಏನು' ಎಂಬ ಪ್ರಶ್ನೆಗೆ, 'ಮಧ್ಯರಾತ್ರಿವರೆಗೂ ತಮ್ಮ ಮನೆಗಳಲ್ಲಿ ಅಧಿಕಾರಿಗಳ ಸಭೆ ನಡೆಸುವ ಘನಂದಾರಿ ವ್ಯಕ್ತಿಗಳನ್ನು ಕೇಳಿ? ಈಗಾಗಲೇ ವರ್ಗಾವಣೆ ದಂಧೆಗಾಗಿ ಯಾರನ್ನೆಲ್ಲ ಫೀಲ್ಡಿಗೆ ಇಳಿಸಿ ಗುಪ್ತ ಸಭೆಗಳನ್ನು ಮಾಡುತ್ತಿದ್ದಾರೋ ಅವರನ್ನೇ ಕೇಳಿ? ನೀವೂ ಪತ್ತೆ ಹಚ್ಚಿ' ಎಂದರು.

'ಸಮ್ಮಿಶ್ರ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿ ಆಗಿದ್ದಾಗ ಹಣ ಕೊಟ್ಟು ಹುದ್ದೆ ಪಡೆಯಲು ಬಂದವರನ್ನು ದೂರ ಇಟ್ಟಿದ್ದೆ. ಬಿಡಿಎ ಮೇಲೆ ಬಂದು ಕೂರಲು ಬಂದ ಅಧಿಕಾರಿಯನ್ನು ಹೊರಗಟ್ಟಿದ್ದೆ. ಯಲಹಂಕ ತಹಶೀಲ್ದಾರ್ ಹುದ್ದೆಗೆ ಒಂದೂವರೆ ಕೋಟಿ ಕೊಡುತ್ತೇವೆ ಎಂದವರನ್ನು ಆಚೆ ಇಟ್ಟಿದ್ದೆ. ಇವರು ಈಗ ವೈಎಸ್‌ಟಿ ತೆರಿಗೆ ಶುರು ಮಾಡಿಕೊಂಡಿದ್ದಾರೆ' ಎಂದು ಯತೀಂದ್ರ, ಸಿದ್ದರಾಮಯ್ಯ ಅವರ ಹೆಸರು ಹೇಳದೆ ಟೀಕಿಸಿದರು.

**ಒಂದು ಸರ್ಕಾರ, ಹತ್ತಾರು ಮುಖ್ಯಮಂತ್ರಿಗಳು:** 'ಕಾಂಗ್ರೆಸ್ ಸರ್ಕಾರದಲ್ಲಿ ಈಗಾಗಲೇ ಆಡಳಿತ ಹಳಿ ತಪ್ಪಿದೆ. 'ಒಂದು ಸರ್ಕಾರ, ಹತ್ತಾರು ಮುಖ್ಯಮಂತ್ರಿಗಳು' ಎನ್ನುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ಸಿದ್ದರಾಮಯ್ಯ ಅವರು ಒಬ್ಬರೇ ಮುಖ್ಯಮಂತ್ರಿ ಅಲ್ಲ. ಇಲಾಖೆಗೊಬ್ಬ ಮುಖ್ಯಮಂತ್ರಿ ಇದ್ದಾರೆ. ಒಬ್ಬೊಬ್ಬರು ಮುಖ್ಯಮಂತ್ರಿಯಂತೆ ಹೇಳಿಕೆ ನೀಡುತ್ತಾರೆ' ಎಂದು ಕುಮಾರಸ್ವಾಮಿ ಲೇವಡಿ ಮಾಡಿದರು.

**'ವೈಎಸ್‌ಟಿ' ಜತೆ 'ವಿಎಸ್‌ಟಿ'ಯೂ ಇದೆ– ರವಿಕುಮಾರ್:** 'ರಾಜ್ಯದಲ್ಲಿ ವೈಎಸ್‌ಟಿ ಮಾತ್ರವಲ್ಲ, ವಿಎಸ್‌ಟಿಯೂ ಇದೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್‌. ರವಿಕುಮಾರ್ ಹೇಳಿದ್ದಾರೆ.

'ವೈಎಸ್‌ಟಿ ಎಂದರೆ, ಯತೀಂದ್ರ–ಸಿದ್ದರಾಮಯ್ಯ ಟ್ಯಾಕ್ಸ್. ವಿಎಸ್‌ಟಿ ಎಂದರೆ ವೇಣುಗೋಪಾಲ್–ಸಿದ್ದರಾಮಯ್ಯ ಟ್ಯಾಕ್ಸ್' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸಿದ್ದರಾಮಯ್ಯ ಅಧಿಕೃತವಾಗಿ ಮತ್ತು ಅನಧಿಕೃತವಾಗಿ ವಸೂಲಿ ಮಾಡುವ ತೆರಿಗೆ ಕುರಿತು ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಗೊತ್ತಿದೆ. ಸಿದ್ದರಾಮಯ್ಯ ಹಿಂದೆ ದೇವೇಗೌಡ ಮತ್ತು ಕುಮಾರಸ್ವಾಮಿ ಅವರ ಜೊತೆ ಇದ್ದವರು. ಹೀಗಾಗಿ, ಸಿದ್ದರಾಮಯ್ಯ ಏನೆಂದು ಅವರಿಗೆ ಚೆನ್ನಾಗಿ ಗೊತ್ತಿದೆ. ವೈಎಸ್‌ಟಿ ವಿಷಯ ತಿಳಿಸಿದ ಕುಮಾರಸ್ವಾಮಿ ಅವರಿಗೆ ಅಭಿನಂದನೆಗಳು' ಎಂದು ತಿಳಿಸಿದ್ದಾರೆ.

### ಛಲವಿದ್ದರೆ ಗೆಲುವು ಖಚಿತ– ಎಚ್‌ಡಿಡಿ

ವಿಧಾನಮಂಡಲ ಅಧಿವೇಶನ, ಪಕ್ಷದ ಬಲವರ್ಧನೆ, ಜಿಲ್ಲಾ, ರಾಜ್ಯ ಘಟಕದ ಪುನರ್‌ರಚನೆ, ನೂತನ ಕೋರ್ ಕಮಿಟಿ ರಚನೆ, ಲೋಕಸಭೆ ಚುನಾವಣೆಯಲ್ಲಿ ಅನುಸರಿಸಬೇಕಾದ ಕಾರ್ಯತಂತ್ರದ ಬಗ್ಗೆ ಚರ್ಚಿಸಲು ಪಕ್ಷದ ವರಿಷ್ಠ ಎಚ್‌.ಡಿ. ದೇವೇಗೌಡ ಅವರ ಸಮ್ಮುಖದಲ್ಲಿ ಜೆಡಿಎಸ್ ನಾಯಕರ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ದೇವೇಗೌಡ ಅವರು, 'ಯಾರೂ ಎದೆಗುಂದಬೇಕಿಲ್ಲ. ಪಕ್ಷ ಕಟ್ಟಿ. ಸೋಲಿನಿಂದ ಹತಾಶರಾಗುವುದು ಬೇಡ. ಛಲವಿದ್ದರೆ ಗೆಲುವು ಖಚಿತ. ಅಧೈರ್ಯವೇ ಅವಸಾನಕ್ಕೆ ನಾಂದಿ ಆಗುತ್ತದೆ ಎಚ್ಚರ ಇರಲಿ' ಎಂದು ಕಿವಿಮಾತು ಹೇಳಿದರು.

'ಏಕರೂಪ ನಾಗರಿಕ ಸಂಹಿತೆಯ ಕರಡು ಮೊದಲು ಹೊರಬರಲಿ. ನಂತರ ನಮ್ಮ ನಿಲುವು ಏನೆಂಬುವುದನ್ನು ತಿಳಿಸೋಣ' ಎಂದರು.

'ಇವತ್ತಿನ 'ಪ್ರಜಾವಾಣಿ'ಯಲ್ಲಿ ನ್ಯಾಯಾಂಗ ಆಯೋಗ ವರದಿಗಳ ಬಗ್ಗೆ ವರದಿ ಪ್ರಕಟವಾಗಿದೆ. ಈ ವಿಷಯವನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಿ. 19 ಶಾಸಕರು ಕಡಿಮೆ ಸಂಖ್ಯೆ ಏನಲ್ಲ. ನಾವು ಒಬ್ಬರು ಇಬ್ಬರು ಇದ್ದಾಗಲೇ ಸರ್ಕಾರವನ್ನು ಅಲ್ಲಾಡಿಸಿದ್ದೆವು. ಅದರ ಪರಿಣಾಮ ಅಧಿಕಾರಕ್ಕೂ ಬಂದೆವು' ಎಂದು ಹೇಳಿದರು.

# ಬಿಜೆಪಿ ಪ್ರಮುಖರಿಗೆ ಕಾಂಗ್ರೆಸ್ ಗಾಳ?

ಒಂದನೇ ಪುಟದಿಂದ...

ಈ ಮಧ್ಯೆ ಎಂ.ಪಿ.ರೇಣುಕಾಚಾರ್ಯ ಅವರು ಪಕ್ಷದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ವಿರುದ್ಧ ಬಹಿರಂಗ ಸಮರಕ್ಕೆ ಇಳಿದಿದ್ದು, ರಾಜೀನಾಮೆ ನೀಡುವಂತೆ ಒತ್ತಡ ಹಾಕುತ್ತಿದ್ದಾರೆ. ಪಕ್ಷ ಒಂದು ವೇಳೆ ಕಠಿಣ ಕ್ರಮ ತೆಗೆದುಕೊಂಡರೇ ಅವರಿಗೆ ಕಾಂಗ್ರೆಸ್ ಸೇರಲು ಹಾದಿ ಸುಗಮವಾಗುತ್ತದೆ ಎಂಬ ಮಾತೂ ರಾಜಕೀಯ ವಲಯದಲ್ಲಿ ಕೇಳಿ ಬಂದಿದೆ. ವಿಧಾನಸಭಾ ಚುನಾವಣೆಯ ವೇಳೆ ಬಿಜೆಪಿಯಲ್ಲಿ ಟಿಕೆಟ್ ಸಿಗದೇ ಕಾಂಗ್ರೆಸ್‌ಗೆ ಸೇರಿದ ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಅವರಿಗೆ ನಷ್ಟ ಆಗಲಿಲ್ಲ. ಕಟ್ಟಾ ಸಂಘ ಪರಿವಾರದ ಹಿನ್ನೆಲೆಯ ಶೆಟ್ಟರ್ ಅವರು ಚುನಾವಣೆಯಲ್ಲಿ ಸೋತರೂ ಕಾಂಗ್ರೆಸ್ ಪಕ್ಷ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿತು. ಈ ಇಬ್ಬರೂ ನಾಯಕರನ್ನು ಬಳಸಿಕೊಂಡು ಹಲವರನ್ನು ಬುಟ್ಟಿಗೆ ಹಾಕಿಕೊಳ್ಳುವ ಮೂಲಕ ಬಿಜೆಪಿಗೆ ಬಲವಾದ ಪೆಟ್ಟುಕೊಡಲು ಡಿ.ಕೆ.ಶಿವಕುಮಾರ್ ಸನ್ನದ್ಧರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಜೆಪಿ ನಾಯಕರಿಗೆ ಗಾಳ ಹಾಕಿರುವ ಕಾಂಗ್ರೆಸ್ ನಾಯಕರು, ಲೋಕಸಭಾ ಟಿಕೆಟ್‌ನ ಆಶ್ವಾಸನೆ ನೀಡಿದ್ದಾರೆ.

ಕಾಂಗ್ರೆಸ್ ನಾಯಕರಲ್ಲಿ ಹಲವರಿಗೆ ಲೋಕಸಭೆಯಲ್ಲಿ ಸೆಣಸುವ ಬಗ್ಗೆ ಆಸಕ್ತಿ ಇಲ್ಲ. ಹೀಗಾಗಿ ಕೆಲವು ಕ್ಷೇತ್ರಗಳಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸೋತಿರುವ ಬಿಜೆಪಿಯ ಪ್ರಬಲ ನಾಯಕರನ್ನು ಬಳಸಿಕೊಳ್ಳುವ ಚಿಂತನೆ ನಡೆಸಿದೆ.

ಈ ಕುರಿತು ಬಿಜೆಪಿಯ ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರನ್ನು ಪ್ರಶ್ನಿಸಿದಾಗ, 'ನಾನು ಮತ್ತು ಡಿ.ಕೆ. ಶಿವಕುಮಾರ್ ಅವರು ರಾಜಕೀಯವನ್ನು ಮೀರಿದ ಸ್ನೇಹಿತರು. ಇತ್ತೀಚೆಗೆ ಇಬ್ಬರೂ ಸುಮಾರು ಒಂದು ತಾಸು ಮಾತುಕತೆ ನಡೆಸಿದ್ದೆವು. ಈ ಸಂದರ್ಭದಲ್ಲಿ ರಾಜ್ಯ ರಾಜಕೀಯದ ಬಗ್ಗೆಯೂ ಮಾತುಕತೆ ಆಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸೇರುವಂತೆ ಅವರು ನನ್ನನ್ನು ಆಹ್ವಾನಿಸಲಿಲ್ಲ. ಚುನಾವಣೆಯಲ್ಲಿ ಬಿಜೆಪಿ ಸೋತ ತಕ್ಷಣ ನಳಿನ್‌ಕುಮಾರ್ ಕಟೀಲ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರೆ ಅವರಿಗೆ ಬೆಲೆ ಇರುತ್ತಿತ್ತು. ಹಿಂದೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋತ ತಕ್ಷಣ ದಿನೇಶ್ ಗುಂಡೂರಾವ್ ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು' ಎಂದರು.

### ಮಾಜಿ ಶಾಸಕರ ಲೆಕ್ಕಾಚಾರವೇನು?

ಬಿಜೆಪಿಯ ಕೆಲವು ಮಾಜಿ ಶಾಸಕರಲ್ಲಿ ಒಂದು ವೇಳೆ ಕಾಂಗ್ರೆಸ್ ಟಿಕೆಟ್ ಸಿಕ್ಕು ಗೆದ್ದರೆ ರಾಜಕೀಯ ಜೀವನ ಮತ್ತೆ ಚಿಗುರುತ್ತದೆ. ಒಂದು ವೇಳೆ ಸೋತರೆ ವಿಧಾನಸಭೆ ಚುನಾವಣೆ ವೇಳೆ ಮತ್ತೆ ಬಿಜೆಪಿಗೇ ಹಿಂತಿರುಗಿ ಬಿಜೆಪಿಯಿಂದಲೇ ಟಿಕೆಟ್ ಪಡೆಯಬಹುದು ಎಂಬ ಲೆಕ್ಕಾಚಾರದಲ್ಲಿದ್ದಾರೆ. ಆದರೆ, ಕೆಲವರ ಸೇರ್ಪಡೆ ಬಗ್ಗೆ ಕಾಂಗ್ರೆಸ್‌ನಲ್ಲೇ ಅಪಸ್ವರ ಕೇಳಿ ಬಂದಿದೆ. ಹೀಗಾಗಿ ಕಾಂಗ್ರೆಸ್ ನಾಯಕರು ಎಚ್ಚರಿಕೆಯ ಹೆಜ್ಜೆ ಇಡಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

### ಗಣತಿ ವರದಿ ಸ್ವೀಕಾರಕ್ಕೆ ಸರ್ಕಾರ ಸಿದ್ಧವಾಗಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

# 'ಜಾತಿ ಗಣತಿ ವರದಿ ಸ್ವೀಕಾರ ತಡೆದ ಎಚ್‌ಡಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಕೇತೋಹಳ್ಳಿಯಲ್ಲಿ ಭಾನುವಾರ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಂಬಳಿ ಹೊದಿಸಿ ಸನ್ಮಾನಿಸಲಾಯಿತು

**ಬೆಂಗಳೂರು:** 'ಜಾತಿಗಣತಿ ವರದಿಯನ್ನು ಸ್ವೀಕರಿಸುವುದು ಬೇಡವೆಂದು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರೇ ಸೂಚಿಸಿದ್ದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಆಗ ಹಿಂದುಳಿದ ವರ್ಗಗಳ ಖಾತೆ ಸಚಿವರಾಗಿದ್ದ ಪುಟ್ಟರಂಗಶೆಟ್ಟಿಗೆ ವರದಿ ತೆಗೆದುಕೊಳ್ಳದಂತೆ ಸೂಚಿಸಿದ್ದರಿಂದ ಅವರು ವರದಿ ಸ್ವೀಕರಿಸಲಿಲ್ಲ. ಈಗ ನಾವು ವರದಿಯನ್ನು ಸ್ವೀಕರಿಸಲು ಸಿದ್ಧವಿದ್ದೇವೆ' ಸಿದ್ದರಾಮಯ್ಯ ಅವರು ಘೋಷಿಸಿದರು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಭಾನುವಾರ ಆಯೋಜಿಸಿದ್ದ ಶಾಖಾಮಠದ ಭೂಮಿ ಪೂಜೆ ಹಾಗೂ ಕುರುಬ ಸಮುದಾಯದ ನೂತನ ಸಚಿವರು– ಶಾಸಕರಿಗೆ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಮಾಜದಲ್ಲಿರುವ ತಾರತಮ್ಯ ನಿವಾರಣೆಗೆ ಜಾತಿ ಗಣತಿಗಳು, ಅಧ್ಯಯನಗಳು ಅಗತ್ಯವಾಗಿ ನಡೆಯಬೇಕಿವೆ. ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ಈ ವರದಿ ಸ್ವೀಕರಿಸಬೇಕಿತ್ತು' ಎಂದರು.

'ಪ್ರತಿ ಬಜೆಟ್ ಮಂಡನೆ ವೇಳೆಯೂ ಆಯಾ ಸಮುದಾಯದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಗೊತ್ತಾಗಬೇಕು. ರಾಜ್ಯದ 7 ಕೋಟಿ ಜನಸಂಖ್ಯೆಯಲ್ಲಿ ಕುರುಬರು 49 ಲಕ್ಷ ಇದ್ದೇವೆ. ನಾನು ಹಿಂದೆ ಮುಖ್ಯಮಂತ್ರಿ ಆಗಿದ್ದ ವೇಳೆ ಕಾಂತರಾಜ್ ಅವರ ಅಧ್ಯಕ್ಷತೆಯಲ್ಲಿ ಜಾತಿವಾರು ಗಣತಿ ನಡೆಸಿದ್ದೆ' ಎಂದರು.

'ವಿರೋಧ ಪಕ್ಷಗಳು ಎಷ್ಟೇ ಕುಹಕವಾಡಿದರೂ ಈ ಬಜೆಟ್‌ನಲ್ಲೇ ಗ್ಯಾರಂಟಿಗಳಿಗೆ ಹಣ ಕೊಡುತ್ತೇನೆ' ಎಂದರು.

'ಕೇಂದ್ರ ಸರ್ಕಾರವು ಅಕ್ಕಿ ನೀಡದ ಕಾರಣಕ್ಕೆ ಅನ್ನಭಾಗ್ಯ ಯೋಜನೆ ಜಾರಿ ವಿಳಂಬವಾಯಿತು. ಅಕ್ಕಿ ಬದಲಿಗೆ ಹಣ ನೀಡುತ್ತೇವೆ. ಆಗಸ್ಟ್ 16 ರಿಂದಲೇ 'ಗೃಹ ಲಕ್ಷ್ಮಿ' ಯೋಜನೆ ಜಾರಿಗೆ ಬರಲಿದೆ. ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ನನ್ನ ಪತ್ನಿಯೂ ಪ್ರಯಾಣಿಸಬಹುದು. ಕೆ.ಎಸ್‌.ಈಶ್ವರಪ್ಪ ಅವರ ಪತ್ನಿಯೂ ತೆರಳಬಹುದು' ಎಂದು ಹೇಳಿದರು.

ಕಾಗಿನೆಲೆ ಕನಕಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ, 'ಶಾಖಾ ಮಠದ ನಿರ್ಮಾಣಕ್ಕೆ ಸರ್ಕಾರದ ಅನುದಾನ ಕೇಳುವುದಿಲ್ಲ. ಸಮಾಜದ ಬೆವರು ಮತ್ತು ಶ್ರಮ ಸಾಕು' ಎಂದರು.

ಸಚಿವ ಭೈರತಿ ಸುರೇಶ್ ಶಾಖಾ ಮಠದ ನಿರ್ಮಾಣಕ್ಕೆ ವೈಯಕ್ತಿಕವಾಗಿ ₹50 ಲಕ್ಷ ನೆರವು ಘೋಷಿಸಿದರು.

ಶಾಸಕ ಎಸ್‌.ಟಿ.ಸೋಮಶೇಖರ್, ಮಾಜಿ ಸಚಿವ ಎಚ್‌.ಎಂ.ರೇವಣ್ಣ, ಬಿಜೆಪಿ ಮುಖಂಡ ಕೆ.ಎಸ್‌.ಈಶ್ವರಪ್ಪ, ಬಂಡೆಪ್ಪ ಕಾಶಂಪುರ್ ಸೇರಿದಂತೆ ವಿವಿಧ ಮಠಾಧೀಶರು ಇದ್ದರು.

> ನಾನು ಮತ್ತೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಆದರೆ, ಕೊನೆಯವರೆಗೂ ರಾಜಕಾರಣದಲ್ಲಿ ಕ್ರಿಯಾಶೀಲವಾಗಿಯೇ ಇರುತ್ತೇನೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಸಿದ್ದರಾಮಯ್ಯ ಅವರು ಕೊಟ್ಟ ಶಕ್ತಿ ಯೋಜನೆ ಎಲ್ಲ ಜಾತಿ ಮಹಿಳೆಯರಿಗೂ ಅನುಕೂಲವಾಗಿದೆ. ರಾಮನನ್ನು ತೋರಿಸುವುದಕ್ಕೆ ಬಸ್‌ನಲ್ಲಿ ಉಚಿತ ಪ್ರಯಾಣ ಕಲ್ಪಿಸಿದ್ದಾರೆ
> **ಎಚ್‌.ವಿಶ್ವನಾಥ್**
> ವಿಧಾನ ಪರಿಷತ್ ಸದಸ್ಯ

### ಈಶ್ವರಪ್ಪಗೆ ಸನ್ಮಾನಿಸಲು ನಿರಾಕರಣೆ

ಬಿಜೆಪಿ ಮುಖಂಡ ಕೆ.ಎಸ್‌.ಈಶ್ವರಪ್ಪ ಅವರನ್ನು ಸನ್ಮಾನಿಸುವಂತೆ ನಿರಂಜನಾನಂದಪುರಿ ಸ್ವಾಮೀಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದಾಗ, 'ನೀವೇ ಸನ್ಮಾನಿಸಿ' ಎಂದು ಸಿದ್ದರಾಮಯ್ಯ ಕೈಸನ್ನೆ ಮಾಡಿದರು.

ಮಠದ ಶ್ರೀರಕ್ಷೆ ಸ್ವೀಕರಿಸುವಂತೆ ಈಶ್ವರಪ್ಪ ಅವರಲ್ಲಿ ನಿರೂಪಕರು ಮನವಿ ಮಾಡುತ್ತಾರೆ. ಆಗ ಸ್ವಾಮೀಜಿ ಅವರು ಸಿದ್ದರಾಮಯ್ಯ ಅವರ ಕೈಗೆ ಶಾಲು ನೀಡಲು ಮುಂದಾಗುತ್ತಾರೆ. ಅವರು ಸನ್ಮಾನ ಮಾಡುವುದಕ್ಕೆ ನಿರಾಕರಿಸುತ್ತಾರೆ. ಬಳಿಕ, ಸ್ವಾಮೀಜಿ ಅವರೇ ಸನ್ಮಾನಿಸುತ್ತಾರೆ. ಈ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

# ವಾಕ್ಸಮರ 'ಗ್ಯಾರಂಟಿ'

ಒಂದನೇ ಪುಟದಿಂದ...

ಜುಲೈ 4ರಿಂದ ಪ್ರಶ್ನೋತ್ತರ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಸೇರಿದಂತೆ ಕಾರ್ಯಕಲಾಪಗಳು ನಡೆಯಲಿವೆ. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 7ರಂದು ಬಜೆಟ್ ಮಂಡಿಸಲಿದ್ದಾರೆ. ಆಯವ್ಯಯದ ಗಾತ್ರ ಹೆಚ್ಚಾಗಲಿದೆ ಎಂಬ ಸುಳಿವನ್ನು ಈಗಾಗಲೇ ಮುಖ್ಯಮಂತ್ರಿ ನೀಡಿರುವುದರಿಂದ, ಈ ಬಜೆಟ್‌ನಲ್ಲಿ ಐದು 'ಗ್ಯಾರಂಟಿ'ಗಳಿಗೆ ಆರ್ಥಿಕ ಸಂಪನ್ಮೂಲ ಒದಗಿಸುವ ಬಗ್ಗೆ ಪ್ರಸ್ತಾಪಿಸುವ ನಿರೀಕ್ಷೆಯಿದೆ.

ಐದೂ 'ಗ್ಯಾರಂಟಿ'ಗಳನ್ನು ಆಡಳಿತ ಸೂತ್ರ ಹಿಡಿದ ಬೆನ್ನಲ್ಲೇ ಯಾವುದೇ ಷರತ್ತುಗಳು ಇಲ್ಲದೆ ಅನುಷ್ಠಾನಗೊಳಿಸುವ ಭರವಸೆಯನ್ನು ಕಾಂಗ್ರೆಸ್ ನೀಡಿತ್ತು. ಈ ಪೈಕಿ, 'ಶಕ್ತಿ' (ಸರ್ಕಾರಿ ಬಸ್ಸಿನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ) ಜಾರಿಯಾಗಿದೆ. ಉಳಿದ ಯೋಜನೆಗಳು ಇನ್ನಷ್ಟೆ ಅನುಷ್ಠಾನಗೊಳ್ಳಬೇಕಿದೆ. ಈ ಗ್ಯಾರಂಟಿಗಳಿಗೆ ಷರತ್ತು ವಿಧಿಸಿರುವುದನ್ನು ಈಗಾಗಲೇ ಟೀಕಿಸಿರುವ ಬಿಜೆಪಿ, ಜೆಡಿಎಸ್ ಅನುಷ್ಠಾನಕ್ಕೆ ಎದುರಾಗಿರುವ ಗೊಂದಲಗಳನ್ನು ಪ್ರಮುಖ ಅಸ್ತ್ರವಾಗಿ ಬಳಸಲು ಸಜ್ಜಾಗಿವೆ. ಅಷ್ಟೇ ಪ್ರಬಲವಾಗಿ ಸರ್ಕಾರದ ನಿಲುವು ಸಮರ್ಥಿಸಿಕೊಳ್ಳಲು ಕಾಂಗ್ರೆಸ್ ಕೂಡ ಸಿದ್ಧವಾಗಿದೆ.

### 7 ಮಸೂದೆಗಳು ಮಂಡನೆಗೆ ಸಿದ್ಧ

ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಹುದ್ದೆಗೆ ಶಾಸಕರನ್ನು ಪರಿಗಣಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ 'ವಿಧಾನಸಭಾ ಸದಸ್ಯರ ಅನರ್ಹತಾ ನಿರ್ವಹಣಾ ಕಾಯ್ದೆ'ಗೆ ತಿದ್ದುಪಡಿ, ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು (ಮತಾಂತರ ನಿಷೇಧ) ಕಾಯ್ದೆ –2021 ರದ್ದು, ಹಿಂದಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾಯ್ದೆ ಮರು ಜಾರಿ, ಕರ್ನಾಟಕ ಅಗ್ನಿಶಾಮಕ ಕಾಯ್ದೆ ತಿದ್ದುಪಡಿ (ಹೈ ರಿಸ್ಕ್ ಕಟ್ಟಡಗಳಿಗೆ ಸಂಬಂಧಿಸಿದ್ದು), ಜಿಎಸ್‌ಟಿ, ಎಸ್‌.ಸಿ, ಎಸ್‌.ಟಿ ಗುತ್ತಿಗೆದಾರರಿಗೆ ಮೀಸಲಾತಿ ಯಡಿ ನೀಡುವ ಕಾಮಗಾರಿಗಳನ್ನು ₹ 50 ಲಕ್ಷದಿಂದ ₹ 1 ಕೋಟಿಗೆ ಹೆಚ್ಚಿಸಲು ಕೆಟಿಪಿಪಿ ಕಾಯ್ದೆ ತಿದ್ದುಪಡಿ ಸೇರಿದಂತೆ ಏಳು ಮಸೂದೆಗಳನ್ನು ಮಂಡಿಸಲು ರಾಜ್ಯ ಸಚಿವ ಸಂಪುಟ ಸಭೆ ಈಗಾಗಲೇ ಒಪ್ಪಿಗೆ ನೀಡಿದೆ.

ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಜಾನುವಾರು ಹತ್ಯೆ ಪ್ರತಿಬಂಧಕ (ಗೋಹತ್ಯೆ) ಕಾಯ್ದೆಯನ್ನು ಹಿಂಪಡೆದು 1964ರಿಂದಲೂ ಜಾರಿಯಲ್ಲಿರುವ ಕಾಯ್ದೆಯ ಮರು ಜಾರಿಗೆ ಸಚಿವ ಸಂಪುಟ ಸಭೆ ಇನ್ನಷ್ಟೆ ಅನುಮೋದನೆ ನೀಡಬೇಕಿದೆ.

> ಸ್ಪೀಕರ್ ಆಗಿ ನನಗೆ ಮೊದಲ ಅಧಿವೇಶನ, ಬಹಳ ಆಸಕ್ತಿಯಿಂದ ಇದ್ದೇನೆ. ಪ್ರೀತಿ, ಸೌಹಾರ್ದದಿಂದ ಅಧಿವೇಶನ ನಡೆಸಬೇಕು ಅಂದುಕೊಂಡಿದ್ದೇನೆ
> **ಯು.ಟಿ. ಖಾದರ್**
> ವಿಧಾನ ಸಭಾಧ್ಯಕ್ಷ

# ಮೊದಲ ದಿನ ವಿಪಕ್ಷ ನಾಯಕನಿಲ್ಲ

ಒಂದನೇ ಪುಟದಿಂದ

ಕರ್ನಾಟಕ ಬಿಜೆಪಿ ಘಟಕದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸುವ ಸಂಬಂಧ ಪಕ್ಷದ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಅವರೊಂದಿಗೆ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಸುದೀರ್ಘವಾಗಿ ಸಮಾಲೋಚನೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಯಡಿಯೂರಪ್ಪ, 'ಪಕ್ಷದ ವರಿಷ್ಠರು ಕರ್ನಾಟಕದ ರಾಜಕೀಯ ಪರಿಸ್ಥಿತಿ ಬಗ್ಗೆ ವರದಿ ಪಡೆದುಕೊಂಡಿದ್ದಾರೆ. ಅಗತ್ಯ ಬಿದ್ದರೆ ದೂರವಾಣಿ ಕರೆ ಮಾಡುತ್ತೇವೆ. ಆಗ ಮತ್ತೊಮ್ಮೆ ದೆಹಲಿಗೆ ಬರಬೇಕಾಗುತ್ತದೆ. ಇನ್ನೆರಡು ದಿನಗಳಲ್ಲಿ ಈ ಬಗ್ಗೆ ಮಾಹಿತಿ ನೀಡುವುದಾಗಿ ಅಮಿತ್ ಶಾ ಹೇಳಿದ್ದಾರೆ. ಎಲ್ಲ ಮಾಹಿತಿ ಪಡೆದು ಮುಂದಿನ ತೀರ್ಮಾನ ಮಾಡುತ್ತಾರೆ' ಎಂದರು.

ವಿರೋಧ ಪಕ್ಷದ ನಾಯಕನ ಆಯ್ಕೆ ವಿಚಾರವಾಗಿ ಇಬ್ಬರು ವೀಕ್ಷಕರನ್ನು ಸೋಮವಾರ ಕಳುಹಿಸುವುದಾಗಿ ತಿಳಿಸಿದ್ದಾರೆ. ವೀಕ್ಷಕರಾಗಿ ವಿನೋದ್ ತಾವಡೆ ಹಾಗೂ ಮನ್ಸುಕ್ ಮಾಂಡವೀಯ ಬರಲಿದ್ದಾರೆ. ಅವರು ಶಾಸಕರ ಅಭಿಪ್ರಾಯ ಸಂಗ್ರಹಿಸಿ ಹೈಕಮಾಂಡ್‌ಗೆ ವರದಿ ಸಲ್ಲಿಸಲಿದ್ದಾರೆ. ಆ ಬಳಿಕ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಸೋಮವಾರದ ಅಧಿವೇಶನಕ್ಕೆ ವಿಪಕ್ಷ ನಾಯಕ ಇರುವುದಿಲ್ಲ ಎಂದರು.

ವಿರೋಧ ಪಕ್ಷದ ನಾಯಕ ಯಾರು ಎಂಬುದನ್ನು ಇನ್ನೆರಡು ದಿನಗಳಲ್ಲಿ ಹೈಕಮಾಂಡ್ ತೀರ್ಮಾನಿಸುತ್ತಾರೆ. ಪಕ್ಷದ ರಾಜ್ಯ ಘಟಕಕ್ಕೆ ನೂತನ ಅಧ್ಯಕ್ಷರ ನೇಮಕದ ಬಗ್ಗೆಯೂ ಮಾಹಿತಿ ಪಡೆದಿದ್ದಾರೆ. ಈ ವಿಷಯದ ಕುರಿತು ಸಹ ಶಾಸಕರ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ ಎಂದು ಅವರು ಹೇಳಿದರು.

# ನಿರ್ಮಾಪಕ ಕೆಸಿಎನ್ ಮೋಹನ್ ನಿಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನ್ನಡ ಚಿತ್ರರಂಗದ ಹಿರಿಯ ನಿರ್ಮಾಪಕ, ವಿತರಕ ಕೆಸಿಎನ್ ಮೋಹನ್ (63) ನಿಧನರಾದರು. ಅವರಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಪತ್ನಿ ಪೂರ್ಣಿಮಾ ಕೆಲ ವರ್ಷಗಳ ಹಿಂದೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

'ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಮಧ್ಯಾಹ್ನ 12 ಗಂಟೆ ವೇಳೆಗೆ ನಿಧನರಾದರು. ಸೋಮವಾರ ಬೆಳಿಗ್ಗೆ ಚಾಮರಾಜಪೇಟೆಯ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ' ಎಂದು ಕುಟುಂಬದ ಮೂಲಗಳು ಹೇಳಿವೆ.

ಡಾ. ರಾಜ್‌ಕುಮಾರ್ ಅವರ ಹಲವು ಜನಪ್ರಿಯ ಸಿನಿಮಾಗಳ ನಿರ್ಮಾಪಕ ಕೆಸಿಎನ್ ಗೌಡ ಅವರ ಪುತ್ರರಾದ ಮೋಹನ್, ನವರಂಗ್, ಊರ್ವಶಿ ಚಿತ್ರಮಂದಿರಗಳ ಮಾಲೀಕರಾಗಿದ್ದರು. ಹಲವು ಸಿನಿಮಾಗಳನ್ನು ನಿರ್ಮಿಸಿದ್ದರು. ಅದಲ್ಲದೇ ಚಿತ್ರ ವಿತರಣೆಯಲ್ಲೂ ಸಕ್ರಿಯರಾಗಿದ್ದರು.

ರಮ್ಯಾ ನಟನೆಯ 'ಜೂಲಿ' ಸಿನಿಮಾವನ್ನು ಮೋಹನ್ ನಿರ್ಮಿಸಿದ್ದರು. ಅವರ ಪತ್ನಿ ಪೂರ್ಣಿಮಾ ಈ ಚಿತ್ರವನ್ನು ನಿರ್ದೇಶಿಸಿದ್ದರು. 'ರಾಮರಾಜ್ಯದಲ್ಲಿ ರಾಕ್ಷಸರು', 'ಜಯಸಿಂಹ', 'ಧರ್ಮಯುದ್ಧ', ಶಂಕರ್‌ನಾಗ್ ನಟನೆಯ 'ಭಲೇ ಚತುರ' ಮುಂತಾದ ಸಿನಿಮಾಗಳನ್ನು ಕೆಸಿಎನ್ ಮೋಹನ್ ಅವರು ನಿರ್ಮಾಣ ಮಾಡಿದ್ದರು.

# ದೊಡ್ಡಗೊಲ್ಲರಹಟ್ಟಿ: ವಾಂತಿ, ಭೇದಿ–14 ಮಂದಿ ಅಸ್ವಸ್ಥ

**ಹೊಸಪೇಟೆ (ವಿಜಯನಗರ):** ಕೂಡ್ಲಿಗಿ ತಾಲ್ಲೂಕಿನ ಬಡೇಲಡಕು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ದೊಡ್ಡಗೊಲ್ಲರಹಟ್ಟಿಯಲ್ಲಿ ಶನಿವಾರ ವಾಂತಿ ಭೇದಿಯಿಂದ 14 ಮಂದಿ ಅಸ್ವಸ್ಥಗೊಂಡಿದ್ದಾರೆ. ಇನ್ನೊಂದು ಪ್ರಕರಣದಲ್ಲಿ, ಹೊಸಪೇಟೆ ತಾಲ್ಲೂಕಿನ ಪಿ.ಕೆ.ಹಳ್ಳಿ ಗ್ರಾಮದ ಒಂದೇ ಮನೆಯ ಮೂವರು ವಾಂತಿ ಭೇದಿಯಿಂದ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ.

'ಜಲಜೀವನ್ ಮಿಶನ್ ಅಡಿ ಹಾಕಲಾದ ಪೈಪ್ ಕೆಲವೆಡೆ ಒಡೆದು, ಅದರಲ್ಲಿ ಹೊರಗಡೆಯ ನೀರು ಸೇರಿಕೊಂಡಿದ್ದರಿಂದ ನೀರು ಕಲುಷಿತಗೊಂಡಿರಬೇಕು ಎಂದು ಶಂಕಿಸಲಾಗಿದೆ. ಇದೀಗ ಪೈಪ್ ಬದಲಿಸಲಾಗಿದೆ.' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಸದಾಶಿವ ಪ್ರಭು ಬಿ. ಭಾನುವಾರ ತಿಳಿಸಿದರು.

### ರೈತರ ಮೊಗದಲ್ಲಿ ಸಂತಸ • ಕೃಷಿ ಚಟುವಟಿಕೆ ಚುರುಕು

# ಹಲವೆಡೆ ಉತ್ತಮ ಮಳೆ: ಜೋಗಕ್ಕೆ ಜೀವಕಳೆ

ಪ್ರಜಾವಾಣಿ ವಾರ್ತೆ

ಕಾರ್ಗಲ್‌ನ ಶರಾವತಿ ಕಣಿವೆ ಪ್ರದೇಶದಲ್ಲಿ ಭಾನುವಾರ ಮುಂಗಾರು ಅಬ್ಬರ ಕಂಡು ಬಂದಿದ್ದು, ಜೋಗ ಜಲಪಾತ ಪ್ರವಾಸಿಗರನ್ನು ಆಕರ್ಷಿಸುತ್ತಿದೆ

**ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾನುವಾರ ಉತ್ತಮ ಮಳೆ ಸುರಿಯಿತು.

ದಾವಣಗೆರೆ ನಗರದಲ್ಲಿ ಮಧ್ಯಾಹ್ನ 40 ನಿಮಿಷಕ್ಕೂ ಹೆಚ್ಚು ರಭಸದ ಮಳೆಯಾಗಿದೆ. ಜಿಲ್ಲೆಯ ನ್ಯಾಮತಿ, ಹೊನ್ನಾಳಿ, ಹರಿಹರ, ಚನ್ನಗಿರಿಯಲ್ಲಿ ಬಿರುಸಿನ ಮಳೆ ಸುರಿಯಿತು. ಹದವಾದ ಮಳೆಗಾಗಿ ಕಾಯುತ್ತಿದ್ದ ರೈತರ ಮೊಗದಲ್ಲಿ ಸಂತಸ ಮೂಡಿತು. ಮೆಕ್ಕೆಜೋಳ ಬೀಜ ಬಿತ್ತನೆ ಕಾರ್ಯ ಜೋರಾಗಿ ಸಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಕೆಲಕಾಲ ಮಳೆಯಾಯಿತು. ಆಗುಂಬೆಯಲ್ಲಿ ಮಳೆ ಆರಂಭವಾಗಿದ್ದು, ಸಂಜೆಯೂ ಮುಂದುವರಿದಿತ್ತು.

ಶರಾವತಿ ಕಣಿವೆ ಪ್ರದೇಶದ ಜೋಗ, ಕಾರ್ಗಲ್, ಲಿಂಗನಮಕ್ಕಿ ಪ್ರದೇಶದಲ್ಲಿ ಮುಂಗಾರು ಅಬ್ಬರ ಕಂಡು ಬಂದಿದೆ. ಜೋಗ ಜಲಪಾತ ಮತ್ತೆ ಧುಮ್ಮಿಕ್ಕುತ್ತಿದೆ. ಜಲಪಾತದ ನಾಲ್ಕೂ ಕವಲುಗಳಲ್ಲಿ ನೀರು ಹಾಲ್ನೊರೆಯಂತೆ ಪ್ರಪಾತಕ್ಕೆ ಧುಮುಕುವ ದೃಶ್ಯವನ್ನು ಪ್ರವಾಸಿಗರು ಕಣ್ತುಂಬಿಸಿಕೊಳ್ಳುತ್ತಿದ್ದಾರೆ. ಪ್ರವಾಸಿಗರ ಸಂಖ್ಯೆ ಹೆಚ್ಚಿದೆ.

ಮಡಿಕೇರಿ ನಗರದಲ್ಲಿ ಸಂಜೆ ನಂತರ ಮಳೆ ಬಿರುಸು ಪಡೆಯಿತು. ಮಂಗಳೂರು ರಸ್ತೆಯಲ್ಲಿ ಸಂಪಾಜೆ ಗ್ರಾಮದ ಕೊಯನಾಡು ಅರಣ್ಯ ಇಲಾಖೆ ಕಚೇರಿ ಸಮೀಪ ಹೆದ್ದಾರಿಯಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಹೀಗಾಗಿ, ಇದು ಕುಸಿಯುವ ಭೀತಿ ಎದುರಾಗಿದ್ದು, ಸಂಚಾರ ಬಂದ್ ಮಾಡಲಾಗಿದೆ. ಪಕ್ಕದಲ್ಲೇ ನಿರ್ಮಿಸಿರುವ ತಾತ್ಕಾಲಿಕ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಹುಬ್ಬಳ್ಳಿ-ಧಾರವಾಡ ಅವಳಿ ನಗರ, ಹಾವೇರಿ, ಗದಗ, ಬೆಳಗಾವಿ, ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದಲ್ಲಿ ಸಾಧಾರಣ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲ್ಲೂಕುಗಳಲ್ಲಿ ಮಳೆ ಬಿರುಸು ಪಡೆದಿದ್ದರೆ, ಘಟ್ಟದ ಮೇಲಿನ ಜೊಯಿಡಾ, ಯಲ್ಲಾಪುರ, ಶಿರಸಿ ಸೇರಿದಂತೆ ಕೆಲವೆಡೆ ಸಾಧಾರಣ ಮಳೆಯಾಗುತ್ತಿದೆ. ಕಲಬುರಗಿಯಲ್ಲಿ ಸುಮಾರು ಅರ್ಧ ಗಂಟೆ ಬಿರುಸಿನ ಮಳೆ ಸುರಿಯಿತು.

ಯಾದಗಿರಿ ಜಿಲ್ಲೆ, ಬೀದರ್ ನಗರ, ಭಾಲ್ಕಿ, ಕೊಪ್ಪಳ ಜಿಲ್ಲೆಯ ಕುಷ್ಟಗಿ, ಯಲಬುರ್ಗಾ ತಾಲ್ಲೂಕಿನಲ್ಲಿ ಮಳೆಯಾಗಿದೆ. ಗಂಗಾವತಿಯಲ್ಲಿ ಬೀಸಿದ ಜೋರು ಗಾಳಿಗೆ ಮರವು ಬೈಕ್ ಮೇಲೆ ಬಿದ್ದಿದೆ.

### ಭಾರಿ ಮಳೆ ಸಾಧ್ಯತೆ

**ಬೆಂಗಳೂರು:** ರಾಜ್ಯದಲ್ಲಿ ಮುಂದಿನ ನಾಲ್ಕು ದಿನ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜುಲೈ 3ರಂದು ಉತ್ತರ ಕನ್ನಡ,ಉಡುಪಿ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್', ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್', ಜುಲೈ 4ರಂದು ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್', ಬೆಳಗಾವಿ, ಧಾರವಾಡ, ಹಾವೇರಿ, ತುಮಕೂರು, ಮೈಸೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.


**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಣ ಆಶ್ವಾಸನೆ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

**ಟೆಂಡರ್ ಪ್ರಕಟಣೆ** (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

| ಕಾಮಗಾರಿಯ ಹೆಸರು | ಟೆಂಡರ್ ಮೊತ್ತ / ಇ.ಎಂ.ಡಿ |
|---|---|
| ಸಂ.ಬೆಂಜಮಂ/ಮುಅ(ವಿ&ಗುಆ)/ಅಮುಅ(ವಿನ್ಯಾಸ)/ತಾಂಸ/232/2023–24 | ದಿನಾಂಕ: 19.06.2023 |
| ಬೆಂಗಳೂರಿನ ಕೇತಮಾರನಹಳ್ಳಿಯಲ್ಲಿ 6 ಸಂಖ್ಯೆಯ ವಸತಿ ಗೃಹಗಳ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ. | ರೂ. 234.35 ಲಕ್ಷಗಳು<br>ರೂ. 4.15 ಲಕ್ಷಗಳು |
| ಸಂ.ಬೆಂಜಮಂ/ಮುಅ(ವಿ&ಗುಆ)/ಅಮುಅ(ವಿನ್ಯಾಸ)/ತಾಂಸ/233/2023–24 | ದಿನಾಂಕ: 19.06.2023 |
| ಬೆಂಗಳೂರಿನ ಕಮಲಾನಗರದಲ್ಲಿ 6 ಸಂಖ್ಯೆಯ ಬ್ಲಾಕ್–II ವಸತಿ ಗೃಹಗಳ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ. | ರೂ. 235.30 ಲಕ್ಷಗಳು<br>ರೂ. 4.17 ಲಕ್ಷಗಳು |
| ಸಂ.ಬೆಂಜಮಂ/ಮುಅ(ವಿ&ಗುಆ)/ಅಮುಅ(ವಿನ್ಯಾಸ)/ತಾಂಸ/234/2023–24 | ದಿನಾಂಕ: 19.06.2023 |
| ಬೆಂಗಳೂರಿನ ಪಿ.ಪಿ ಲೇಔಟ್‌ನಲ್ಲಿ 3 ಸಂಖ್ಯೆಯ ಅಧಿಕಾರಿಗಳ ವಸತಿ ಗೃಹಗಳ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿ. | ರೂ. 219.98 ಲಕ್ಷಗಳು<br>ರೂ. 3.90 ಲಕ್ಷಗಳು |

ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 02.08.2023 ರಂದು ಸಂಜೆ 4.00 ಗಂಟೆಯವರೆಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ: 04.08.2023 ರ ಅಪರಾಹ್ನ 12.00 ಗಂಟೆಗೆ.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ವಿನ್ಯಾಸ & ಗುಆ)

DIPR/CP/417/Zenkar/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



# ಅಭಿಮತ

❦ ಸುಭಾಷಿತ ❦

ಸೋಲು ಎಂಬುದು ಈ ಬಾರಿ ಹೆಚ್ಚು ಬುದ್ಧಿವಂತಿಕೆಯಿಂದ ಮತ್ತೊಮ್ಮೆ ಆರಂಭಿಸುವುದಕ್ಕೆ ಇರುವ ಅವಕಾಶ.

-ಹೆನ್ರಿ ಫೋರ್ಡ್

## ಸಚಿವ ಸೆಂಥಿಲ್ ವಜಾ ಆದೇಶ ರಾಜ್ಯಪಾಲರ ನಡೆ ಆಘಾತಕಾರಿ

ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಸಚಿವ ಸೆಂಥಿಲ್ ಬಾಲಾಜಿ ಅವರನ್ನು ವಜಾ ಮಾಡಿರುವ ಆದೇಶವು ಸಂವಿಧಾನದ ಉಲ್ಲಂಘನೆ ಮತ್ತು ಆಘಾತಕಾರಿ. ಗುರುವಾರ ರಾತ್ರಿ ಆದೇಶ ಹೊರಡಿಸಿ ಕೆಲವೇ ತಾಸುಗಳಲ್ಲಿ ಅದನ್ನು ಹಿಂದಕ್ಕೆ ಪಡೆದಿದ್ದರೂ ವಿಷಯದ ಗಾಂಭೀರ್ಯ ಕಡಿಮೆ ಆಗುವುದಿಲ್ಲ. ರಾಜ್ಯಪಾಲರಿಗೆ ಇರುವ ಕಾರ್ಯಕಾರಿ ಅಧಿಕಾರದ ಕುರಿತು ವಿವರಣೆ ನೀಡುವ ಸಂವಿಧಾನದ 153, 163 ಮತ್ತು 164ನೇ ವಿಧಿಗಳನ್ನು ಉಲ್ಲೇಖಿಸಿ ತೆಗೆದುಕೊಂಡ ನಿರ್ಧಾರದ ಬಗ್ಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ರಾಜ್ಯಪಾಲರು ಪತ್ರ ಬರೆದಿದ್ದರು. ಜಾರಿ ನಿರ್ದೇಶನಾಲಯದಿಂದ (ಇ.ಡಿ.) ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಸೆಂಥಿಲ್ ಅವರನ್ನು ವಜಾ ಮಾಡಬೇಕು ಎಂದು ಪತ್ರ ಬರೆದು ಈ ಹಿಂದೆ ತಿಳಿಸಲಾಗಿತ್ತು. ಹಾಗಿದ್ದರೂ ಮುಖ್ಯಮಂತ್ರಿ ಕ್ರಮ ಕೈಗೊಂಡಿಲ್ಲ. ಹಾಗಾಗಿ ಸ್ವತಃ ತಾವೇ ಸಚಿವರನ್ನು ವಜಾ ಮಾಡಬೇಕಾಯಿತು ಎಂದು ರಾಜ್ಯಪಾಲರು ಪತ್ರದಲ್ಲಿ ಹೇಳಿದ್ದಾರೆ. ಕೇಂದ್ರ ಗೃಹ ಸಚಿವರ ಸಲಹೆಯಂತೆ ಈ ನಿರ್ಧಾರವನ್ನು ಅಮಾನತಿನಲ್ಲಿ ಇರಿಸಲಾಗಿದೆ ಎಂದು ಕೆಲವೇ ತಾಸುಗಳ ಬಳಿಕ ಬರೆದ ಮತ್ತೊಂದು ಪತ್ರದಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಅಟಾರ್ನಿ ಜನರಲ್ ಅವರೊಂದಿಗೆ ಈ ಕುರಿತು ಸಮಾಲೋಚನೆ ನಡೆಸಲಾಗುವುದು ಎಂದೂ ಹೇಳಿದ್ದಾರೆ.

ಸಂವಿಧಾನವು ಹಾಕಿಕೊಟ್ಟ ಮಿತಿಯನ್ನು ರಾಜ್ಯಪಾಲರು ಮೀರಿದ್ದಾರೆ. ಸಮರ್ಥನೆ ಸಾಧ್ಯವೇ ಇಲ್ಲದ ಸ್ಥಿತಿಯನ್ನು ತಮಗೆ ತಾವೇ ತಂದುಕೊಂಡಿದ್ದಾರೆ

ಸಚಿವರನ್ನು ವಜಾ ಮಾಡುವ ಅಧಿಕಾರ ರಾಜ್ಯಪಾಲರಿಗೆ ಇಲ್ಲ ಎಂಬುದನ್ನು ತಿಳಿದುಕೊಳ್ಳಲು ಸಂವಿಧಾನದ ಆಳವಾದ ಜ್ಞಾನವೇನೂ ಬೇಕಾಗಿಲ್ಲ. ಮುಖ್ಯಮಂತ್ರಿಯ ಸಲಹೆಗೆ ಅನುಸಾರವಾಗಿ ರಾಜ್ಯಪಾಲರು ಸಚಿವರನ್ನು ನೇಮಿಸುತ್ತಾರೆ. ಸಚಿವರನ್ನು ವಜಾ ಮಾಡುವುದಕ್ಕೂ ಇದೇ ಮಾರ್ಗವನ್ನು ಅನುಸರಿಸಬೇಕು. ಪ್ರಜಾಪ್ರಭುತ್ವದ ಪ್ರಾಥಮಿಕ ನಿಯಮವನ್ನೇ ಉಲ್ಲಂಘಿಸಿ, ರಾಜ್ಯಪಾಲರು ಸಚಿವರನ್ನು ವಜಾ ಮಾಡಿದ್ದಾರೆ. ಸಂವಿಧಾನವನ್ನೇ ಬುಡಮೇಲು ಮಾಡುವ ಯತ್ನದಂತೆ ಇದು ಕಾಣಿಸುತ್ತಿದೆ. ಬಿಜೆಪಿಯನ್ನು ವಿರೋಧಿಸುವ ಪಕ್ಷಗಳು ಆಳ್ವಿಕೆ ನಡೆಸುವ ರಾಜ್ಯಗಳಲ್ಲಿ ಸರ್ಕಾರ ಮತ್ತು ರಾಜ್ಯಪಾಲರ ನಡುವಣ ಅಸಹನೀಯ ಸಂಘರ್ಷಗಳಲ್ಲಿ ಯಾವ ತಪ್ಪನ್ನೂ ಕಾಣದ ಕೇಂದ್ರ ಗೃಹ ಸಚಿವಾಲಯಕ್ಕೆ ಕೂಡ ರಾಜ್ಯಪಾಲರ ಈ ನಡೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗಿಲ್ಲ. ನಿರ್ಧಾರವನ್ನು ಹಿಂದಕ್ಕೆ ಪಡೆಯದೆ, ಅಮಾನತಿನಲ್ಲಿ ಇರಿಸುವ ಮೂಲಕ ತಮ್ಮ ಮುಖ ಉಳಿಸಿಕೊಳ್ಳುವ ಕೆಲಸವನ್ನು ರಾಜ್ಯಪಾಲರು ಮಾಡಿದ್ದಾರೆ. ಆದರೆ, ತಾವು ಎಸಗಿರುವುದು ಪ್ರಮಾದ ಎಂಬುದರ ಅರಿವು ಅವರಿಗೆ ಆಗಿರುವಂತಿಲ್ಲ. ತಮ್ಮ ಆದೇಶವನ್ನು ನ್ಯಾಯಾಲಯವು ರದ್ದು ಮಾಡಬಹುದು ಎಂಬುದೇ ಅವರು ನಿರ್ಧಾರದಿಂದ ಹಿಂದಕ್ಕೆ ಸರಿಯಲು ಕಾರಣ ಆಗಿರಬಹುದು.

ರಾಜ್ಯಪಾಲ ರವಿ ಅವರು ರಾಜ್ಯ ಸರ್ಕಾರದ ಜೊತೆಗೆ ಹಲವು ವಿಚಾರಗಳಲ್ಲಿ ಸಂಘರ್ಷ ನಡೆಸಿದ್ದಾರೆ. ಆಡಳಿತದಲ್ಲಿ ಹಸ್ತಕ್ಷೇಪ ಪ್ರಯತ್ನಿಸಿದ್ದಾರೆ. ರಾಜ್ಯಪಾಲರಿಗೆ ಸ್ವತಂತ್ರ ಅಧಿಕಾರ ಇಲ್ಲ ಮತ್ತು ಹೆಚ್ಚಿನ ವಿಚಾರಗಳಲ್ಲಿ ವಿವೇಚನಾಧಿಕಾರವೂ ಇಲ್ಲ ಎಂಬುದನ್ನು ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳಲ್ಲಿ ಹೇಳಲಾಗಿದೆ. ಸಂಶೇರ್ ಸಿಂಗ್ ಮತ್ತು ಪಂಜಾಬ್ ಸರ್ಕಾರದ ನಡುವಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಪೀಠವು 1974ರಲ್ಲಿ ಹೀಗೆ ಹೇಳಿತ್ತು: 'ಕೇವಲ ಕೆಲವು ಅಸಾಧಾರಣ ಸಂದರ್ಭಗಳನ್ನು ಬಿಟ್ಟರೆ ಎಲ್ಲ ಸಂದರ್ಭಗಳಲ್ಲಿಯೂ ಮಂತ್ರಿ ಪರಿಷತ್ತಿನ ಸಲಹೆಗೆ ಅನುಗುಣವಾಗಿಯೇ ರಾಜ್ಯಪಾಲರು ಕಾರ್ಯನಿರ್ವಹಿಸಬೇಕು'. ಸರ್ಕಾರದ ಜೊತೆಗೆ ರಾಜ್ಯಪಾಲರು ನಡೆಸಿದ ಸಂಘರ್ಷ ಮತ್ತು ಆಳ್ವಿಕೆಯಲ್ಲಿನ ಹಸ್ತಕ್ಷೇಪಕ್ಕೆ ಇದು ಇತ್ತೀಚಿನ ಉದಾಹರಣೆ. ಸಂವಿಧಾನವು ಹಾಕಿಕೊಟ್ಟ ಮಿತಿಯನ್ನು ಅವರು ಮೀರಿದ್ದಾರೆ. ಒಕ್ಕೂಟ ವ್ಯವಸ್ಥೆಗೆ ಗಂಭೀರವಾದ ಬೆದರಿಕೆಯಾಗಿದ್ದಾರೆ. ಸಮರ್ಥನೆ ಸಾಧ್ಯವೇ ಇಲ್ಲದ ಸ್ಥಿತಿಯನ್ನು ತಮಗೆ ತಾವೇ ತಂದುಕೊಂಡಿದ್ದಾರೆ.

### ದಿನದ ಟ್ವೀಟ್

**ಕ್ರೀಡಾ ಕ್ಷೇತ್ರದ ದುಃಸ್ಥಿತಿ**

ನಮ್ಮ ಮಗಳನ್ನು ಆಗಾಗ ಸ್ಥಳೀಯ ಟೆನಿಸ್ ಟೂರ್ನಮೆಂಟ್‌ಗಳಿಗೆ ಕರೆದೊಯ್ಯುತ್ತೇವೆ. ಕೋರ್ಟ್‌ಗಳು ಉತ್ತಮವಾಗಿರುತ್ತವೆ, ಆದರೆ ಶೌಚಾಲಯಗಳು ಗಬ್ಬುನಾರುತ್ತಿರುತ್ತವೆ, ಚಿಲಕ ಹಾಕಲಾಗದು, ನೀರು ಇರುವುದಿಲ್ಲ. ಇದು, ಕ್ರೀಡಾ ಕ್ಷೇತ್ರದಾದ್ಯಂತ ಇರುವ ಸ್ಥಿತಿ. ದೊಡ್ಡದೊಡ್ಡ ಕ್ರೀಡಾ ಮೂಲ ಸೌಕರ್ಯಗಳನ್ನು ನಿರ್ಮಿಸುತ್ತೇವೆ, ಮೂಲಭೂತ ಅಂಶಗಳನ್ನೇ ಮರೆಯುತ್ತೇವೆ. ಯಾವುದೇ ಕ್ರೀಡಾ ಸ್ಥಳಕ್ಕೆ ನನ್ನ ಪತ್ನಿ, ಮಗಳನ್ನು ಕರೆದೊಯ್ಯುವುದು ಕಷ್ಟಕರ. ಭಾರತವು ವಿಶ್ವ ದರ್ಜೆಯ ಕ್ರೀಡಾ ಸೌಲಭ್ಯಗಳನ್ನು ಹೆಚ್ಚುಹೆಚ್ಚು ನಿರ್ಮಿಸುತ್ತಿರುವಂತೆ, ವಿಶೇಷವಾಗಿ ಮಹಿಳೆಯರಿಗೆ ಶುದ್ಧ ಶೌಚಾಲಯ ಮತ್ತು ಅದರ ನಿರ್ವಹಣೆಗೆ ಕಾಳಜಿ ವಹಿಸಲಾಗುತ್ತದೆ ಎಂದು ಭಾವಿಸುತ್ತೇನೆ. ಕ್ರೀಡೆಯತ್ತ ಹೆಣ್ಣುಮಕ್ಕಳನ್ನು ಹೆಚ್ಚಾಗಿ ಸೆಳೆಯಬೇಕಾದರೆ ಇದು ನಿರ್ಣಾಯಕವಾದ ಅಂಶ.

**ವಿರೇನ್ ರಸ್ಕಿನ,** ಭಾರತ ಹಾಕಿ ತಂಡದ ಮಾಜಿ ನಾಯಕ

### ಕಿಡಿನುಡಿ

ವಿರೋಧ ಪಕ್ಷವೊಂದರ ವಂಶಾಡಳಿತದ ವಿರುದ್ಧ ಮೋದಿ ಮತ್ತು ಶಾ ನಿನ್ನೆ ವಾಗ್ದಾಳಿ ನಡೆಸಿದರು. ಇಂದು ಅವರು ಶರದ್ ಪವಾರ್ ಅವರ ಸೋದರ ಸಂಬಂಧಿಯನ್ನು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಆಗಿ ಸೇರಿಸಿಕೊಂಡರು. ವಿರೋಧ ಪಕ್ಷದಲ್ಲಿನ ಭ್ರಷ್ಟಾಚಾರದ ವಿರುದ್ಧ ನಿನ್ನೆ ಅವರು ವಾಗ್ದಾಳಿ ನಡೆಸಿದರು. ಇಂದು ಅವರು, ಇ.ಡಿ. ಹಾಗೂ ಸಿಬಿಐ ತನಿಖೆ ಎದುರಿಸುತ್ತಿರುವ ಎನ್‌ಸಿಪಿಯ ಕೆಲವು ಶಾಸಕರನ್ನು ಮಹಾರಾಷ್ಟ್ರ ಸಂಪುಟಕ್ಕೆ ಸೇರಿಸಿಕೊಂಡಿದ್ದಾರೆ!

**ಪ್ರಶಾಂತ್ ಭೂಷಣ್,** ಸುಪ್ರೀಂ ಕೋರ್ಟ್ ವಕೀಲ

### 25 ವರ್ಷಗಳ ಹಿಂದೆ

ಶುಕ್ರವಾರ, 3-7-1998

**• ವಿದ್ಯುತ್ ಸ್ಥಿತಿ: 6ರಂದು ಉನ್ನತ ಮಟ್ಟದ ಸಭೆ**

**ಬೆಂಗಳೂರು, ಜುಲೈ 2–** ರಾಜ್ಯದ ವಿದ್ಯುತ್ ಪರಿಸ್ಥಿತಿಯ ಬಗ್ಗೆ ಪರಿಶೀಲಿಸಲು ಹಾಗೂ ಹೊಸ ವಿದ್ಯುತ್ ನೀತಿ ರೂಪಿಸುವ ಸಂಬಂಧ ಜುಲೈ 6ರಂದು ಉನ್ನತ ಮಟ್ಟದ ಸಭೆ ಕರೆಯಲಾಗಿದೆ ಎಂದು ಇಂಧನ ಸಚಿವ ಶರಣಬಸಪ್ಪ ದರ್ಶನಾಪೂರ ಅವರು ಈ ವಿಷಯವನ್ನು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

'ವಿದ್ಯುತ್ ಮಂಡಲಿ ಮತ್ತು ವಿದ್ಯುತ್ ನಿಗಮದ ಹಿರಿಯ ಅಧಿಕಾರಿಗಳು ಭಾಗವಹಿಸಲಿರುವ ಈ ಸಭೆಯಲ್ಲಿ ಹಾಲಿ ಜಾರಿಯಲ್ಲಿರುವ ವಿದ್ಯುತ್ ಖೋತಾ ಪ್ರಮಾಣವನ್ನು ಕಡಿಮೆ ಮಾಡುವ ಕುರಿತು ಹಾಗೂ ಬರುವ ಜೂನ್ ತಿಂಗಳವರೆಗೆ ಅನುಸರಿಸಬೇಕಾದ ವಿದ್ಯುತ್ ಸರಬರಾಜು ನೀತಿಯ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿದರು.

**• 'ಘೋರಿ'ಗೆ ಪ್ರತಿಕ್ಷಿಪಣಿ: ರಷ್ಯಾ ಸಿದ್ಧ**

**ಮಾಸ್ಕೋ, ಜುಲೈ 2 (ಪಿಟಿಐ) –** ಭಾರತದ ಪ್ರಮುಖ ನಗರಗಳಿಗೆ, ಸೇನಾ ನೆಲೆಗಳಿಗೆ ಭೀತಿ ಒಡ್ಡಿದ್ದ ಪಾಕಿಸ್ತಾನದ 'ಘೋರಿ ಕ್ಷಿಪಣಿ'ಯನ್ನು ಸಮರ್ಥವಾಗಿ ಎದುರಿಸಬಲ್ಲ ವಿಶಿಷ್ಟ ಪ್ರತಿ ಕ್ಷಿಪಣಿಯನ್ನು (ಎಬಿಎಂ) ಭಾರತಕ್ಕೆ ಒದಗಿಸಲು ರಷ್ಯಾ ಮುಂದಾಗಿದೆ.

### 50 ವರ್ಷಗಳ ಹಿಂದೆ

ಮಂಗಳವಾರ, 3-7-1973

**• ವೈದ್ಯಕೀಯ ಕಾಲೇಜು ಪ್ರವೇಶ: ನೂರಕ್ಕೆ ಮಿತಿ**

**ಬೆಂಗಳೂರು, ಜುಲೈ 2–** ಈ ವರ್ಷದಿಂದ ರಾಜ್ಯದ ಒಂಬತ್ತು ಮೆಡಿಕಲ್ ಕಾಲೇಜುಗಳಲ್ಲಿ ಹೊಸ ಪ್ರವೇಶವನ್ನು ತಲಾ ನೂರಕ್ಕೆ ಮಿತಿಗೊಳಿಸಲು ಸರ್ಕಾರ ಆದೇಶ ನೀಡಿದೆ.

ಭಾರತೀಯ ವೈದ್ಯ ಪರಿಷತ್ತು ನೀಡಿದ ಸಲಹೆಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಮಂತ್ರಿ ಶ್ರೀ ಎಚ್.ಸಿದ್ಧವೀರಪ್ಪ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ನಗರದ ಸೇಂಟ್ ಜಾನ್ ಮೆಡಿಕಲ್ ಕಾಲೇಜು 30 ಮಂದಿಯನ್ನು ಮಾತ್ರ ಈ ಬಾರಿ ಸೇರಿಸಿಕೊಳ್ಳುವುದಾಗಿ ತಿಳಿಸಿದೆಯೆಂದು ಹೇಳಿದರು. 4 ಸರ್ಕಾರಿ ಮೆಡಿಕಲ್ ಕಾಲೇಜುಗಳು ಕಳೆದ ವರ್ಷ 760 ಮಂದಿ ವಿದ್ಯಾರ್ಥಿಗಳು ದಾಖಲಿಸಿಕೊಂಡಿದ್ದವು. ಈ ವರ್ಷ ಸಂಖ್ಯೆ 400ಕ್ಕೆ ಇಳಿಯಲಿದೆ. ಅದೇ ರೀತಿಯಲ್ಲಿ 5 ಖಾಸಗಿ ಮೆಡಿಕಲ್ ಕಾಲೇಜುಗಳು 434 ಮಂದಿಯನ್ನು ಮಾತ್ರ ಸೇರಿಸಿಕೊಳ್ಳಲಿದೆ (ಬೆಳಗಾವಿ, ಕಲ್ಬುರ್ಗಿ, ದಾವಣಗೆರೆ, ಮಣಿಪಾಲ್ ಮತ್ತು ಸೇಂಟ್ ಜಾನ್).

**• 'ಬಹಳ ಕಾಲ ಬದುಕುವುದಿಲ್ಲ' ಪತ್ರಕರ್ತರೊಬ್ಬರಿಗೆ ವಿಧಾನಸಭೆ ಉಪಾಧ್ಯಕ್ಷ ಕದಂ ಎಚ್ಚರಿಕೆ**

**ಕಾರವಾರ, ಜುಲೈ 2–** 'ಕಾರವಾರದ ಹಿರಿಯ ಪತ್ರಿಕೋದ್ಯೋಗಿಯೊಬ್ಬರು ನನ್ನ ಬಗ್ಗೆ ತಮ್ಮ ಪತ್ರಿಕೆಗೆ ಕಟುವಾದ ವರದಿಗಳನ್ನು ಕಳುಹಿಸುತ್ತಿದ್ದಾರೆ. ಅವರು ಈ ರೀತಿಯ ವರದಿ ಕಳುಹಿಸುವುದನ್ನು ಮುಂದುವರಿಸಿದರೆ ಬಹಳ ಕಾಲ ಬದುಕುವುದಿಲ್ಲ' ಎಂದು ವಿಧಾನಸಭೆಯ ಉಪಾಧ್ಯಕ್ಷ ಶ್ರೀ ಬಿ.ಪಿ.ಕದಂ ಅವರು ನಿನ್ನೆ ಇಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಜನತಾ ಗೃಹನಿರ್ಮಾಣ ಯೋಜನೆ ಅನ್ವಯ ಮಾದರಿ ಗೃಹಗಳ ಶಂಕು ಸ್ಥಾಪನೆಯನ್ನು ಶ್ರೀ ಕದಂ ಅವರು ನೆರವೇರಿಸಿದರು.

ಶ್ರೀ ಕದಂ ಅವರು ಮೇಲ್ಕಂಡ 'ಪ್ರಕಟಣೆ' ನೀಡಿದ ಕೂಡಲೇ ಸಭೆಯಲ್ಲಿದ್ದ ಮತ್ತೊಬ್ಬ ಪತ್ರಕರ್ತರು 'ಸದರಿ ಪ್ರಕಟಣೆಯನ್ನು ಕಾರ್ಯರೂಪಕ್ಕೆ ತರಲು ಏನಾದರೂ ವ್ಯವಸ್ಥೆ ಮಾಡಿದ್ದೀರಾ?' ಎಂದು ಪ್ರಶ್ನಿಸಿದರು.

ಶ್ರೀ ಕದಂ ಅವರ ಅಪಹಾಸ್ಯದ ನಗೆಯೇ ಈ ಪ್ರಶ್ನೆಗೆ ಉತ್ತರವಾಯಿತು.

ಸಂರಕ್ಷಿತ ತಾಣಗಳಲ್ಲಿ ಮಾನವಕೇಂದ್ರಿತ ಅಭಿವೃದ್ಧಿಗೆ ತಡೆ ಹಾಕಬೇಕಾಗಿದೆ

# ಜೋಗಕ್ಕೆ ಅಭಿವೃದ್ಧಿಯೇ ಮುಳುವು?!

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

**ಶರಾವತಿ** ನದಿಗೆ ಅಡ್ಡಲಾಗಿ ಲಿಂಗನಮಕ್ಕಿ ಅಣೆಕಟ್ಟು ಕಟ್ಟುವ ಹೊತ್ತಿನ ಆ ಕಾಲದಲ್ಲಿ ಈ ಭಾಗದಲ್ಲಿ ವಾರ್ಷಿಕ 320 ಇಂಚು ಮಳೆ ಸುರಿಯುತ್ತಿತ್ತು. ಜೋಗ ಜಲಪಾತದ ರುದ್ರ ರಮಣೀಯ ದೃಶ್ಯವನ್ನು ಕಣ್ತುಂಬಿಕೊಳ್ಳಲು ವಿದೇಶಗಳಿಂದ ಜನ ಬರುತ್ತಿದ್ದರು. 830 ಅಡಿ ಎತ್ತರದಿಂದ ರಭಸವಾಗಿ ಧುಮ್ಮಿಕ್ಕುತ್ತಿದ್ದ ಜಲಪಾತದ ಶಬ್ದಕ್ಕೆ ಕಿಲೊಮೀಟರ್ ದೂರದಲ್ಲಿರುವ ಬ್ರಿಟಿಷ್ ಬಂಗಲೆಯ ಮಹಾದ್ವಾರದ ಕೆ.ಜಿ. ತೂಕದ ಹಿತ್ತಾಳೆ ಬೀಗ ಪತರಗುಟ್ಟಿ ನಡುಗುತ್ತಿತ್ತು. ಅದೆಷ್ಟೋ ವಿದೇಶಿ ಪ್ರವಾಸಿಗರು ಹೊನ್ನಾವರಕ್ಕೆ ಹೋಗಿ ಅಲ್ಲಿಂದ ದೋಣಿಯ ಮೂಲಕ ಗೇರುಸೊಪ್ಪೆಯವರೆಗೆ ಬಂದು, ಅಲ್ಲಿಂದ ನಡೆದುಕೊಂಡೋ ಅಥವಾ ಕುದುರೆಗಳ ಮೇಲೋ ಜೋಗ ಜಲಪಾತ ನೋಡಲು ಬರುತ್ತಿದ್ದರು. ವಿದೇಶಿ ಪ್ರವಾಸಿಗರಿಂದ ರಾಜ್ಯದ ಬೊಕ್ಕಸಕ್ಕೆ ಆದಾಯವೂ ಬರುತ್ತಿತ್ತು. ಜೋಗದ ಇಂತಹ ವೈಭವದ ಕುರಿತಾಗಿ ವಿದೇಶಿಯರು ಬರೆದ ಅದ್ಭುತ ಟಿಪ್ಪಣಿಗಳು ಜೋಗ ಜಲಪಾತ ವೀಕ್ಷಕರ ಪುಸ್ತಕದಲ್ಲಿ ದಾಖಲಾಗಿವೆ.

'1898ರಲ್ಲೇ ಕೆಲ ಬ್ರಿಟಿಷ್ ಕಂಪನಿಗಳು ಜೋಗದಲ್ಲಿ ಜಲವಿದ್ಯುತ್ ಯೋಜನೆಯನ್ನು ಆರಂಭಿಸಲು ಮುಂದಾಗಿದ್ದವು. ಈ ಬಗ್ಗೆ ತನ್ನ ಅಭಿಪ್ರಾಯವನ್ನು ತಿಳಿಸುವಂತೆ ಬ್ರಿಟಿಷ್ ಸರ್ಕಾರ ಆಗಿನ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್ ಅವರನ್ನು ಕೇಳಿಕೊಂಡಿತು. 1902ರಲ್ಲಿ ಜೋಗ ಜಲಪಾತಕ್ಕೆ ಬಂದ ಲಾರ್ಡ್ ಕರ್ಜನ್ 'ಜಲವಿದ್ಯುತ್ ಯೋಜನೆ ಮತ್ತೆ ಪ್ರಸ್ತಾಪಕ್ಕೆ ಬಂದರೆ, ನನ್ನ ನಂತರ ಈ ಸ್ಥಾನಕ್ಕೆ ಬರುವವರು ಈ ಹೀನಕೃತ್ಯಕ್ಕೆ ಒಪ್ಪಿಗೆ ಕೊಡುವ ಮೊದಲು ನಿಧಾನವಾಗಿ ಯೋಚಿಸಬೇಕು. ಅವರು ಸ್ವತಃ ಈ ಜಲಪಾತಕ್ಕೆ ಭೇಟಿ ಇತ್ತ ವಿನಾ ಯಾವ ನಿರ್ಧಾರವನ್ನೂ ಕೈಗೊಳ್ಳಬಾರದು' ಎಂಬ ಷರಾ ಬರೆದು, ಜಲವಿದ್ಯುತ್ ಯೋಜನೆ ಪ್ರಸ್ತಾವವನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ'.

'ರಾಜ್ಯಕ್ಕೆ ಬೆಳಕು ನೀಡಬೇಕೆಂಬ ಪ್ರಸ್ತಾವಕ್ಕೆ ಜೀವ ಬಂದು, ಶರಾವತಿ ಜಲವಿದ್ಯುತ್ ಯೋಜನೆ ಜಾರಿಯಾಯಿತು. ಜಲಪಾತ ನೋಡಲು ಬರುವವರ ಸಂಖ್ಯೆಯೂ ಹೆಚ್ಚಿತು. ಪ್ರವಾಸಿಗರಿಗೆ ಜಲಪಾತದ ಆಜುಬಾಜಿನಲ್ಲಿ ಮೂಲ ಸೌಕರ್ಯ ನಿರ್ಮಿಸಲಾಯಿತು. ವರ್ಷಪೂರ್ತಿ ಧುಮ್ಮಿಕ್ಕುತ್ತಿದ್ದ ಜಲಪಾತ ಕ್ರಮೇಣ ಮಳೆಗಾಲದಲ್ಲಿ ಮಾತ್ರ ಕಂಡುಬರುವಂತಾಯಿತು. ಈಗಂತೂ ಅಭಿವೃದ್ಧಿಯ ಹೆಸರಿನಲ್ಲಿ ವಿಕೃತಗೊಂಡ ಜೋಗವನ್ನು ನೋಡಲು ವಿದೇಶಿ ಪ್ರವಾಸಿಗರು ಬರುತ್ತಿಲ್ಲ' ಎಂಬ ಗಂಭೀರ ವಿಷಯವನ್ನು, ಮುಳುಗಡೆ ಸಂತ್ರಸ್ತರ ಕಣ್ಣೀರ ಕಥೆಯನ್ನು ನಾ.ಡಿಸೋಜ ಬಹಳ ಬೇಸರದಿಂದಲೇ ಹೇಳುತ್ತಾರೆ. ಈ ಅಂಶಗಳನ್ನು ಅವರು ತಮ್ಮ ಕಾದಂಬರಿಗಳಲ್ಲೂ ದಾಖಲಿಸಿದ್ದಾರೆ.

ವಿಶ್ವದ ಎರಡನೇ ಅತಿದೊಡ್ಡ ಜಲಪಾತವೆಂಬ ಹೆಗ್ಗಳಿಕೆಗೆ ಪಾತ್ರವಾದ ನೈಸರ್ಗಿಕ ಜೋಗವನ್ನು ಹಿಂದಿನ 25 ವರ್ಷಗಳಿಂದ ಅಭಿವೃದ್ಧಿ ಪಿಪಾಸು ಸೊರಗಿಸುತ್ತಲೇ ಇದೆ. ಸಹಜ ನೈಸರ್ಗಿಕ ಮರಗಳು ಧರೆಗುರುಳಿ, ಕಾಂಕ್ರೀಟ್ ಕಾಡು ನಿರ್ಮಾಣವಾಗುತ್ತಿದೆ. ಶರಾವತಿಯಲ್ಲಿ ನೀರಿನ ಹರಿವು ಕಡಿಮೆಯಾಗಿದೆ. ಇತ್ತ ಸರ್ವಋತು ಜಲಪಾತ ರೂಪಿಸುವ ಯೋಜನೆಯನ್ನು ಕೈಬಿಟ್ಟಿಲ್ಲ, ಕೇಬಲ್ ಕಾರು ರೂಪಿಸುವ ಯೋಚನೆಯೂ ಜೀವಂತವಾಗಿದೆ, ಸಾಹಸ ಕ್ರೀಡೆಯಾದ ಝಿಪ್ ಲೈನ್ ನಿರ್ಮಾಣವಾಗಿದ್ದರೂ ನಿರುಪಯುಕ್ತವಾಗಿದೆ. ಅಂತಹವುಗಳ ಜೊತೆಯಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸುವ ಪ್ರಯತ್ನ ಮುಂದುವರಿದಿದೆ. ವಿಪರ್ಯಾಸದ ಸಂಗತಿ ಎಂದರೆ, ಈಗ ಇರುವ ಐಷಾರಾಮಿ ಹೋಟೆಲಿನ ಕೊಠಡಿಗಳು ಭರ್ತಿಯಾದ ದಾಖಲೆ ಹಿಂದಿನ 20 ವರ್ಷಗಳಲ್ಲಿ ಇಲ್ಲವೆಂದು, ಅದರ ನಿರ್ವಹಣೆ ಮಾಡುವ ಮೇಟಿ ಹೇಳುತ್ತಾರೆ.

ಜೋಗದ ಶರಾವತಿ ಕಣಿವೆ ರೀತಿಯ ಮತ್ತೊಂದು ಕಣಿವೆ ಇಡೀ ಪಶ್ಚಿಮಘಟ್ಟದಲ್ಲಿ ಇಲ್ಲ. ಇಲ್ಲಿಗೆ ಸೀಮಿತವಾಗಿರುವ ಹಸಿರು, ನೀಲಿ ಪಾರಿವಾಳಗಳು ಹಾಗೂ ಅವುಗಳನ್ನು ಅವಲಂಬಿಸಿ ಬದುಕುವ ಡೇಗೆಗಳ ಆವಾಸಸ್ಥಾನವಿದು. ಇವುಗಳ ಹಾರಾಟಕ್ಕೆ ಅಡಚಣೆಯಾಗುವಂತಹ ಕೇಬಲ್ ಕಾರಿನಂತಹ ಯೋಜನೆ ನಿರ್ಮಿಸಿದಲ್ಲಿ, ಈ ಅಪರೂಪದ ಸಂತತಿ ಶಾಶ್ವತವಾಗಿ ನಾಶವಾಗಲಿದೆ ಎಂದು ವನ್ಯಜೀವಿ ತಜ್ಞರು ಎಚ್ಚರಿಸುತ್ತಾರೆ.

ಜೋಗ ಆವರಣವು ಶರಾವತಿ ಸಿಂಗಳೀಕ ಅಭಯಾರಣ್ಯದ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿದೆ. ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಸಬೇಕಿದ್ದಲ್ಲಿ, ಕೇಂದ್ರ ಅರಣ್ಯ-ಪರಿಸರ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯ. ಆದರೆ, ಜೋಗ ಪರಿಸರದ ಅಭಿವೃದ್ಧಿ ವಿಚಾರದಲ್ಲಿ ಇದ್ಯಾವುದೂ ಬೇಕಾಗಿಲ್ಲ. ಅತ್ಯಂತ ಸೂಕ್ಷ್ಮವಾಗಿ ರಚನೆಯಾಗಿರುವ ಜಲಪಾತದ ಬಂಡೆಗಳು ಒಂದೊಂದೇ ಕಳಚಿ ಬೀಳುತ್ತಿವೆ. ಜೋಗದ ಧಾರಣಾ ಸಾಮರ್ಥ್ಯ ಮುಗಿದುಹೋಗಿದೆ. ಇದೇ ಭರದಲ್ಲಿ ಅಭಿವೃದ್ಧಿ ಸಾಗಿದರೆ, ಇಡೀ ಜಲಪಾತವೇ ಕುಸಿದುಬೀಳುವ ಅಪಾಯವಿದೆ ಎಂಬುದು ತಜ್ಞರ ಅಭಿಪ್ರಾಯ. ಶರಾವತಿ ಮತ್ತು ಅಘನಾಶಿನಿ ನದಿ ಕಣಿವೆಗಳ ಅರಣ್ಯ ಪ್ರದೇಶದಲ್ಲಿ ಸಿಂಗಳೀಕಗಳ ಸಂಖ್ಯೆ ಸುಸ್ಥಿರವಾಗಿದೆ ಎಂಬ ವರದಿಯನ್ನು ಕೊಯಮತ್ತೂರಿನ ಸಲೀಂ ಅಲಿ ಪಕ್ಷಿ ವಿಜ್ಞಾನ ಮತ್ತು ನೈಸರ್ಗಿಕ ಇತಿಹಾಸ ಕೇಂದ್ರ ನೀಡಿದೆಯೆಂದು ಅರಣ್ಯ ಇಲಾಖೆ ಹೇಳಿಕೊಂಡಿದೆ. 2015ರಲ್ಲಿ ಇವುಗಳ ಸಂಖ್ಯೆ 30 ಗುಂಪುಗಳಲ್ಲಿ ವಿಂಗಡಣೆಯಾಗಿ 600 ಇತ್ತು, ಈಗ 32 ಗುಂಪುಗಳಲ್ಲಿ ಈ ಸಂಖ್ಯೆ 730ಕ್ಕೆ ತಲುಪಿದೆ. ಹೆಚ್ಚಳವಾದ ಸಂಖ್ಯೆ ವನ್ಯಜೀವಿ ಪ್ರೇಮಿಗಳಲ್ಲಿ ಸಂತಸ ತರುವ ವಿಷಯವಾದರೂ, ವಾಸ್ತವಿಕ ನೆಲೆಗಟ್ಟಿನಲ್ಲಿ ಅಲ್ಲಿನ ಕ್ಷೇತ್ರ ಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡಬೇಕಿದೆ.

ಅನೇಕ ಅನವಶ್ಯಕ ಅಭಿವೃದ್ಧಿ ಕೆಲಸಗಳು ಸಿಂಗಳೀಕಗಳ ಆವಾಸಸ್ಥಾನವನ್ನು ನಾಶ ಮಾಡುತ್ತಿವೆ. ಅದರಲ್ಲಿ ಪ್ರಮುಖವಾದುದು ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ. ಎನ್.ಎಚ್.766ಇ ಎಂದು ಕರೆಯಲಾಗುವ ಈ ಹೆದ್ದಾರಿ ವಿಸ್ತರಣೆಗಾಗಿ ಈಗಾಗಲೇ 55 ಸಾವಿರಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗಿದೆ. ಎತ್ತರದ ಮರಗಳ ರೆಂಬೆಕೊಂಬೆಗಳು ಒತ್ತಾಗಿ ಕೂಡಿಕೊಂಡಿರುವ ಮೇಲಾವರಣ ಅಥವಾ ಸಿಂಗಳೀಕ ಗುಂಪುಗಳು ಚಲಿಸುವ ಪಥ ಛಿದ್ರವಾಗಿದೆ. 766ಸಿ ಎಂಬ ಹೊಸ ರಾಷ್ಟ್ರೀಯ ಹೆದ್ದಾರಿಯು ಶಿಕಾರಿಪುರ-ಹೊಸನಗರ- ನಗರ-ನಿಟ್ಟೂರು ಮಾರ್ಗವಾಗಿ ಬೈಂದೂರು ತಲುಪಲಿದ್ದು, ಇದು ಮತ್ತೆ ಶರಾವತಿ ಸಿಂಗಳೀಕ ಅಭಯಾರಣ್ಯದ ಸೂಕ್ಷ್ಮ ಭಾಗವನ್ನು ಛಿದ್ರಗೊಳಿಸಲಿದೆ. ಈ ಅಭಯಾರಣ್ಯದ ಹೃದಯಭಾಗದಲ್ಲಿ ಅಂತರ್ಗತ ಜಲವಿದ್ಯುತ್ ಯೋಜನೆ ರೂಪಿಸುವ ಪ್ರಸ್ತಾವವೂ ಇದೆ. ಅದಕ್ಕಾಗಿ 800 ಹೆಕ್ಟೇರಿನಷ್ಟು ದಟ್ಟಾರಣ್ಯ ನಾಶವಾಗಲಿದೆ ಎಂದು ಅಂದಾಜಿಸಲಾಗಿದೆ.

ಅಭಿವೃದ್ಧಿ ಹರಿಕಾರರಿಗೆ ತಾಳಗುಪ್ಪ-ಹೊನ್ನಾವರ ರೈಲು ಮಾರ್ಗ ನಿರ್ಮಿಸುವ ಯೋಚನೆ ಇದ್ದೇ ಇದೆ. ಪ್ರಸ್ತಾವಿತ ರೈಲು ಮಾರ್ಗವು ಮತ್ತೆ ಶರಾವತಿ ಸಿಂಗಳೀಕ ಅಭಯಾರಣ್ಯವನ್ನು ನಿಶ್ಚಿತವಾಗಿ ಛಿದ್ರಗೊಳಿಸಲಿದೆ. ಅತ್ತ ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯ, ಸೋಮೇಶ್ವರ ವನ್ಯಜೀವಿ ಅಭಯಾರಣ್ಯ, ಕುದುರೆಮುಖ ರಾಷ್ಟ್ರೀಯ ಉದ್ಯಾನ, ಕಾಳಿ ಹುಲಿಯೋಜನೆ ಅಭಯಾರಣ್ಯ ಹೀಗೆ ಎಲ್ಲೆಲ್ಲೂ ರಸ್ತೆ ವಿಸ್ತರಣೆ ಹಾಗೂ ರೈಲು ಮಾರ್ಗಗಳ ಯೋಜನೆಗಳು ನಡೆಯುತ್ತಿವೆ. ಈ ಎಲ್ಲ ಭಾಗದಲ್ಲೂ ನೂರಾರು ಜೀವಿವೈವಿಧ್ಯ ಪ್ರಭೇದಗಳಿವೆ. ಮಾನವಕೇಂದ್ರಿತ ಅಭಿವೃದ್ಧಿಗಾಗಿ ನೈಸರ್ಗಿಕ ನೆಲೆಗಳನ್ನು ಕಳೆದುಕೊಳ್ಳುವ ವನ್ಯಜೀವಿಗಳು ವಿಧಿಯಿಲ್ಲದೇ ರೈತರ ತೋಟಕ್ಕೆ ನುಗ್ಗುತ್ತವೆ. ಮಾನವ-ವನ್ಯಜೀವಿ ಸಂಘರ್ಷ ತಾರಕಕ್ಕೇರುತ್ತದೆ.

ಜೂನ್ ಮುಗಿದರೂ ಮಲೆನಾಡಿನಲ್ಲಿ ವಾಡಿಕೆಯ ಮಳೆಗಾಲವಿನ್ನೂ ಪ್ರಾರಂಭವಾಗಿಲ್ಲ. ಇದೇ ಹೊತ್ತಿನಲ್ಲಿ ಅರಣ್ಯ ಸಚಿವರು, ಮುಂದಿನ ಐದು ವರ್ಷಗಳಲ್ಲಿ 25 ಕೋಟಿ ಸಸಿ ನೆಡುವ ಗುರಿ ಹೊಂದಿ, ಕಾರ್ಯಪ್ರವೃತ್ತರಾಗಲು ಅರಣ್ಯ ಇಲಾಖೆಗೆ ಸೂಚನೆ ನೀಡಿದ್ದಾರೆ. ಈ ತರಹ ಯೋಚನೆಗಳು ಹಾಗೂ ಯೋಜನೆಗಳು ಕೇಳುವ ಕಿವಿಗಳಿಗೆ ಹಿತವಾಗಬಲ್ಲವೇ ವಿನಾ, ಅವು ಅನುಷ್ಠಾನಗೊಂಡು, ಫಲಿತಾಂಶ ನೀಡುವುದು ತೀರಾ ವಿರಳ. ಲಿಂಗನಮಕ್ಕಿ ಅಣೆಕಟ್ಟಿನ ನೀರನ್ನು ಬಳಸಿಕೊಂಡು ವಿದ್ಯುತ್ ಉತ್ಪಾದನೆ ಮಾಡುವ ಪ್ರದೇಶಕ್ಕೆ ಎ.ಬಿ.ಸೈಟ್ ಎಂದು ಕರೆಯುತ್ತಾರೆ. ಅಂದರೆ, ಅದು ಆಗಿನ ಆನೆಬೈಲು ಎಂದು ಕರೆಯಲಾಗುವ ಆನೆಪಥವಾಗಿತ್ತು. ಲಿಂಗನಮಕ್ಕಿ ಅಣೆಕಟ್ಟಿನ ನಿರ್ಮಾಣದ ನಂತರದಲ್ಲಿ ಆನೆಪಥ ಶಾಶ್ವತವಾಗಿ ನಾಶವಾಯಿತು.

ಅಳಿದುಳಿದ ಅರಣ್ಯಗಳನ್ನು, ವನ್ಯಜೀವಿ ನೆಲೆಗಳನ್ನು ಇನ್ನಷ್ಟು ಮತ್ತಷ್ಟು ಎಂದು ಅಭಿವೃದ್ಧಿಯ ಭೀಮಚಕ್ರದಡಿಯಲ್ಲಿ ಹೊಸಕಿ ಹಾಕುತ್ತಾ ಹೋದರೆ, ಸಹ್ಯಾದ್ರಿ ತಪ್ಪಲಿನ ಭವಿಷ್ಯದ ಜೊತೆ ತಪ್ಪಲನ್ನೇ ನಂಬಿಕೊಂಡ ಬಯಲುನಾಡೂ ಸಂಕಷ್ಟದಲ್ಲಿ ಸಿಲುಕಲಿದೆ. ಸಂರಕ್ಷಿತ ತಾಣಗಳಲ್ಲಿ ಮಾನವಕೇಂದ್ರಿತ ಅಭಿವೃದ್ಧಿಗೆ ತಡೆ ಹಾಕಬೇಕಾಗಿದೆ. ಅರಣ್ಯ ಸಚಿವರು ಗಮನ ಹರಿಸುವರೇ?

### ಚುರುಮುರಿ

## ಬೆಂಕಿಚೆಂಡುಗಳು

• ಸುಮಂಗಲಾ

**ಬೆಕ್ಕಣ್ಣ** ಮೋದಿ ಮಾಮನ ದೆಹಲಿ ಮೆಟ್ರೊಯಾನದ ಸುದ್ದಿ ಓದಿ ಖುದ್ದು ಓಡಾಡಿದ ಸಂಭ್ರಮದಲ್ಲಿ ಮತ್ತೆ ಓದಿತು.

'ನೋಡಿಲ್ಲಿ… ಮೋದಿಮಾಮನೂ ಮಂದಿ ಹಂಗೆ ಕ್ಯೂ ವಳಗ ನಿಂತು ಟೋಕನ್ ತಗಂಡು ಮೆಟ್ರೊ ಹತ್ಯಾರೆ. ಶ್ರೀಸಾಮಾನ್ಯರ ಜೊತಿಗಿ ಕುಂತು ಎಷ್ಟ್ ಚಂದ ಮಾತಾಡ್ಯಾರೆ' ಎಂದು ಫೋಟೊ ತೋರಿಸಿತು.

'ಅಲ್ಲಲೇ… ಅಲ್ಲಿ ಮಣಿಪುರ ಹೊತ್ತಿ ಉರಿಯಾಕೆ ಹತ್ತೈತಿ. ಅಮೆರಿಕ ಯಾತ್ರೆಯಿಂದ ಬಂದ ತಕ್ಷಣ ವಿಮಾನ ಹತ್ತಿ ಮಣಿಪುರಕ್ಕೆ ಶಾಂತಿಪಾಲನೆ ಕರೆ ಕೊಡೋದಕ್ಕೆ ಹೋಗೋದು ಬಿಟ್ಟು, ಮೆಟ್ರೊಯಾನ ಮಾಡೂ ಹರಕತ್ ಏನೈತಲೇ?' ಎಂದು ನಾನು ಕೇಳಿದರೆ ಬೆಕ್ಕಣ್ಣ ಉಡಾಫೆಯಿಂದ ವಾದಿಸಿತು.

'ನಮ್ ಶಾಣೇ ಅಂಕಲ್ಲು ಅದನ್ನ ಹೆಂಗ ಬಗಿಹರಿಸೂದು ಅಂತ ಸಭೆ ಮೇಲೆ ಸಭೆ ಮಾಡ್ಯಾರೆ, ಅದೇ ಸಾಕೇಳು. ಪ್ರಧಾನಿಗಳಿಗೆ ಬ್ಯಾರೆ ಘನಗಂಭೀರ ವಿಚಾರಗೋಳು ರಗಡ್ ಇರ್ತಾವು. ಹಿಂಗ ಮೆಟ್ರೊಯಾನ ಮಾಡಿದರ ಮುಂದಿನ ಲೋಕಸಭೆಗೆ ಈಗೇ ಟವೆಲ್ ಹಾಕಿ ಸೀಟು ಹಿಡಿದಂಗೆ, ಗೊತ್ತಾತಿಲ್ಲೋ'.

'ಮುಂದಿನ ಲೋಕಸಭೆಗೆ ಸೀಟಿನ ವಿಚಾರ ಬಿಡಲೇ, ಕಮಲಕ್ಕನ ಮನಿಯವ್ರಿಗೆ ನಮ್ ಕರುನಾಡಿನ ವಿಧಾನಸಭೆಗೆ ವಿರೋಧ ಪಕ್ಷದ ನಾಯಕನ ವಿಚಾರನೇ ಇಷ್ಟೊಂದು ಕಗ್ಗಂಟು. ಹತ್ತಾರು ದೊಡ್ಡ ತಲೆಗಳು ಸೇರಿ ಯಾರನ್ನು ಮಾಡದು ಅಂತ ಕಸರತ್ತು ನಡೆಸಿದ್ರಂತ…' ಎಂದು ನಾನು ಹೇಳುತ್ತಿದ್ದಂತೆ ಬೆಕ್ಕಣ್ಣ ಇಂಗು ತಿಂದ ಮಂಗನಂತೆ ಮುಖ ಮಾಡಿತು.

'ಖರೇ ಅಂದ್ರ ನಮ್ಮ ಯತ್ನಾಳ ಅಂಕಲ್ಲೇ ಬೆಸ್ಟು! ಕಮಲಕ್ಕನ ಮನಿಯವ್ರದ್ದೇ ರಾಜ್ಯಭಾರ ಇದ್ದಾಗಲೂ ಅಂವ ವಿರೋಧ ಪಕ್ಷದವನ ಹಂಗೆ ಹೈಕಮಾಂಡಿಗೂ ಕ್ಯಾರೆ ಅನ್ನದೇ ಮಾತಿನ ಬೆಂಕಿ ಉಗುಳ್ತಿದ್ದ. ಬೆಂಕಿ ಜೊತೆಗೆ ಎಲ್ಲಾ ಥರದ ವಿಷಕೆಂಡ ಸೇರಿಸಿ ಮಾತಿನ ಬೆಂಕಿಚೆಂಡು ತೂರಿಸ್ತಾನ ನೋಡು' ಎಂದು ಏನೇನೋ ಪ್ರಲಾಪಿಸುತ್ತಾ ಬೆಕ್ಕಣ್ಣ ಕೊಂಕುನಗೆ ಬೀರಿತು.

### ಸಂಗತ

# ಹಾರುವ ತಟ್ಟೆ ಎನ್ನುವುದುಂಟೇ?

**ಹಾರುವ ತಟ್ಟೆಗಳ ಅಸ್ತಿತ್ವದ ಸತ್ಯಾಸತ್ಯತೆ ತಿಳಿಯಲು, ವಿಶ್ವ ಅಪರಿಚಿತ ಹಾರುವ ಕಾಯಗಳ ದಿನಾಚರಣೆಯ ಈ ಸಂದರ್ಭ ಖಂಡಿತ ಸಹಕಾರಿಯಾಗಬಲ್ಲದು**

• ಬಿ.ಎಸ್.ಭಗವಾನ್

**ಇರುಳಿನಲ್ಲಿ** ಆಗಸದ ನಯನ ಮನೋಹರ ನೋಟಕ್ಕೆ ಎಣೆಯಿಲ್ಲ. ಒಂದರ್ಥದಲ್ಲಿ ನಮ್ಮ ಪೂರ್ವಜರೆಲ್ಲ ಖಗೋಳತಜ್ಞರೇ. ನಮ್ಮ ಭೂಗ್ರಹದಂತೆಯೇ ನಳನಳಿಸುವ ಒಂದಾದರೂ ನೆಲೆ ಎಲ್ಲಾದರೂ ಉಂಟೆ ಎಂಬ ಒಗಟು ನಾಗರಿಕತೆಯ ಆರಂಭದಿಂದಲೂ ಕಾಡುತ್ತಲೇ ಇದೆ. ಸಾವಿರಾರು ವರ್ಷಗಳಿಂದ ಆಗಾಗ ಜನ ತಾವು ಆಕಾಶದಲ್ಲಿ ವಿಲಕ್ಷಣ ಬೆಳಕನ್ನು, ವಸ್ತುಗಳನ್ನು ಕಂಡಿದ್ದಾಗಿ ಹೇಳುವುದು ಸಾಮಾನ್ಯವಾಗಿದೆ. ಬಹುತೇಕ ಅವು ಧೂಮಕೇತು, ಉಲ್ಕೆ, ಕ್ಷುದ್ರಗ್ರಹ, ಮೋಡ, ನಕ್ಷತ್ರ ಅಥವಾ ಧ್ರುವಪ್ರಭೆ ನೋಡಿ ಪಟ್ಟ ವಿಭ್ರಮೆಗಳಾಗಿರುತ್ತವೆ.

ಏನೆಂದು ಗುರುತಿಸಲಾಗದ, ಅದರಲ್ಲೂ ನಿಗೂಢ ಅಂತರಿಕ್ಷದಲ್ಲಿ ದೃಷ್ಟಿಗೆ ಬೀಳುವ ವಸ್ತುಗಳೆಂದರೆ ಕುತೂಹಲ ಹಿಡಿದಿಟ್ಟುಕೊಳ್ಳಲಾದೀತೆ? 1947ರ ಜೂನ್ 24ರಂದು ವಾಷಿಂಗ್ಟನ್ ಬಳಿಯ ರೇನಿಯರ್ ಪರ್ವತದ ಮೇಲೆ ವಿಮಾನ ಹಾರಿಸುತ್ತ ಕೆನೆತ್ ಆರ್ನಾಲ್ಡ್ ಎಂಬ ಉದ್ಯಮಿ, ಹಗ್ಗದ ಆಕೃತಿಯಲ್ಲಿದ್ದ ಒಂಬತ್ತು ಹಾರುವ ತಟ್ಟೆಗಳನ್ನು ಕಂಡಿದ್ದಾಗಿ ವರದಿ ಮಾಡಿದ್ದ. ತಾಸಿಗೆ 2,000 ಕಿಲೊಮೀಟರ್‌ಗೂ ಅಧಿಕ ವೇಗದಲ್ಲಿ ಅವು ಭುವಿಗಿಳಿಯುವಂತೆ ಇದ್ದವು ಎಂದೂ ಆತ ಗಾಬರಿ ಹುಟ್ಟಿಸಿದ್ದ. ಆದರೆ ಅವನದು ಬರಿಯ ಭ್ರಾಂತಿ ಎಂಬುದು ಸಾಬೀತಾಯಿತು.

ಪ್ರಸಿದ್ಧ ಕಾದಂಬರಿಕಾರ ಎಚ್.ಜಿ.ವೆಲ್ಸ್ 1898ರಲ್ಲಿ 'ದಿ ವಾರ್ ಆಫ್ ದಿ ವರ್ಲ್ಡ್ಸ್' ಎಂಬ ವೈಜ್ಞಾನಿಕ ಕಾದಂಬರಿ ರಚಿಸಿದರು. ಮನುಷ್ಯರು ಮತ್ತು ಆಕಾಶಕಾಯದ ವಾಸಿಗಳ ನಡುವಿನ ಸಂಘರ್ಷವೇ ಕಥಾನಕದ ತಿರುಳು. ಕಾದಂಬರಿ ಅದೆಷ್ಟು ಜನಪ್ರಿಯವಾಯಿತೆಂದರೆ, 1938ರಲ್ಲಿ ಕೊಲಂಬಿಯಾ ರೇಡಿಯೊ ಅದನ್ನು ಪ್ರಸಾರ ಮಾಡಿತು. ಕಲ್ಪನೆಯೇ ಬುದ್ಧಿಶೀಲತೆಯ ಬೀಜ ಎಂಬ ಆಲ್ಬರ್ಟ್ ಐನ್‌ಸ್ಟೀನರ ನುಡಿ ಗೊತ್ತೇ ಇದೆ. ಇದಕ್ಕೆ ಅವರ ಸಾಪೇಕ್ಷತಾ ವಾದವೇ ನಿದರ್ಶನ. ಪ್ರಾಚೀನ ಗ್ರಂಥಗಳಲ್ಲಿ 'ವಾಹನಗಳು ಹಾರಿದ್ದರಿಂದಲೇ' ವಿಮಾನದ ಆವಿಷ್ಕಾರವಾಯಿತು. ಚಂದ್ರನಲ್ಲಿ ಮಾನವ ಹೆಜ್ಜೆ ಒಂದು ಕಾಲದ ಕಲ್ಪಿತ ಕಥೆ ತಾನೆ?

ಸಾಹಿತಿ ರಾಜಶೇಖರ ಭೂಸನೂರಮಠ ಕನ್ನಡದಲ್ಲಿ ವೈಜ್ಞಾನಿಕ ವಾಙ್ಮಯಕ್ಕೆ ಬುನಾದಿ ಹಾಕಿದರು, ಹಲವು ಕೃತಿಗಳನ್ನು ರಚಿಸಿ ಮನೆಮಾತಾದರು. ಸಿನಿಮಾ, ನಾಟಕಗಳಿಗೆ 'ಹಾರುವ ತಟ್ಟೆಗಳು', 'ಮಂಗಳಗ್ರಹದ ನಾಲೆಗಳು', 'ಭೂಮ್ಯತೀತ ಜೀವಿಗಳ ಆಕ್ರಮಣ' ಎಂಬಂಥವು ಆಧುನಿಕ ಜಾನಪದದ ಸಾಂಸ್ಕೃತಿಕ ಕಚ್ಚಾವಸ್ತುಗಳು. ಜಾಗತಿಕ ಮಟ್ಟದಲ್ಲಿ ಅವು ಮನುಷ್ಯನ ಪಾಲಿಗೆ ಭಯದೊಂದಿಗೆ ಭರವಸೆಗಳನ್ನೂ ಹುಟ್ಟಿಸುತ್ತವೆ. ಅಂದಹಾಗೆ ಯು.ಎಫ್.ಒ.ಗೆ (ಅನ್‌ಐಡೆಂಟಿಫೈಯ್ಡ್ ಫ್ಲೈಯಿಂಗ್ ಆಬ್ಜೆಕ್ಟ್ಸ್) ಪರ್ಯಾಯ ಹೆಸರೇ ಹಾರುವ ತಟ್ಟೆ ಎನ್ನಿಸಿ, ಅದು ಎಲ್ಲೆಡೆ ರೋಚಕತೆಯ ಮೋಡಿ ಮಾಡಿದೆ.

ಮತ್ತದೇ ಇಸವಿ 1947. ಜುಲೈ 2ರಂದು ಅಮೆರಿಕದ ನ್ಯೂ ಮೆಕ್ಸಿಕೊ ಪ್ರಾಂತ್ಯದಲ್ಲಿ ವಿಲಕ್ಷಣ ವಸ್ತುವೊಂದು ನೆಲಕ್ಕಪ್ಪಳಿಸಿತ್ತು. ಸೇನೆ ಹರಸಾಹಸ ಪಟ್ಟು ಅದರ ಭಗ್ನಾವಶೇಷಗಳನ್ನು ಕಲೆಹಾಕಿತು. ಆಕ್ರಮಣಶೀಲ 'ಹಾರುವ ತಟ್ಟೆ'ಯನ್ನು ವಶಪಡಿಸಿಕೊಂಡಿದ್ದಾಗಿ ಅದು ಘೋಷಿಸಿಕೊಂಡಿತು. ಅಮೆರಿಕದ ಸ್ವಯಂಸೇವಾ ಸಂಘಟನೆ 'ವಿಶ್ವ ಗುರುತಿಸಲಾಗದ ಹಾರುವ ಕಾಯಗಳ ದಿನಾಚರಣೆ ಸಂಸ್ಥೆ' (ಡಬ್ಲ್ಯು-ಯುಎಫ್‌ಒಡಿಒ) ಪ್ರತಿವರ್ಷ ಜುಲೈ 2ನೇ ತೇದಿಯನ್ನು 'ವಿಶ್ವ ಅಪರಿಚಿತ ಹಾರುವ ಕಾಯಗಳ ದಿನ' ಎಂದು ತೀರ್ಮಾನಿಸಿತು. ಜನ ಆಗಸದಲ್ಲಿ ವಿಲಕ್ಷಣ ಕಾಯಗಳನ್ನು ಗುರುತಿಸಿದ ತಮ್ಮ ಅನುಭವಗಳನ್ನು ಅಪೂರ್ವ ದಿನಾದ ಅಂದು ಹಂಚಿಕೊಳ್ಳಬಹುದು, ಆಗಂತುಕರೊಂದಿಗೆ ಸೆಣಸಾಡಿದ್ದರೆ ಅದನ್ನೂ ನಿರೂಪಿಸಬಹುದು!

ಬ್ರಹ್ಮಾಂಡದಲ್ಲಿ ಭೂಮಿಯೊಂದೇ ವಾಸನೆಲೆಯಾಗಿ ಇರಬೇಕಿಲ್ಲ ಎನ್ನುವುದನ್ನು ಬಿಂಬಿಸುವುದು ಸಂಭ್ರಮದ ಉದ್ದೇಶ. ಚರ್ಚಿಸು, ಸಂಕೇತ ಭೇದಿಸು, ತರ್ಕಿಸು- ಈ ಅಂಶಗಳನ್ನು ಒಳಗೊಂಡ ಜಾಗೃತಿ ಮೂಡಿಸುವುದು ಸಡಗರದ ಗುರಿ. ಭಾರತದಲ್ಲೂ ಆಕಾಶದಲ್ಲಿ ಯು.ಎಫ್.ಒ. ಕಂಡ ಸಂಗತಿಗಳು ವರದಿಯಾಗುತ್ತಿರುತ್ತವೆ. ವಿಜ್ಞಾನಿಗಳು, ಖಗೋಳತಜ್ಞರು ಭೂಮ್ಯತೀತ ಮೇಧಾಶಕ್ತಿಯ ಸಂಭಾವ್ಯವನ್ನು ಒಪ್ಪುತ್ತಾರೆ, ಗ್ರಹಾಂತರ ಬುದ್ಧಿವಂತರು ಧರೆಯತ್ತ ಬರುವ ಸಂಭವವನ್ನು ನಿರಾಕರಿಸುತ್ತಾರೆ.

ಬ್ರಹ್ಮಾಂಡದ ಯಾವುದೇ ಮೂಲೆಯಲ್ಲಿ ಇರಬಹುದಾದ ಬುದ್ಧಿಜೀವಿಗಳೊಂದಿಗೆ ಸಂಪರ್ಕ ಸಾಧಿಸುವ ಯತ್ನ ನಡೆದೇ ಇದೆ. ವಿಶಾಲ ಬಯಲಿನಲ್ಲಿ ಸರ್ವಮಾನ್ಯ ವೃತ್ತ, ಚದರ, ಸಮಕೋನ ತ್ರಿಭುಜ ಮತ್ತು ಅವಕ್ಕೆ ಸಂಬಂಧಿಸಿದ ಲೆಕ್ಕಾಚಾರಗಳನ್ನು ಪ್ರದರ್ಶಿಸಿ ಹೊರ ಆಕಾಶಕಾಯಗಳಿಗೆ ರವಾನಿಸಲಾಗಿದೆ. ಏನಿದ್ದರೂ ಬೆಳಕೇ ತಾನೆ ಟಪಾಲಿನವ! ಅವನಿಗಿಂತ ವೇಗವಾಗಿ ಧಾವಿಸುವವ ಸದ್ಯಕ್ಕಂತೂ ಮತ್ತ್ಯಾರೂ ಇಲ್ಲ. ಅನ್ಯಲೋಕಗಳೊಂದಿಗೆ ಸಂಪರ್ಕಿಸಲು ಗಣಿತವೇ ಅಲ್ಲವೆ ಏಕೈಕ ಮಾಧ್ಯಮ? ಜವಾಬು ಬರುವುದೇನಿದ್ದರೂ ಯುಗಗಳ ನಂತರವೇ ಎಂಬ ಮಾತು ಬೇರೆ.

ಅಂತರಿಕ್ಷ ಸಂಶೋಧನಾ ಸಂಸ್ಥೆ ನಾಸಾ 'ನಾವಿನ್ನೂ ಯಾವುದೇ ಆಕಾಶಕಾಯದಲ್ಲಿ ಭೂಮಿಯಂತೆ ಜೀವ ಅಂಕುರಿಸಿರುವುದನ್ನು ಗಮನಿಸಿಲ್ಲ' ಎಂದಿದೆ. 'ಬ್ರಹ್ಮಾಂಡ ಅನಂತ, ಎಲ್ಲೂ ಜೀವಿಗಳಿಲ್ಲ ಎಂದರೆ ಅದು ವ್ಯರ್ಥವಲ್ಲವೇ?!' ಎನ್ನುವುದು ವಿಜ್ಞಾನ ಬರಹಗಾರ ಕಾರ್ಲ್ ಸಗಾನ್ ಅವರ ಪ್ರಬುದ್ಧ ಪರಿತಾಪವಾಗಿತ್ತು! ಹಾಗೊಂದು ವೇಳೆ ಅನ್ಯಲೋಕದ ಜೀವಿಗಳು ಹಾರುವ ತಟ್ಟೆಯಿಂದ ಧರೆಗೆ ಬಂದು ವಕ್ಕರಿಸಿದ್ದೇ ಆದರೆ ಆ ದಿನ ಭೂಮಿಯ ಪಾಲಿಗೆ ಅತೀವ ದುರ್ದಿನ ಎನ್ನುವ ಉದ್ಗಾರವೂ ಇದೆ.

ಒಡನಾಟ, ಜ್ಞಾನಕ್ಕೆ ಎಲ್ಲಿಯ ದುರ್ದೆಸೆ? ಮುಚ್ಚಿದ ಕಣ್ಣು, ತೆರೆದ ಮನಸ್ಸಿಗೆ ಅಸಂಖ್ಯ ಹಾರುವ ತಟ್ಟೆಗಳು ಗೋಚರಿಸುತ್ತವೆ!

### ವಾಚಕರ ವಾಣಿ

## ದುರ್ವರ್ತನೆಗೆ ಕಡಿವಾಣ ಹಾಕಿ

ಬೆಂಗಳೂರಿನ ವೈಯಾಲಿಕಾವಲ್ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ಅಸಭ್ಯವಾಗಿ ವರ್ತಿಸಿದ್ದ ಮೂವರು ಲಿಂಗತ್ವ ಅಲ್ಪಸಂಖ್ಯಾತರನ್ನು ಪೊಲೀಸರು ಬಂಧಿಸಿರುವುದಾಗಿ ವರದಿಯಾಗಿದೆ. ಗೃಹಪ್ರವೇಶ ಸಮಾರಂಭ ನಡೆಯುತ್ತಿದ್ದ ಜಾಗಕ್ಕೆ ಈ ಮೂವರೂ ಬಂದು ಹಣಕ್ಕೆ ಬೇಡಿಕೆ ಇಟ್ಟಾಗ, ಮಾಲೀಕರು ನೀಡಿದ ₹ 200 ತಿರಸ್ಕರಿಸಿ ₹ 5,000ಕ್ಕೆ ಪಟ್ಟು ಹಿಡಿದಿದ್ದರಂತೆ. ಇಂತಹ ಅನುಭವ ನನಗೂ ಆಗಿದೆ. ಇಂತಹವರು ಗೃಹಪ್ರವೇಶ ಮಾತ್ರವಲ್ಲದೆ ಮದುವೆ, ಮುಂಜಿಯಂತಹ ಸಮಾರಂಭಗಳಿಗೂ ಬರುತ್ತಾರೆ. ಅಯ್ಯೋ ಎನ್ನಿಸಿ ಕೈಲಾದ ಹಣ ನೀಡಿದರೆ ಒಪ್ಪುವುದೇ ಇಲ್ಲ. ಸಹಸ್ರಾರು ರೂಪಾಯಿಗಳಿಗೆ ಮಾತ್ರವಲ್ಲದೆ ಒಳ್ಳೆಯ ಸೀರೆಗಳಿಗೂ ಬೇಡಿಕೆ ಇಡುತ್ತಾರೆ. ಹಾಗೂ ಹೀಗೂ ಇವರನ್ನು ಸಾಗಹಾಕಿ ಉಸ್ಸಪ್ಪಾ ಎನ್ನುವಷ್ಟರಲ್ಲಿ, ಹೋದವರೇ ಮತ್ತೊಂದು ತಂಡವನ್ನು ಕಳಿಸುತ್ತಾರೆ. ಆಯೋಜಕರ ಪಾಡು ಹೇಳತೀರದಂತಾಗುತ್ತದೆ.

ಎಷ್ಟೋ ಮಂದಿ, ಪೊಲೀಸರಿಗೆ ದೂರು ಕೊಡಲು ಸಹ ಹೋಗದೆ ಸುಮ್ಮನಾಗುತ್ತಾರೆ. ಆದರೂ, ಇಂತಹ ದುರ್ವರ್ತನೆಗೆ ಕಡಿವಾಣ ಹಾಕಬೇಕಿದೆ. ಪೊಲೀಸ್ ಇಲಾಖೆ ಕೂಡಲೇ ಇಂತಹವರ ಮೇಲೆ ಕ್ರಮ ಕೈಗೊಳ್ಳಲಿ. ಜೊತೆಗೆ ಈ ಬಗೆಯ ಪ್ರಕರಣಗಳು ನಡೆದಾಗ ಫೋಟೊ ತೆಗೆದು ಸಚಿತ್ರ ಸಮೇತ ದೂರು ಕೊಡುವಂತೆ ಪ್ರೇರೇಪಿಸಲಿ.

**ಪತ್ತಂಗಿ ಎಸ್. ಮುರಳಿ,** ಬೆಂಗಳೂರು

## ದಂತ ವೈದ್ಯರ ನೇಮಕವಾಗಲಿ

ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳಲ್ಲಿ ದಂತವೈದ್ಯರ ಸೇವೆ ಅನೇಕ ವರ್ಷಗಳಿಂದ ಸರಿಯಾಗಿ ದೊರೆಯುತ್ತಿಲ್ಲ. ಈ ಕೊರತೆಯನ್ನು ತುಂಬಲು ಸರ್ಕಾರ ಕ್ರಮ ಜರುಗಿಸಬೇಕು. ಬಹಳಷ್ಟು ಯುವ ದಂತವೈದ್ಯರು ನಿರುದ್ಯೋಗಿಗಳಾಗಿದ್ದಾರೆ. ಅವರ ಸೇವೆಯನ್ನು ಇಲ್ಲಿ ಬಳಸಿಕೊಳ್ಳಬಹುದು.

**ಎಂ.ಆಂಜನೇಯ,** ಹಾವೇರಿ

## ಕಡಿಮೆ ತ್ಯಾಜ್ಯ: ಮಾರ್ಗ ಹಲವು

ಖಾಲಿ ಜಾಗ ಕಂಡಲ್ಲಿ ಸುಶಿಕ್ಷಿತರೇ ಅಲ್ಲಿ ಕಸ ಸುರಿಯುತ್ತಿದ್ದಾರೆ ಎಂದು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಅವರು ಆತಂಕ, ಅಸಮಾಧಾನ ವ್ಯಕ್ತಪಡಿಸಿರುವುದು ಪ್ರಕಟವಾಗಿದೆ (ಕಿಡಿನುಡಿ, ಜುಲೈ 1). ನಾವು ಅಗಾಧ ಪ್ರಮಾಣದಲ್ಲಿ ನಿತ್ಯ ಕಸವನ್ನು ಸೃಷ್ಟಿಸುತ್ತಿದ್ದೇವೆ ಅನ್ನುವ ವಾಸ್ತವವನ್ನು ಎಲ್ಲರೂ ಮನಗಾಣಬೇಕು. ಈ ಕಸದ ಬಹುಪಾಲು ಭಾಗ ನೈಸರ್ಗಿಕವಾಗಿ ಜೀರ್ಣವಾಗದ, ವಿಘಟನೆಗೊಳ್ಳದ ಪ್ಲಾಸ್ಟಿಕ್ ಮತ್ತು ಸಂಬಂಧಿತ ಪದಾರ್ಥಗಳೇ ಆಗಿರುತ್ತದೆ. ಇಂತಹ ಕಸವನ್ನು ಸಮರ್ಪಕವಾದ ರೀತಿಯಲ್ಲಿ ವಿಲೇವಾರಿ ಮಾಡುವ ವ್ಯವಸ್ಥೆ ಇಲ್ಲವೇ ಇಲ್ಲ ಎಂದು ಹೇಳಬಹುದು. ನಗರಾಡಳಿತ ಕಸವನ್ನು ಒಂದಷ್ಟು ಸಂಗ್ರಹಿಸುವ ಮಾರ್ಗವನ್ನು ಅನುಸರಿಸುತ್ತಿದೆ. ಆದರೆ ಮಿತಿಮೀರಿದ ಪ್ರಮಾಣದಲ್ಲಿ ಸಾರ್ವಜನಿಕರು ಕಸವನ್ನು ಉತ್ಪಾದಿಸುತ್ತಿದ್ದು, ಉತ್ಪಾದನೆ ಹಾಗೂ ವಿಲೇವಾರಿ ಮಧ್ಯೆ ಅಗಾಧ ಅಸಮತೋಲನ ಇದೆ. ಕಸವನ್ನು ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ಸುರಿಯಲಾಗುತ್ತಿದೆ. ಎಲ್ಲೆ ಮೀರಿದ ನಗರೀಕರಣ, ಅಸಮರ್ಪಕ ನಿರ್ವಹಣೆ, ನಾಗರಿಕ ಪ್ರಜ್ಞೆಯ ಅಭಾವ, ವ್ಯವಸ್ಥೆಯ ಮಿತಿಗಳೆಲ್ಲದರ ಪರಿಣಾಮವಿದು.

ಕಸದ ಪ್ರಮಾಣವನ್ನು ಕಡಿಮೆ ಮಾಡಲು ಅನುಸರಿಸಬಹುದಾದ ಹಲವಾರು ಮಾರ್ಗಗಳಿವೆ. ಪ್ಲಾಸ್ಟಿಕ್ ಚೀಲಗಳ ಬದಲು ಬಟ್ಟೆ ಚೀಲವನ್ನು ಬಳಸುವುದು, ಪ್ಲಾಸ್ಟಿಕ್ ಬಾಟಲಿಗಳ ಪುನರ್ಬಳಕೆ, ತಿಂಡಿ ತಿನಿಸು ಪಾರ್ಸಲ್ ತರಲು ಮನೆಯಿಂದ ಡಬ್ಬಿಗಳನ್ನು ಕೊಂಡೊಯ್ಯುವುದು ಸೂಕ್ತ. ಇವೆಲ್ಲದರ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಾದ ಕಾರ್ಯ ತುರ್ತಾಗಿ ಆಗಬೇಕಾಗಿದೆ.

**ಶಿವರಾಮ್ ಎಚ್.ಎಸ್.,** ಮೈಸೂರು

## ಶಿಕ್ಷಕನಿಗೆ ಇದೆಂಥ ಅಪಮಾನ?

ಮಾಗಡಿ ತಾಲ್ಲೂಕಿನ ಹೇಮಾಪುರ ಗ್ರಾಮದೇವತೆ ಉತ್ಸವದಲ್ಲಿ ದೇವರಿಗಾಗಿ ತರುತ್ತಿದ್ದ ಆರತಿ ಮುಟ್ಟಿದ್ದ ಪರಿಶಿಷ್ಟ ಸಮುದಾಯದ ಶಿಕ್ಷಕರೊಬ್ಬರನ್ನು ಒಕ್ಕಲಿಗ ಸಮುದಾಯದವರು ಮನಬಂದಂತೆ ಥಳಿಸಿ, ಕೊಲೆ ಬೆದರಿಕೆ ಒಡ್ಡಿರುವುದು ವರದಿಯಾಗಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಇನ್ನೂ ಜಾತೀಯತೆ ಇಷ್ಟು ಆಳವಾಗಿ ಬೇರುಬಿಟ್ಟಿರುವುದು ದುರಂತ. ಅದರಲ್ಲೂ ಮಕ್ಕಳ ಭವಿಷ್ಯವನ್ನು ರೂಪಿಸಬೇಕಾದ ಶಿಕ್ಷಕನಿಗೇ ಈ ರೀತಿಯ ಶಿಕ್ಷೆ ನೀಡಿರುವುದು ನೋವನ್ನುಂಟು ಮಾಡುತ್ತದೆ.

ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವಾಗ ಆ ಶಿಕ್ಷಕ ಜಾತಿ ಆಧಾರದ ಮೇಲೆ ಪಾಠವನ್ನು ಮಾಡುತ್ತಾರೆಯೇ? ದೇಶದಲ್ಲಿ ಎಲ್ಲಾ ಜಾತಿ–ಮತ, ಧರ್ಮದವರೂ ಸಮಾನರು ಎಂದು ಬೋಧಿಸುವ ಶಿಕ್ಷಕನಿಗೇ ಈ ರೀತಿಯ ಅವಮಾನವಾದರೆ ಇನ್ನು ಬೇರೆಯವರ ಗತಿ ಏನು? ಇನ್ನೂ ಎಷ್ಟು ವರ್ಷಗಳು ಬೇಕು ಸಮಾನತೆಯನ್ನು ಸಾರಲು? ನಾವೆಲ್ಲರೂ ಒಂದೇ ಜಾತಿ ಒಂದೇ ಮತ ಒಂದೇ ಕುಲ, ನಾವು ಮನುಜರು ಎಂಬುದನ್ನು ಅರಿಯಲು?

**ಮಲ್ಲತಹಳ್ಳಿ ಡಾ. ಎಚ್. ತುಕಾರಾಂ,** ಬೆಂಗಳೂರು

## ನೆರವಿಗೆ ಬಾರದ ಜನ: ಕಾನೂನಿನ ಅರಿವು ಮೂಡಲಿ

ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ಬಸ್ಸೊಂದು ಅಪಘಾತಕ್ಕೀಡಾಗಿ ಅದರಲ್ಲಿದ್ದ 33 ಜನರಲ್ಲಿ 25 ಜನ ಸಜೀವ ದಹನವಾಗಿರುವ ಸುದ್ದಿ ಅಪಾರ ನೋವು ತಂದಿತು. ಆದರೆ ಅದಕ್ಕಿಂತ ಹೆಚ್ಚಿಗೆ ಮನಸ್ಸನ್ನು ಕಾಡಿದ್ದು, ಬದುಕುಳಿದ 8 ಜನರು ರಸ್ತೆಯಲ್ಲಿ ಹೊರಟಿದ್ದ ವಾಹನಗಳತ್ತ ಸಹಾಯ ಕೇಳಿ ಎಷ್ಟು ಅಂಗಲಾಚಿದರೂ ಕಾಯ್ದೆ ಕಾನೂನಿಗೆ ಹೆದರಿ ಯಾರೊಬ್ಬರೂ ಸಹಾಯಕ್ಕೆ ಬರಲಿಲ್ಲ ಎನ್ನುವ ಸಂಗತಿ.

ಸುಪ್ರೀಂ ಕೋರ್ಟ್ ತನ್ನ ವಿಶೇಷ ಅಧಿಕಾರವನ್ನು ಬಳಸಿಕೊಂಡು 'ಗುಡ್ ಸಮ್ಯಾರಿಟನ್' (ರಸ್ತೆ ಅಪಘಾತದ ಸಂತ್ರಸ್ತರಿಗೆ ನೆರವು ನೀಡುವ ಉಪಕಾರಿಗಳಿಗೆ ನೀಡಬೇಕಾದ ಕಾನೂನು ರಕ್ಷಣೆಗೆ ಇದು ಸಂಬಂಧಪಡುತ್ತದೆ) ಎಂಬ ಕಾನೂನನ್ನು ಜಾರಿಗೆ ತಂದಿದೆ. ಆದರೆ ಈ ಕಾನೂನಿನ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಿ, ರಸ್ತೆ ಅಪಘಾತಕ್ಕೆ ಈಡಾದವರ ಜೀವ ರಕ್ಷಿಸಬೇಕಾಗಿದೆ.

**ಪ್ರಭು ಬ. ನೀಲಿ.,** ಗುಲಗಾಲ ಜಂಬಗಿ, ಮುಧೋಳ

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕದ ವಿಧಾನಮಂಡಲದಲ್ಲಿ ವಿದ್ಯುನ್ಮಾನ ಮಾಧ್ಯಮಗಳ ಕ್ಯಾಮೆರಾಗಳಿಗೆ ಹಿಂದಿನ ಬಿಜೆಪಿ ಸರ್ಕಾರ ನಿಷೇಧ ಹೇರಿತ್ತು. ನೂತನ ಸರ್ಕಾರ ಬಂದಾಗ, ಈ ನಿಷೇಧವನ್ನು ತೆರವು ಮಾಡಲಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ನಿಷೇಧವನ್ನೇ ಮುಂದುವರಿಸಲಾಗುತ್ತದೆ ಎಂದು ಸ್ಪೀಕರ್ ಹೇಳಿದ್ದಾರೆ. ಸರ್ಕಾರವೂ ಈ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸಿಲ್ಲ

## ಸಂಸತ್ತು, ವಿಧಾನಮಂಡಲಗಳಲ್ಲಿ ವರದಿಗಾರಿಕೆಗೆ ತಡೆ

# ಮಾಧ್ಯಮ ನಿರ್ಬಂಧಕ್ಕೆ ಸರ್ವರೂ ಮುಂದು...

ಪ್ರಜಾವಾಣಿ ವಾರ್ತೆ

ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳ ವಿಧಾನಸಭೆ ಮತ್ತು ವಿಧಾನಮಂಡಲದ ಕಲಾಪಗಳಲ್ಲಿ ವಿದ್ಯುನ್ಮಾನ ಮಾಧ್ಯಮಗಳಿಗೆ ಪ್ರವೇಶವನ್ನು ನಿಷೇಧಿಸಲಾಗಿದೆ. ಕೆಲವು ರಾಜ್ಯಗಳಲ್ಲಿ ಕೋವಿಡ್ ಅವಧಿಯಲ್ಲಿ ಪತ್ರಕರ್ತರಿಗೆ ವಿಧಾನಭವನ ಪ್ರವೇಶವನ್ನು, ವಿಧಾನಭವನ ಆವರಣದಲ್ಲಿನ ಓಡಾಟವನ್ನು ನಿಷೇಧಿಸಲಾಗಿತ್ತು. ಆದರೆ, ಕೋವಿಡ್ ತೀವ್ರತೆ ತಗ್ಗಿದ ನಂತರವೂ ಈ ನಿಯಮವನ್ನು ಕೆಲವು ರಾಜ್ಯಗಳಲ್ಲಿ ಮುಂದುವರಿಸಲಾಗಿದೆ.

ವಿದ್ಯುನ್ಮಾನ ಮಾಧ್ಯಮಗಳನ್ನು ನಿಷೇಧ ಮಾಡುವುದು ಒಂದು ಕ್ರಮವಾದರೆ, ಮತ್ತೆ ಕೆಲವು ರಾಜ್ಯಗಳಲ್ಲಿ ಮಾಧ್ಯಮದವರಿಗೆ ಕೆಲವು ನಿರ್ಬಂಧಗಳನ್ನು ಹೇರಲಾಗಿದೆ. ವಿಧಾನಭವನದ ಆವರಣದಲ್ಲಿ ಪತ್ರಕರ್ತರ ಓಡಾಟಕ್ಕೆ ಕೆಲವು ಕಠಿಣ ನಿರ್ಬಂಧಗಳನ್ನು ಕೆಲವು ರಾಜ್ಯಗಳಲ್ಲಿ ಹಾಕಲಾಗಿದೆ. ಪತ್ರಕರ್ತರಿಗೆ ಗುರುತಿನ ಚೀಟಿಗಳು ಇದ್ದರೂ ಹಲವು ನಿರ್ಬಂಧಗಳನ್ನು ಹೇರುವ ಮೂಲಕ ಅವರ ಓಡಾಟವನ್ನು, ವರದಿಗಾರಿಕೆಗಾಗಿ ಮಾಹಿತಿ ಕಲೆ ಹಾಕುವುದನ್ನು ನಿಯಂತ್ರಿಸಲಾಗುತ್ತಿದೆ.

ಹೀಗೆ ಪತ್ರಕರ್ತರಿಗಾಗಿಯೇ ಹಲವು ನಿಯಮಗಳನ್ನು ರೂಪಿಸುವ ಮೂಲಕ ಸುದ್ದಿಗಳ ಮೇಲೆ ನಿಯಂತ್ರಣ ಸಾಧಿಸುವ ಸರ್ಕಾರದ ಕ್ರಮದ ಕುರಿತು ಪತ್ರಕರ್ತರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರತಿಭಟನೆಗಳನ್ನು ಮಾಡಿದ್ದಾರೆ. ಅಂತಹ ನಿಯಮಗಳು ಹಾಗೆಯೇ ಇವೆ. ಈ ಎಲ್ಲ ಬೆಳವಣಿಗೆಗಳಲ್ಲಿ ಗಮನಿಸಬೇಕಾದ ಒಂದಂಶವಿದೆ. ಪತ್ರಕರ್ತರ ಮೇಲೆ ನಿಯಂತ್ರಣ ಹೇರುವ ಸಂಬಂಧ ರಾಜಕೀಯ ಪಕ್ಷಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ! ಪಕ್ಷ ಭೇದ ಮರೆತು ಈ ಸಂಬಂಧ ಎಲ್ಲ ರಾಜಕೀಯ ಪಕ್ಷಗಳು ಒಗ್ಗಟ್ಟಾಗಿವೆ. ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಸರ್ಕಾರದ ಈ ನಡೆಯನ್ನು ವಿರೋಧಿಸಿದರೂ, ಅಧಿಕಾರಕ್ಕೆ ಬಂದಾಗ ಎಲ್ಲಾ ಪಕ್ಷಗಳೂ ಇಂತಹ ಕ್ರಮಗಳನ್ನು ಮುಂದುವರಿಸಿವೆ.

ಲೋಕಸಭೆ, ರಾಜ್ಯಸಭೆಯೂ ಮತ್ತು ಹಲವು ರಾಜ್ಯಗಳಲ್ಲಿ ಕಲಾಪಗಳನ್ನು ವೆಬ್‌ಕಾಸ್ಟ್ ಮಾಡುವ ವ್ಯವಸ್ಥೆ ಇದೆ. ಹೀಗೆ ವೆಬ್‌ಕಾಸ್ಟ್ ಮಾಡಿದ ವಿಡಿಯೊಗಳನ್ನು ವಾಹಿನಿಗಳು ಪಡೆದುಕೊಳ್ಳಬೇಕಾಗುತ್ತದೆ. ಸಂಸತ್ತಿಗೆ ಅದರದ್ದೇ ವಾಹಿನಿಯೂ ಇದೆ. ಹೀಗೆ ತನ್ನದೇ ವಾಹಿನಿಯ ಮೂಲಕ ಅಥವಾ ವೆಬ್‌ಕಾಸ್ಟ್ ಮಾಡುವ ಮೂಲಕ ತನಗೆ ಏನು ಬೇಕೊ ಅದನ್ನು ಮಾತ್ರ ಜನರಿಗೆ ನೀಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ವಿರೋಧ ಪಕ್ಷಗಳ ಮಾತುಗಳನ್ನು, ಪ್ರತಿಭಟನೆಗಳನ್ನು ತೋರಿಸದೆ ಸರ್ಕಾರದ ಪರವಾದುದನ್ನೇ ತೋರಿಸಲಾಗುತ್ತದೆ ಎನ್ನುವ ಗಂಭೀರ ಆರೋಪವೂ ಇದೆ. ಕರ್ನಾಟಕ, ದೆಹಲಿ, ಬಿಹಾರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ವೆಬ್‌ಕಾಸ್ಟ್ ವ್ಯವಸ್ಥೆ ಜಾರಿಯಲ್ಲಿದೆ.

ನಮ್ಮಿಂದ ಆಯ್ಕೆಯಾದ ಪ್ರತಿನಿಧಿಗಳು ನಮ್ಮ ಕುರಿತು, ನಮ್ಮ ಕಷ್ಟ-ಸುಖಗಳ ಕುರಿತು ಏನು ಮಾತನಾಡುತ್ತಾರೆ, ಎಷ್ಟು ಮಾತನಾಡುತ್ತಿದ್ದಾರೆ ಎಂದು ತಿಳಿಯುವುದು ಪ್ರತಿಯೊಬ್ಬ ನಾಗರಿಕನ ಹಕ್ಕು. ನೇರಪ್ರಸಾರ ನಿರ್ಬಂಧಿಸುವ ಮೂಲಕ ನಾಗರಿಕನ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಈ ಮೂಲಕ ಪತ್ರಿಕಾ ಸ್ವಾತಂತ್ರ್ಯವನ್ನು ದಮನಿಸಲಾಗುತ್ತಿದೆ ಎನ್ನುವುದು ಒಂದು ವಾದ. ವಿದ್ಯುನ್ಮಾನ ಮಾಧ್ಯಮದ ಅತಿಯಾದ 'ಪತ್ರಿಕೋದ್ಯಮ' ಚಟುವಟಿಕೆಗಳ ಕಾರಣದಿಂದ ರಾಜಕಾರಣಿಗಳು ಸುದ್ದಿ ವಾಹಿನಿಗಳ ವರದಿಗಾರರನ್ನು ದೂರ ಇಡಲು ಬಯಸುತ್ತಾರೆ ಎನ್ನುವ ವಾದವೂ ಇದೆ.

**ಸ್ಪೀಕರ್ ವಿವೇಚನಾಧಿಕಾರ:** ವಿಧಾನಮಂಡಲದೊಳಗೆ ಸ್ಪೀಕರ್ ಅವರದ್ದೇ ಪರಮಾಧಿಕಾರ. ಇಲ್ಲಿನ ವಿದ್ಯಮಾನಗಳು ನ್ಯಾಯಾಲಯಗಳ ಕಾರ್ಯವ್ಯಾಪ್ತಿಗೂ ಬರುವುದಿಲ್ಲ. ಸುಗಮ ಕಲಾಪ ನಡೆಯಲು ಸ್ಪೀಕರ್ ಯಾವುದೇ ನಿರ್ಧಾರವನ್ನೂ ತೆಗೆದುಕೊಳ್ಳಬಹುದು. ಕಲಾಪ ನಡೆಯುವ ವೇಳೆ ವಿಧಾನಸಭೆಯಲ್ಲಿ ಯಾರು ಇರಬೇಕು, ಯಾರು ಇರಬಾರದು ಎಂಬುದರ ಕುರಿತೂ ಸ್ಪೀಕರ್ ಅವರ ತೀರ್ಮಾನವೇ ಅಂತಿಮ. ಹೀಗೆ ವಿದ್ಯುನ್ಮಾನ ಮಾಧ್ಯಮದ ಪ್ರವೇಶ, ವಿಧಾನಭವನಗಳ ಆವರಣಗಳಲ್ಲಿ ಪತ್ರಕರ್ತರಿಗೆ ಹೇರುವ ನಿಷೇಧ, ನಿಯಂತ್ರಣಗಳೆಲ್ಲವೂ ಸ್ಪೀಕರ್ ಅವರ ತೀರ್ಮಾನವೇ ಆಗಿರುತ್ತದೆ. ತಮ್ಮ ವಿವೇಚನಾಧಿಕಾರವನ್ನು ಬಳಸಿ ಸ್ಪೀಕರ್ ಅವರು ಇಂಥ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು.

## ಸಂಸತ್ತು ಪ್ರವೇಶಕ್ಕೆ ಲಾಟರಿ ಪದ್ಧತಿ!

ಕೋವಿಡ್ ಕಾರಣ ನೀಡಿ 2020ರಲ್ಲಿ ಸಂಸತ್ತು ಪ್ರವೇಶಕ್ಕೆ ಪತ್ರಕರ್ತರಿಗೆ ನಿಷೇಧ ಹೇರಲಾಯಿತು. 2021ರಲ್ಲಿ ನಡೆದ ಚಳಿಗಾಲದ ಅಧಿವೇಶನದ ವೇಳೆಗೆ ಸಂಸತ್ತು ಪ್ರವೇಶಕ್ಕೆ ಲಾಟರಿ ಪದ್ಧತಿಯನ್ನು ಸಂಸತ್ತಿನಲ್ಲಿ ಅಳವಡಿಸಲಾಗಿದೆ. ಈ ಪದ್ಧತಿಯು ಇಂದಿಗೂ ಜಾರಿಯಲ್ಲಿದೆ. ಈ ಪದ್ಧತಿ ಜಾರಿಯಾದಾಗಿನಿಂದಲೂ ಪ್ರೆಸ್ ಕ್ಲಬ್ ಆಫ್ ಇಂಡಿಯಾ, ಭಾರತೀಯ ಸಂಪಾದಕರ ಕೂಟ ಸೇರಿದಂತೆ ಹಲವು ಉನ್ನತ ಸಂಸ್ಥೆಗಳು ಲೋಕಸಭಾ ಸ್ಪೀಕರ್ ಅವರಿಗೆ ಮನವಿ ಪತ್ರ ಬರೆಯುತ್ತಲೇ ಇದ್ದಾರೆ. ಈ ಸಂಬಂಧ ಪತ್ರಕರ್ತರು ಪ್ರತಿಭಟನೆಯನ್ನೂ ಮಾಡಿದ್ದಾರೆ. ವಿರೋಧ ಪಕ್ಷಗಳು ಕೂಡ ಪತ್ರಕರ್ತರಿಗೆ ಹಾಕಿರುವ ನಿರ್ಬಂಧಗಳನ್ನು ತೆಗೆದು ಹಾಕುವಂತೆ ಒತ್ತಾಯಿಸುತ್ತಲೇ ಬಂದಿವೆ. ಅಂತಾದರೂ, ಈ ಪದ್ಧತಿಯನ್ನು ಇದುವರೆಗೂ ಮುಂದುವರಿಸಲಾಗಿದೆ.

ನೂತನ ಸಂಸತ್ತು ಭವನದ ಉದ್ಘಾಟನೆಯೂ ಮೂರು ದಿನ ಮೊದಲು ಅಂದರೆ, 2023ರ ಮೇ 25ರಂದು ಪ್ರೆಸ್ ಕ್ಲಬ್ ಆಫ್ ಇಂಡಿಯಾವು ಸಂಸತ್ತು ಪ್ರವೇಶಕ್ಕೆ ಪತ್ರಕರ್ತರಿಗೆ ಇರುವ ನಿರ್ಬಂಧ ತೆಗೆದು ಹಾಕುವಂತೆ ಕೋರಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಹಲವು ಗಂಭೀರ ವಿಷಯಗಳನ್ನು ಪ್ರಸ್ತಾಪಿಸಿ ಪತ್ರ ಬರೆದಿದೆ. ಪತ್ರದ ಕೆಲವು ಅಂಶಗಳು ಇಂತಿವೆ

- ಜಗತ್ತಿನಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ಎನಿಸಿರುವ ದೇಶದಲ್ಲಿ, ಜನರಿಗೆ ಸುಲಭವಾಗಿ ದೊರಕಬೇಕಿರುವ ಸುದ್ದಿಗಳು ತಲುಪದಂತೆ ಮಾಡಿರುವ ಈ ನಿಬಂಧನೆಗೆ ಯಾವುದೇ ಗಟ್ಟಿಯಾದ ಕಾರಣವಿಲ್ಲ. ಮಾಧ್ಯಮವನ್ನು ನಿಯಂತ್ರಿಸುವ, ಮಾಧ್ಯಮ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಕಾರ್ಯಸೂಚಿಗಳ ಭಾಗವಾಗಿ ಈ ನಿರ್ಬಂಧಗಳನ್ನು ಹೇರಲಾಗಿದೆ ಎಂದು ನಾವು ತೀವ್ರವಾಗಿ ಭಾವಿಸುತ್ತೇವೆ
- ವಿಶ್ವಸಂಸ್ಥೆಯೇ ಕೋವಿಡ್ ಅನ್ನು 'ಜಾಗತಿಕ ಆರೋಗ್ಯ ತುರ್ತು' ಅಲ್ಲ ಎಂದಿರುವಾಗ, ಕೋವಿಡ್ ಸಂಬಂಧ ಇರುವ ಎಲ್ಲ ನಿರ್ಬಂಧಗಳನ್ನು ಸಡಿಲ ಮಾಡಿರುವಾಗ ಪತ್ರಕರ್ತರಿಗೆ ಮಾತ್ರವೇ ಕೋವಿಡ್ ಕಾರಣ ನೀಡಿ ಸಂಸತ್ತು ಪ್ರವೇಶವನ್ನು ನಿರ್ಬಂಧಿಸುವುದು ವಿಷಾದನೀಯ
- ಲಾಟರಿ ಪದ್ಧತಿ ಮೂಲಕ ಪತ್ರಕರ್ತರಿಗೆ ಸಂಸತ್ತು ಪ್ರವೇಶ ನೀಡಲಾಗುತ್ತಿದೆ. ಈ ರೀತಿ ಕೆಲವೇ ಪತ್ರಕರ್ತರನ್ನು ಆಯ್ಕೆ ಮಾಡಿ ಪ್ರವೇಶ ನೀಡುವುದು ನಿರಂಕುಶ ಮತ್ತು ಅನ್ಯಾಯ. ಜೊತೆಗೆ ಇದು ಸುದ್ದಿಯ ಸಮಾನ ಲಭ್ಯತೆಯ ತತ್ವವನ್ನು ನಿರಾಕರಿಸುತ್ತದೆ
- ಕಲಾಪಗಳನ್ನು ವರದಿ ಮಾಡುವ ಮಾಧ್ಯಮದ ಹಕ್ಕನ್ನು ಈ ನಿರ್ಬಂಧವು ಕಸಿದುಕೊಳ್ಳುವುದಲ್ಲದೆ, ಸರ್ಕಾರ, ಮಾಧ್ಯಮ ಹಾಗೂ ಸಂಸದರ ಮಧ್ಯದ ಸಂಪರ್ಕವನ್ನು ಕಡಿದು ಹಾಕುತ್ತದೆ. ಇದು ಯೋಜನೆಯ ಪ್ರಜಾಸತ್ತಾತ್ಮಕ ವಿನಿಮಯಕ್ಕೆ, ಸಾರ್ವಜನಿಕ ಸಂವಾದಕ್ಕೆ ಧಕ್ಕೆ ಉಂಟುಮಾಡುತ್ತದೆ. ಇದರಿಂದಾಗಿ ಸಂಸದೀಯ ವ್ಯವಸ್ಥೆಯ ಪಾರದರ್ಶಕತೆಗೆ ತೆರೆ ಬೀಳುತ್ತದಲ್ಲದೆ, ಹೊಣೆಗಾರಿಕೆಯಿಂದ ನುಣುಚಿಕೊಂಡಂತಾಗುತ್ತದೆ

## ಎಲ್ಲೆಲ್ಲಿ ನಿರ್ಬಂಧ...

**ಕೇರಳ:** ಕೇರಳದಲ್ಲಿ ವಿದ್ಯುನ್ಮಾನ ಮಾಧ್ಯಮಗಳು ಕಲಾಪವನ್ನು ಚಿತ್ರೀಕರಿಸಲು ನಿಯಂತ್ರಣ ಹೇರಲಾಗಿದೆ. ಈ ಬಗ್ಗೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಕಡೇಪಕ್ಷ ಪ್ರಶ್ನೋತ್ತರ ವೇಳೆಯಲ್ಲಾದರೂ ವಿದ್ಯುನ್ಮಾನ ಮಾಧ್ಯಮಕ್ಕೆ ಕಲಾಪ ಚಿತ್ರೀಕರಣಕ್ಕೆ ಅನುಮತಿ ನೀಡಬೇಕು ಎಂದು ಒತ್ತಾಯಪಡಿಸಿವೆ

**ತೆಲಂಗಾಣ:** ವಿಧಾನಭವನದ ಆವರಣದಲ್ಲಿ ಪತ್ರಕರ್ತರ ಓಡಾಟಕ್ಕೆ ಕಠಿಣ ನಿರ್ಬಂಧವಿದೆ. ವಿಧಾನಸಭಾ ಕಾರ್ಯಾಲಯಗಳಿಗೆ ಮಾಧ್ಯಮದವರಿಗೆ ಪ್ರವೇಶವನ್ನು ನಿರಾಕರಿಸಲಾಗಿದೆ. ಸಚಿವರ ಸಾರ್ವಜನಿಕ ಸಂಪರ್ಕ ಅಧಿಕಾರಿಯ ಮೂಲಕ ಪತ್ರಕರ್ತರು ಮಾಹಿತಿ ಪಡೆದುಕೊಳ್ಳಬಹುದು

**ಆಂಧ್ರ ಪ್ರದೇಶ:** ಕಲಾಪದ ನೇರ ಪ್ರಸಾರವನ್ನು ನಿರ್ಬಂಧಿಸಲಾಗಿದೆ. ವಿಧಾನಭವನದ ಆವರಣದಲ್ಲಿ ಪತ್ರಕರ್ತರ ಓಡಾಟಕ್ಕೂ ನಿಯಂತ್ರಣ ಹೇರಲಾಗಿದೆ

**ರಾಜಸ್ಥಾನ:** ವಿಧಾನಭವನದ ಆವರಣದಲ್ಲಿ ಪತ್ರಕರ್ತರ ಓಡಾಟಕ್ಕೆ ಕಠಿಣ ನಿರ್ಬಂಧವಿದೆ. ಸಚಿವರನ್ನು, ವಿರೋಧ ಪಕ್ಷದ ನಾಯಕರನ್ನು ಹೀಗೆ ಯಾರನ್ನೂ ಪತ್ರಕರ್ತರು ಭೇಟಿ ಮಾಡಲಾಗದು. ಪ್ರೆಸ್ ಗ್ಯಾಲರಿ ಹಾಗೂ ಮಾಧ್ಯಮ ಕೊಠಡಿಗೆ ಓಡಾಡುವುದಕ್ಕೆ ಮಾತ್ರ ಅವಕಾಶವಿದೆ

**ತಮಿಳುನಾಡು:** ಬೇರೆ ರಾಜ್ಯಗಳಲ್ಲಿ ಕನಿಷ್ಠ ಪಕ್ಷ ಅಧಿವೇಶದ ನೇರಪ್ರಸಾರವನ್ನು ಬೇರೆ ಮಾಧ್ಯಮದ ಮೂಲಕವಾದರೂ ಪ್ರಚಾರ ಮಾಡಲಾಗುತ್ತದೆ. ಆದರೆ, ತಮಿಳುನಾಡಿನಲ್ಲಿ ಅಧಿವೇಶನದ ನೇರಪ್ರಸಾರ ಎನ್ನುವ ಪರಿಕಲ್ಪನೆಯೇ ಇಲ್ಲ. ಈ ಬಗ್ಗೆ ಮದ್ರಾಸ್ ಹೈಕೋರ್ಟ್‌ನಲ್ಲಿ ದಾವೆ ಕೂಡ ಇದ್ದು, ಅದರ ವಿಚಾರಣೆಯೂ ನಡೆಯುತ್ತಿದೆ. ಡಿಎಂಕೆ ಪಕ್ಷವು ಈ ಬಾರಿಯ ತನ್ನ ಚುನಾವಣಾ ಪ್ರಚಾರದಲ್ಲಿ ಅಧಿವೇಶನದ ನೇರಪ್ರಸಾರ ಮಾಡುವುದಾಗಿ ಭರವಸೆಯನ್ನೂ ನೀಡಿತ್ತು. ಆದರೂ, ಇಲ್ಲಿಯವರೆಗೂ ಈ ಬಗ್ಗೆ ಯಾವುದೇ ಬೆಳವಣಿಗೆ ಆಗಿಲ್ಲ. ಮಾಧ್ಯಮಗಳಿಗೆ ಯಾವುದಾರೂ ಅಧಿವೇಶನದಲ್ಲಿ ನಡೆದ ವಿವಾದದ ವಿಡಿಯೊ ಬೇಕು ಎಂದಾದರೆ, ಸರ್ಕಾರಕ್ಕೆ ಮನವಿ ಮಾಡಬೇಕು. ಸರ್ಕಾರವು ತನಗೆ ಸರಿ ಅನ್ನಿಸಿದ ವಿಡಿಯೊವನ್ನು ನೀಡುತ್ತದೆ

## ಕರ್ನಾಟಕ

2019ರಲ್ಲಿ ರಾಜ್ಯ ವಿಧಾನಸಭೆಯೊಳಗೆ ಖಾಸಗಿ ಸುದ್ದಿವಾಹಿನಿಗಳ ಕ್ಯಾಮೆರಾಗಳಿಗೆ ನಿರ್ಬಂಧ ವಿಧಿಸಲಾಯಿತು. ಈ ಕುರಿತು ಮಾಧ್ಯಮ ಮತ್ತು ರಾಜಕೀಯ ಪಕ್ಷಗಳ ನಾಯಕರಿಂದ ಆಕ್ಷೇಪ ವ್ಯಕ್ತವಾದರೂ ಅಂದಿನ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಮ್ಮ ನಿಲುವು ಬದಲಿಸಲಿಲ್ಲ.

ಈ ಸಂಬಂಧ ಮಾಧ್ಯಮ ಪ್ರತಿನಿಧಿಗಳು ಕಾಗೇರಿಯವರನ್ನು ಭೇಟಿ ಮಾಡಿ, ಅಹವಾಲು ಸಲ್ಲಿಸಿದರು. ಅವರಿಂದ ಸಕಾರಾತ್ಮಕ ಭರವಸೆ ಬರಲಿಲ್ಲ. ಸಭಾಧ್ಯಕ್ಷರ ನಿಲುವನ್ನು ಟೀಕಿಸಿದ್ದ ಎಚ್.ಡಿ.ರೇವಣ್ಣ, ಶಿವಲಿಂಗೇಗೌಡ, 'ವಿಧಾನಸಭೆಯಲ್ಲಿ ಮಾಧ್ಯಮಗಳಿಗೆ ನಿರ್ಬಂಧ ಹೇರುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾದ ನಡವಳಿಕೆ' ಎಂದು ಹೇಳಿದ್ದರು. ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, 'ನಮ್ಮ ಸರ್ಕಾರ ಮಾಧ್ಯಮ ಸ್ವಾತಂತ್ರ್ಯ ನಿರ್ಬಂಧಿಸುವುದಿಲ್ಲ. ಸಭಾಧ್ಯಕ್ಷರು ತಮ್ಮ ಕ್ರಮವನ್ನು ಪುನರ್ ಪರಿಶೀಲಿಸಬೇಕು' ಎಂದು ಟ್ವೀಟ್ ಮಾಡಿದ್ದರು. ಆ ಬಳಿಕ ಅದನ್ನು ಅಳಿಸಿ ಹಾಕಿದ್ದೂ ಚರ್ಚೆಗೆ ಕಾರಣವಾಯಿತು.

**ಲೋಕಸಭೆ, ರಾಜ್ಯಸಭೆ ಮಾದರಿ:** ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅನುಸರಿಸುತ್ತಿರುವ ಮಾದರಿಯನ್ನೇ ಇಲ್ಲಿ ಅನುಸರಿಸಲಾಗಿದೆ. ಅಲ್ಲಿಯೂ ಖಾಸಗಿ ವಾಹಿನಿಗಳ ಕ್ಯಾಮೆರಾಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ.

ಮಾಧ್ಯಮಗಳಿಗೆ ಕಡಿವಾಣ ಹಾಕುವ ಪ್ರಶ್ನೆಯೇ ಇಲ್ಲ. ಸದನದ ಎಲ್ಲ ಮಾಹಿತಿಗಳೂ ಮಾಧ್ಯಮಗಳಿಗೆ ಸಿಗುತ್ತದೆ. ಯಾವುದನ್ನೂ ಮುಚ್ಚಿಡುವುದಿಲ್ಲ ಎಂದು ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದರು. ಖಾಸಗಿ ಸುದ್ದಿವಾಹಿನಿಗಳ ಕ್ಯಾಮೆರಾಗಳಿಗೆ ಕಡಿವಾಣ ವಿಧಿಸುವ ಚರ್ಚೆ ಅನೇಕ ವರ್ಷಗಳಿಂದ ನಡೆದಿತ್ತು. ಪ್ರಾಯೋಗಿಕವಾಗಿ ಮೂರು ದಿನ ಮಾತ್ರ ಮಾಡಿ ನೋಡುತ್ತೇವೆ. ಈ ನಿರ್ಧಾರವನ್ನು ಮುಂದುವರಿಸಬೇಕೆ ಅಥವಾ ಕೈಬಿಡಬೇಕೆ ಎಂಬುದನ್ನು ಮುಂದಿನ ದಿನಗಳಲ್ಲಿ ನೋಡೋಣ ಎಂದು ಅವರು ಹೇಳಿದ್ದರು. ಆ ಬಳಿಕ ನಿರ್ಬಂಧ ಮುಂದುವರಿಯಿತು. ಖಾಸಗಿಯಾಗಿ ಮಾತನಾಡುವ ಸಂದರ್ಭದಲ್ಲಿ ತಮ್ಮ ಈ ನಿರ್ಣಯಕ್ಕೆ ಎಲ್ಲ ಪಕ್ಷಗಳ ಸದಸ್ಯರ ಬೆಂಬಲ ಇದೆ ಎಂದು ಕಾಗೇರಿ ಹೇಳಿದ್ದರು.

ಆಧಾರ: ಪಿಟಿಐ, ಪ್ರೆಸ್‌ಕ್ಲಬ್ ಆಫ್ ಇಂಡಿಯಾ ಪ್ರಕಟಣೆ, ಬಾರ್ ಅಂಡ್ ಬೆಂಚ್ ವರದಿಗಳು

## ಸಿನಿ ಬಿಟ್ಸ್

## ರಾಕ್ಷಸನಾದ ಕಿಚ್ಚ ಸುದೀಪ್!



**ನಟ ಕಿಚ್ಚ** ಸುದೀಪ್ ತಮ್ಮ ಮುಂದಿನ ಸಿನಿಮಾಕ್ಕಾಗಿ ರಾಕ್ಷಸನ ಅವತಾರ ತಾಳಿದ್ದಾರೆ. ಸುದೀಪ್ ಅವರ 46ನೇ ಸಿನಿಮಾದ ಟೀಸರ್ ಬಿಡುಗಡೆಗೊಂಡಿದೆ. ತಮ್ಮ ಮುಂದಿನ ಸಿನಿಮಾಗಾಗಿ 'ಕಬಾಲಿ', 'ಕರ್ಣನ್', 'ಅಸುರನ್' ಮೊದಲಾದ ಬ್ಲಾಕ್ ಬಸ್ಟರ್ ಸಿನಿಮಾಗಳನ್ನು ನೀಡಿರುವ ತಮಿಳಿನ ಕಲೈಪುಲಿ ಎಸ್ ಧಾನು ಜೊತೆ ಕೈಜೋಡಿಸಿದ್ದಾರೆ.

ಧಾನು ಅವರ ವಿ ಕ್ರಿಯೇಷನ್ಸ್ ಮತ್ತು ಕಿಚ್ಚ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಸಿನಿಮಾಕ್ಕೆ ವಿಜಯ್ ಕಾರ್ತಿಕೇಯ ಎಂಬ ಹೊಸ ನಿರ್ದೇಶಕ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಗುಂಡೇಟು ತಗುಲಿದ ರಕ್ತ ಸಿಕ್ತ ದೇಹ, ಗಾಜಿನ ಲೋಟದಲ್ಲಿ ಬಸಿಯುವ ರಕ್ತ, ಕೈಯಲ್ಲಿ ಬಂದೂಕು, ತುಂಡಾಗಿ ಬಿದ್ದಿರುವ ಖಳನಟರ ದೇಹದ ದೃಶ್ಯಗಳು ಟೀಸರ್‌ನಲ್ಲಿವೆ. 'ನಾನು ಯುದ್ಧಕ್ಕೆ ಇಳಿದ ಮೇಲೆ ದಯೆ, ಕ್ಷಮೆ, ಸಂಧಾನ ಇದು ಯಾವುದೂ ಇರುವುದಿಲ್ಲ. ನಾನು ಮನುಷ್ಯ ಅಲ್ಲ. ನಾನು ರಾಕ್ಷಸ..' ಎಂದು ಸುದೀಪ್ ಟೀಸರ್‌ನಲ್ಲಿ ಹೇಳುತ್ತಾರೆ. ಶೀರ್ಷಿಕೆಯನ್ನು ಬಿಟ್ಟುಕೊಡದ ಚಿತ್ರದ ಪೋಸ್ಟರ್‌ನಲ್ಲಿ ಕೂಡ 'ರಾಕ್ಷಸ ಯುದ್ಧ ಪ್ರಾರಂಭ' ಎಂಬ ಅಡಿಬರಹವಿದೆ. ಒಟ್ಟಿನಲ್ಲಿ ಕಿಚ್ಚ ತಮ್ಮ ಮುಂದಿನ ಸಿನಿಮಾದಲ್ಲಿ ರಾಕ್ಷಸ ಅವತಾರವೆತ್ತಿರುವುದು ಟೀಸರ್‌ನಿಂದ ಗೊತ್ತಾಗುತ್ತಿದೆ.

'ವಿಕ್ರಾಂತ್ ರೋಣ' ಚಿತ್ರಕ್ಕೆ ಹಿಟ್ ಹಾಡುಗಳನ್ನು ನೀಡಿದ್ದ ಅಜನೀಶ್ ಲೋಕನಾಥ್ ಅವರ ಸಂಗೀತ ನಿರ್ದೇಶನ, ಶೇಖರ್ ಚಂದ್ರ ಅವರ ಛಾಯಾಗ್ರಹಣ ಚಿತ್ರಕ್ಕಿದೆ. ಕನ್ನಡ, ತಮಿಳು ಸೇರಿದಂತೆ 5 ಭಾಷೆಗಳಲ್ಲಿ ಚಿತ್ರ ತೆರೆಗೆ ಬರಲಿದೆ.

## ಈ 'ಕುಸುಮಾ' ಹೆಣ್ಣಿನ ನೋವಿನ ಧ್ವನಿ

**ಪೋಸ್ಟ್** ಮಾರ್ಟಮ್ ವಿಭಾಗದಲ್ಲಿ ಕೆಲಸ ಮಾಡುವ ಸಾಮಾನ್ಯ ನೌಕರನ ಮಗಳು ಚಿತ್ರದ ನಾಯಕಿ ಕುಸುಮಾ. ಮಗಳನ್ನು ದೊಡ್ಡ ವೈದ್ಯೆಯನ್ನಾಗಿ ಮಾಡಬೇಕು ಎಂಬುದು ಅಪ್ಪನ ಕನಸು. ಅದಕ್ಕೆ ತಕ್ಕಂತೆ ಚೆನ್ನಾಗಿ ಓದುತ್ತಿದ್ದ ಕುಸುಮಾ, ಒಂದು ಹಂತದಲ್ಲಿ ಅಪ್ಪನನ್ನು ಕಳೆದುಕೊಳ್ಳುತ್ತಾಳೆ. ಈ ಸಂಕಟದಿಂದ ವೈದ್ಯೆಯಾಗಲು ಸಾಧ್ಯವಾಗದೆ, ನರ್ಸ್ ಆಗುವ ಕುಸುಮಾ ಬದುಕಿನಲ್ಲಿ ಎದುರಿಸುವ ಸವಾಲುಗಳೇ ಚಿತ್ರದ ಒಟ್ಟಾರೆ ಕಥೆ.

ಸಾಕಷ್ಟು ಚಲನಚಿತ್ರೋತ್ಸವದಲ್ಲಿ ಪ್ರಶಸ್ತಿ ಗಳಿಸಿರುವ 'ನಾನು ಕುಸುಮಾ' ಚಿತ್ರ ಸಮಾಜದಲ್ಲಿ ವಯಸ್ಸಿಗೆ ಬಂದ ಅನಾಥ ಹೆಣ್ಣುಮಗಳೊಬ್ಬಳು ಎದುರಿಸಬಹುದಾದ ಸಮಸ್ಯೆಗಳ ಸುತ್ತ ಸುತ್ತಿ ಒಂದು ಉತ್ತಮ ಸಂದೇಶ ನೀಡುತ್ತದೆ. ಬಹುತೇಕ ದೃಶ್ಯಗಳು ಸಿನಿಮೀಯವಾಗಿರದೆ ನಮ್ಮ ಸುತ್ತಲೂ ನಿತ್ಯ ಕಾಣುವ ಸಂಗತಿಗಳೇ ಆಗಿವೆ. ಎಲ್ಲಿಯೂ ಅನವಶ್ಯಕ ಹಾಸ್ಯ, ಟ್ವಿಸ್ಟ್ ರೀತಿಯ ತಂತ್ರಗಳಿಲ್ಲದೇ ಒಂದು ಪರಿಶುದ್ಧ ಕಲಾತ್ಮಕ ಚಿತ್ರದ ಭಾವನೆ ಮೂಡಿಸುತ್ತದೆ.

ನಟಿ ಗ್ರೀಷ್ಮಾ ಶ್ರೀಧರ್ ಕುಸುಮಾ ಆಗಿ ಕಾಣಿಸಿಕೊಂಡಿದ್ದಾರೆ. ಇವರ ಸಹಜ ಅಭಿನಯದ ಕೌಶಲವನ್ನು ಇನ್ನಷ್ಟು ಉತ್ತಮವಾಗಿ ಬಳಸಿಕೊಳ್ಳುವ ಅವಕಾಶ ನಿರ್ದೇಶಕರಿಗಿತ್ತು. ಕೆಲ ದೃಶ್ಯಗಳಲ್ಲಿ ಇವರ ನಟನೆ ತುಸು ನಾಟಕೀಯವಾಗಿ ಭಾಸವಾಗುತ್ತದೆ. ಅಪ್ಪನಾಗಿ ನಿರ್ದೇಶಕ ಕೃಷ್ಣೇ ಗೌಡರು ನಟಿಸಿದ್ದು, ಅಪ್ಪ–ಮಗಳ ನಡುವಿನ ಕೆಲ ದೃಶ್ಯಗಳನ್ನು ಇನ್ನಷ್ಟು ಸಹಜವಾಗಿಸಬಹುದಿತ್ತು.

### ನಾವು ನೋಡಿದ ಸಿನಿಮಾ

**ಚಿತ್ರ:** ನಾನು ಕುಸುಮಾ
**ನಿರ್ಮಾಣ:** ಸಪ್ತಗಿರಿ ಕ್ರಿಯೇಷನ್ಸ್
**ನಿರ್ದೇಶನ:** ಕೃಷ್ಣೇ ಗೌಡ
**ತಾರಾಗಣ:** ಗ್ರೀಷ್ಮಾ ಶ್ರೀಧರ್, ಕೃಷ್ಣೇ ಗೌಡ, ಸನಾತನಿ ಜೋಶಿ ಮುಂತಾದವರು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಪಶ್ಚಿಮ ಬಂಗಾಳದ ಹಿಂದೂಗಳ ಪರಿಸ್ಥಿತಿಯನ್ನು ನೋಡಿ. ಅತ್ಯಂತ ಭೀಕರವಾಗಿದೆ, ನಾವು ಹಿಂದೂಗಳು ಒಗ್ಗಟ್ಟಾಗಿ ಹಿಂದೂಗಳನ್ನು ಬೆಂಬಲಿಸುವ ಪಕ್ಷಕ್ಕೆ ಮತ ಹಾಕದೆ ಇದ್ದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ಮಕ್ಕಳ ಪರಿಸ್ಥಿತಿಯು ಇದೇ ಆಗುತ್ತದೆ. ಎಚ್ಚರ! ಇದು ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಆಡಳಿತದಲ್ಲಿ ಮುಸ್ಲಿಮರ ಓಲೈಕೆ. ನಮ್ಮ ಹಿಂದೂಗಳ ಸ್ಥಿತಿ ನೋಡಿ' ಎಂಬ ಬರಹವುಳ್ಳ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ. ಇಬ್ಬರು ಯುವಕರಿಗೆ ಹಲವರು ಥಳಿಸುತ್ತಿರುವ ದೃಶ್ಯ ಈ ವಿಡಿಯೊದಲ್ಲಿ ಇದೆ. ಆದರೆ, ಇದು ತಿರುಚಲಾದ ಮಾಹಿತಿ.

'ನ್ಯೂಸ್ ಮೀಡಿಯಾ ಬಾಂಗ್ಲಾ' ವೆಬ್ ಪತ್ರಿಕೆಯು ಈ ವಿಡಿಯೊವನ್ನು 2019 ಮಾರ್ಚ್ 24ರಂದು ತನ್ನ ವೆಬ್‌ಪುಟದಲ್ಲಿ ಹಂಚಿಕೊಂಡಿದೆ. ಬಾಂಗ್ಲಾದೇಶದ ಹಲವು ವೆಬ್ ಪತ್ರಿಕೆಗಳೂ ಈ ವಿಡಿಯೊವನ್ನು ಹಂಚಿಕೊಂಡಿವೆ. 'ತುಂಬಾ ಕಷ್ಟಪಟ್ಟು ಆಟೊ ಖರೀದಿಸಿದ್ದೆ' ಎಂದು ವ್ಯಕ್ತಿಯೊಬ್ಬರು ಹೇಳುವುದನ್ನು ವಿಡಿಯೊದಲ್ಲಿ ಕೇಳಿಸಿಕೊಳ್ಳಬಹುದಾಗಿದೆ. ಆಟೋ ಕದ್ದು ಸಿಕ್ಕಿಬಿದ್ದ ಇಬ್ಬರು ಯುವಕರನ್ನು ಗ್ರಾಮಸ್ಥರು ಥಳಿಸುತ್ತಿರುವ ವಿಡಿಯೊ ಇದಾಗಿದೆ. ಆದರೆ, ಈ ವಿಡಿಯೊಗೆ ಸಂಬಂಧಿಸಿದ ಮಾಹಿತಿಯನ್ನು ತಿರುಚಿ, ಪಶ್ಚಿಮ ಬಂಗಾಳದಲ್ಲಿ ಹಿಂದೂಗಳಿಗೆ ಮುಸ್ಲಿಮರು ಥಳಿಸುತ್ತಿದ್ದಾರೆ ಎಂದು ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ ಎಂದು ದಿ ಕ್ವಿಂಟ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ

### ರಹಸ್ಯಕ್ಕೆ ಕೈ ಮುಗಿ

ನೆನೆನೆನೆದು ಗಹನವನು, ಜೀವನರಹಸ್ಯವನು |
ಮನವ ಬಳಲಿಸಿ ಸೋಲಿಸಿರುವ ತತ್ತ್ವವನು ||
ಮನನದೇಕಾಂತದಲಿ ಮೌನದ ಧ್ಯಾನದಲಿ |
ಮಣಿಮಣಿದು ಕೈ ಮುಗಿಯೊ – ಮಂಕುತಿಮ್ಮ ||
918 ||

**ಪದ-ಅರ್ಥ:** ಮನನದೇಕಾಂತದಲಿ = ಮನನದ + ಏಕಾಂತದಲಿ,

**ವಾಚ್ಯಾರ್ಥ:** ಯಾವ ಜೀವನದ ರಹಸ್ಯ, ಅತ್ಯಂತ ಗಹನವಾಗಿದೆಯೊ, ಮನಸ್ಸನ್ನು ಬಳಲಿಸಿ ಸೋಲಿಸಿದೆಯೊ, ಅಂತಹ ತತ್ವವನ್ನು ಏಕಾಂತದಲಿ ಮನನ ಮಾಡುತ್ತ, ಮೌನದಲ್ಲಿ ಧ್ಯಾನ ಮಾಡುತ್ತ, ಅದಕ್ಕೆ ಮಣಿಮಣಿದು ಕೈ ಮುಗಿ.

**ವಿವರಣೆ:** ಈ ಕಗ್ಗ ಭಗವದ್ಗೀತೆಯ ಒಂಭತ್ತನೆಯ ಅಧ್ಯಾಯ 'ರಾಜವಿದ್ಯಾ ರಾಜಗುಹ್ಯಯೋಗದ ಸಂಕ್ಷಿಪ್ತ ರೂಪವಿದ್ದಂತಿದೆ.ಇದರಲ್ಲಿ ಭಗವದ್ ಸತ್ವ ಹೇಗೆ ಎಲ್ಲೆಡೆಯೂ ಇದ್ದೂ ಯಾರಿಗೂ ತೋರದಂತೆ ಮರೆಯಾಗಿ, ಪ್ರಪಂಚವನ್ನು ನಡೆಸುತ್ತದೆ ಎಂಬುದನ್ನು ವಿವರಿಸಲಾಗಿದೆ. ಅದು ಪ್ರಾರಂಭವಾಗುವುದೇ, ಇದು ಗುಹ್ಯವಾದದ್ದು ಎಂಬ ಹೇಳಿಕೆಯಿಂದ.ಗುಹ್ಯ ಎಂದರೆ ರಹಸ್ಯವಾದದ್ದು. ಸುಲಭವಾಗಿ ತಿಳಿಯಲಾಗದ್ದು. ಇದು ಪರಮಾತ್ಮ ತತ್ವ. ಈ ತತ್ವ ಪ್ರಪಂಚದ ಪ್ರತಿಯೊಂದು ಅಣುವಿನಲ್ಲೂ ನೆಲೆಸಿದೆ, ಆದರೆ ಕಾಣುವುದಿಲ್ಲ. ಅದು ಬರೀ ಶಂಕೆಯನ್ನೇ ಹುಟ್ಟುಹಾಕುತ್ತದೆ. ಈಜಗತ್ತು ನಿಜವಾಗಿಯೂ ಒಂದು ವಸ್ತುವೇ? ಅಥವಾ ಬರೀ ತೋರಿಕೆಯೇ? ತೋರಿಕೆಯೂ ಕೆಲಮಟ್ಟದ, ಕೆಲಕಾಲದಇರುವಿಕೆಯೇ ಅಲ್ಲವೆ? ತೋರಿಕೆಗೂ ಒಂದು ಮೂಲವಸ್ತುವಿರಬೇಕಲ್ಲ? ಅದು ಯಾವುದು? ಯಾವ ಶಕ್ತಿ ಜಗತ್ತನ್ನು ನಡೆಸುತ್ತಿದೆ? ನಿಜವಾಗಿಯೂ ಒಂದು ಶಕ್ತಿ ಇದೆಯೇ? ಅದು ಸತ್ಯವಾಗಿಯೂ ಪ್ರಪಂಚವನ್ನು ನಡೆಸುತ್ತಿದ್ದರೆ ಕಣ್ಣಿಗೆ ಯಾಕೆ ಕಾಣುವುದಿಲ್ಲ? ಹೀಗೆ ರಾಶಿ ರಾಶಿ ಪ್ರಶ್ನೆಗಳು ನಮ್ಮನ್ನು ಕೆಣಕಿವೆ, ಕಾಡಿವೆ, ಬಳಲಿಸಿವೆ. ಉತ್ತರದೊರೆಯದೆ ಸೋಲಿಸಿವೆ. ಯಾಕೆಂದರೆ ನಮ್ಮ ಕಣ್ಣುಗಳು ಸತ್ಯವನ್ನು ಕಾಣುವಲ್ಲಿ ಅಶಕ್ತವಾಗಿವೆ. ಅದಕ್ಕೇ ಅಲ್ಲಮ ಪ್ರಭು ಹೇಳುತ್ತಾರೆ, "ಕಣ್ಣಿಂಗೆ ಕಣ್ಣು, ಕಣ್ಣೊಳು ಕಣ್ಣು, ಕಣ್ಣೇ ನೇತ್ರ, ನೇತ್ರವೇ ಸೂತ್ರ, ಸೂತ್ರವೇ ಲಿಂಗ, ಲಿಂಗವೇ ಗುಹ್ಯ,ಗುಹ್ಯಕ್ಕೆ ಗುಹ್ಯ, ಗೋಪ್ಯಕ್ಕೆ ಗೋಪ್ಯ, ರಹಸ್ಯಕ್ಕೆ ರಹಸ್ಯ. ಈ ನೇತ್ರ ಮಹಿಮೆಯ ಗುಹೇಶ್ವರ ಬಲ್ಲನಲ್ಲದೆ, ಕಣ್ಣುಗೆಟ್ಟಣ್ಣಗಳೆತ್ತ ಬಲ್ಲರು ನೋಡಯ್ಯ. ಕಣ್ಣುಮುಚ್ಚಿ ಮಲಗಿದರೂ ಜಗತ್ತನ್ನೇ ತಂದು ತೋರುವ ಮನಸ್ಸು ಕಣ್ಣಿಂಗೆ ಕಣ್ಣು. ಕಂಡಿದ್ದನ್ನು ಪ್ರಮಾಣಿಸಿ ನೋಡುವ ಅರಿವಿನ ಕಣ್ಣು ನೇತ್ರ. ಅದೇ ಲಿಂಗವನ್ನು ಅನುಸಂಧಾನ ಮಾಡುವ ಸೂತ್ರ. ಅದರ ಜ್ಯೋತಿಯೇ ಲಿಂಗ. ಪ್ರಕೃತಿಯ ಅಗೋಚರ ಸತ್ಯ, ಲಿಂಗದ ಗುಹ್ಯ. ಆಗೋಚರಕ್ಕೂ ಆಗೋಚರವಾದದ್ದು ಗುಹ್ಯ, ಗೋಪ್ಯ, ರಹಸ್ಯ. ಇಂತಹ ಆತ್ಮದ ಚಿದ್ಬೆಳಕಿನ ಅರಿವನ್ನು ಕಣ್ಣುಗೆಟ್ಟ (ಅರಿವಿಲ್ಲದ) ಅಣ್ಣಗಳು ಎತ್ತ ಬಲ್ಲರು ಎನ್ನುತ್ತಾರೆ ಪ್ರಭುದೇವರು. ಇಂತಹ ಗಹನವಾದ ರಹಸ್ಯವನ್ನು, ಮನನದಿಂದ, ಏಕಾಂತದಿಂದ ಮನನದ ಧ್ಯಾನದಲ್ಲಿ ಸಾಧಿಸುತ್ತ, ಆ ಪರಮಶಕ್ತಿಗೆ ಬಾಗಿ ಕೈ ಮುಗಿ ಎನ್ನುತ್ತದೆ ಕಗ್ಗ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜುಲೈ 3, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ:** ಆಷಾಢ ಶುದ್ಧ ಪೂರ್ಣಿಮಾ ಗಂ. 17-09, ನಕ್ಷತ್ರ: ಮೂಲಾ ಗಂ. 11-02 ಯೋಗ: ಬ್ರಹ್ಮ ಗಂ. 15-45 ಕರಣ: ವಿಷ್ಟಿ ಗಂ. 06-48, ಮಿಥುನ ಮಾಸದ 18 ನೇ ದಿನ, ಮಳೆನಕ್ಷತ್ರ: ಆರ್ದ್ರಾ 4.
ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-12 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 14 ಜುಲ್‌ಹಿಜಾ, ದಿನ ವಿಶೇಷ : ಗುರು ಪೂರ್ಣಿಮಾ, ವ್ಯಾಸ ಪೂಜಾ, ಆಷಾಡಿ ಪೂರ್ಣಿಮಾ
ಅದೃಷ್ಟ ಸಂಖ್ಯೆ : 9, 10



**ಮೇಷ:** ಮಕ್ಕಳ ಕೆಲವೊಂದು ವಿಚಾರಗಳು ಮಾನಸಿಕ ಸ್ಥಿತಿಯನ್ನು ಕೆಡಿಸಲಿವೆ. ಹೊಸ ಹಾದಿಯಲ್ಲಿ ಹೆಜ್ಜೆ ಇಡಲು ಸುಸಮಯ. ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿದೆ. ಸಕಾಲದಲ್ಲಿ ಮಿತ್ರರ ನೆರವು ಸಿಗುವುದು.

**ವೃಷಭ:** ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿ ಓದಿದರೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಲಭ್ಯವಾಗುವುದು. ಕಾರ್ಯಕ್ಷೇತ್ರದಲ್ಲಿನ ಹೆಚ್ಚುವರಿ ಕೆಲಸದಿಂದ ಆದ ಒತ್ತಡಗಳಿಂದ ಹೊರಬರಲು ವಿಶ್ರಾಂತಿ ಅಗತ್ಯ ಇರುವುದು.

**ಮಿಥುನ:** ಸರ್ವರಂಗದಲ್ಲೂ ಜಯಶಾಲಿಯ ಪಟ್ಟ ಹೊಂದುವ ಯೋಗವಿದೆ. ಉದ್ಯೋಗದಲ್ಲಿನ ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಎದುರಾಗುವ ತೊಂದರೆಗಳನ್ನು ಎದುರಿಸುವಾಧೈರ್ಯಗೆಡದಿರಿ.

**ಕರ್ಕಾಟಕ:** ಸ್ವಂತ ಕೆಲಸವನ್ನು ಜರೂರಾಗಿ ಮಾಡಬೇಕಾಗುತ್ತದೆ. ಅನ್ಯರ ಸಹಾಯ, ಸಹಕಾರವೆಂಬುವುದು ಈ ದಿನ ಇಲ್ಲವಾಗುವುದು. ಅನುಭವಿಸಿದ ಸಮಸ್ತ ಸಮಸ್ಯೆಗಳಿಗೆ ಮುಕ್ತಿಸಿಗಲಿದೆ.

**ಸಿಂಹ:** ದಾರಿಹೋಕರ ಟೀಕೆಗಳಿಗೆ ಹೆದರದೆ ಕೆಲಸದಲ್ಲಿ ಸಕಾರಾತ್ಮಕವಾಗಿ ಮುಂದುವರೆಯಿರಿ. ಲೋಹದ ವಸ್ತು ವ್ಯಾಪಾರ ಮಾಡುವವರು ದುಪ್ಪಟ್ಟು ಲಾಭ ಪಡೆಯಬಹುದು. ಹೂವಿನ ವ್ಯಾಪಾರಿಗಳಿಗೆ ಯಶಸ್ಸು.

**ಕನ್ಯಾ:** ನಿಮ್ಮ ಆದಾಯ ಮತ್ತು ನಿಮ್ಮ ಖರ್ಚುಗಳನ್ನು ಸರಿದೂಗಿಸಿಕೊಳ್ಳುವುದು ಕಷ್ಟವೆನಿಸುವುದಿಲ್ಲ. ಅವಕಾಶ ಸೂಕ್ತವಾಗಿ ಬಳಸಿಕೊಂಡಲ್ಲಿ ಮುನ್ನಡೆ ಸಾಧಿಸುವಿರಿ. ಮೃದು ಭಾಷಿಗಳುಎನಿಸಿಕೊಳ್ಳುವಿರಿ.

**ತುಲಾ:** ಇತರರ ಒತ್ತಾಯಕ್ಕೆ ನಿಮಗೆ ಬೇಡದಿರುವ ತೀರ್ಮಾನವನ್ನು ತೆಗೆದುಕೊಳ್ಳಬೇಡಿ. ನಿರೀಕ್ಷಿತ ಧನಾಗಮನವಿದ್ದರೂ ಆರ್ಥಿಕ ವಿಷಯಗಳಲ್ಲಿ ಎಚ್ಚರವಹಿಸಿ. ಶ್ರೀ ದುರ್ಗಾದೇವಿಯನ್ನು ಭಜಿಸಿ ಶುಭವಾಗುತ್ತದೆ.

**ವೃಶ್ಚಿಕ:** ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟಂತಹ ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಈ ದಿನ ಇತ್ಯರ್ಥಗೊಳ್ಳುವ ಸಂಭವ. ಧ್ಯಾನ ಹಾಗೂ ಯೋಗದ ಅಭ್ಯಾಸದಿಂದ ಅನುಕೂಲ. ಬಂಧುಗಳ ಆಗಮನದಿಂದ ಸಂತಸ.

**ಧನು:** ಶರೀರದಲ್ಲಿನ ನವ ಚೈತನ್ಯವು ಕಾರ್ಯಪ್ರವೃತ್ತಿ ಹೊಂದುವಂತೆ ಮಾಡುವುದು. ಷೇರು ವ್ಯಾಪಾರವು ಇಂದು ಅದೃಷ್ಟದಾಯಕವಾಗಿರುತ್ತದೆ. ಅನಿರೀಕ್ಷಿತ ಸುದ್ದಿ ನಿಮ್ಮನ್ನು ಧೈರ್ಯಗೆಡುವಂತೆ ಮಾಡಲಿದೆ.

**ಮಕರ:** ವ್ಯಾಪಾರ, ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿನ ಸುಧಾರಣೆಗೆ ಈ ದಿನ ಸಾಕಷ್ಟು ಅವಕಾಶವಿದೆ. ಆರೋಗ್ಯ ಸುಧಾರಿಸಿ ಎಂದಿನಂತೆ ಕೆಲಸಕ್ಕೆ ತೆರಳುವಂತಾಗುತ್ತದೆ.

**ಕುಂಭ:** ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ. ನಿಮ್ಮ ಜೀವನ ಶೈಲಿಯೂ ವಿಭಿನ್ನ ಬದಲಾಗಲಿದೆ. ಜಲ ಮಂಡಳಿ ನೌಕರರಿಗೆ ವೇತನ ಹೆಚ್ಚಳವಾಗಲಿದೆ. ಸೋಮಾರಿತನ ಶ್ರೇಯಸ್ಸಿಗೆ ಅಡ್ಡಿ ಬರದಂತೆ ಗಮನಹರಿಸಿಕೊಳ್ಳಿರಿ.

**ಮೀನ:** ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ ಅಥವಾ ಬಂಧು ಮಿತ್ರರು ಮನೆಗೆ ಬರಲಿದ್ದಾರೆ. ನೀವು ಮಾಡುವ ಕೆಲಸದಲ್ಲಿ ದೋಷಗಳು ಸಂಭವಿಸಲಿದೆ. ರೈತರಿಗೆ ಕೆಲಸದಲ್ಲಿ ಹೊಸ ಚೈತನ್ಯದಿಂದ ಲಾಭ ಆಗುವುದು.

## ಪದಬಂಧ 5368

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1. ಬಿಡುವು ಹೀಗೆ ದೊರಕಿದೆ (3)
4. ಕರುವಿನೊಳಗೆ ಅಶ್ರು ಕಾಣುತ್ತಿದೆಯಲ್ಲಾ (3)
6. ನೀರಿನಿಂದಾದ ಅನಿಲ (5)
7. ಮೃತ್ಯು ದೇವತೆ (2)
9. ಮಾತುಲನಾಡಿದ ನುಡಿ (2)
10. ನಾರೀಕೇಳದಲ್ಲಿರುವ ಕೊಳವೆ (2)
11. ಜನನಿ ನುಡಿದ ಸತ್ಯ (2)
13. ವ್ಯಾಕರಣದಲ್ಲಿ ವಸ್ತು ಅಥವಾ ವ್ಯಕ್ತಿಯ ಗುಣವನ್ನು ತಿಳಿಸುವ ಪದ (5)
16. ಸೀಸೆಯ ಮುಚ್ಚಳವಿಲ್ಲಿ ಉಲ್ಟಾ ಆಗಿದೆ (3)
17. ರಕ್ತವನ್ನು ಹೀಗೆ ಹೇಳಿ (3)

**ಮೇಲಿಂದ ಕೆಳಕ್ಕೆ**
1. ನಿಯಮದಂತೆ ಕನ್ನಡಿಗನು ಮಾಡಿದ ಎಕ್ಸ್‌ಚೇಂಜ್ (4)
2. ಮಜದಲ್ಲಿರುವ ಮನುಷ್ಯ (3)
3. ಇದು ಸ್ವಭಾವ ಸಿದ್ಧವಾದುದು (3)
4. ನಿಂದೆ ಹೀಗೆ ಬಂದಿದೆ (3)
5. ದೃಢಪಡಿಸುವ ಸಾಧನ (4)
8. ಮರಳ ಹತ್ತಿರವಿರುವ ಹುಚ್ಚ (3)
9. ಈಕೆ ಹೆಂಗಸು (3)
10. ಶ್ವಾನ ಹಿಡಿದಿರುವ ಅಣಬೆ (4)
12. ವಾರದಕೊನೆಗೆ ಧರಿಸಿದ ಯಜ್ಞೋಪವೀತ (4)
13. ಮುಳ್ಳುಗಳ ನಡುವೆ ಅರಳಿದ ಹೂ (3)
14. ವಚನವನ್ನು ಹೀಗೆನ್ನಿ (3)
15. ಬೆನ್ನೆಲುಬಿರುವ ಪ್ರಾಣಿ (3)



### 5367ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 3.ಪರಾಜಿತ 5.ಶಯನ 6.ಕಡವರ 8.ರತ್ನಾಕರ 12.ಹಸುಗೂಸು 14.ಹರಿಕಾರ 15.ಬಾನಾಡಿ 16.ಮದಕರಿ

**ಮೇಲಿಂದ ಕೆಳಕ್ಕೆ:** 1.ಪಾಶವೀವೃತ್ತಿ 2.ವನಚರ 3.ಪರಿಕರ 4.ತವರ 7.ವಪೆ 9.ಕಡಸು 10.ಬಾಲಬಡಿಕ 11.ಕರಿ 12.ಹರದಾರಿ 13.ಸುಮಬಾಣ 14.ಹರಾಮ

## ಸುಡೊಕು 5754

| | | | | | | | | |
|---|---|---|---|---|---|---|---|---|
| | 5 | 4 | | 7 | | | 3 | |
| 7 | | | 2 | | 3 | 6 | | 8 |
| 8 | | | | 4 | | | 2 | |
| 4 | | 3 | | 1 | | 8 | | 6 |
| | | | 9 | | 4 | | 7 | |
| 9 | | 8 | | 3 | | 4 | | 1 |
| 1 | | 9 | 3 | | 5 | | 8 | 7 |
| | 6 | | | 9 | | | | |
| 5 | | 7 | 4 | | 1 | 9 | | 3 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5753 ಸುಡೊಕು

| | | | | | | | | |
|---|---|---|---|---|---|---|---|---|
| 2 | 4 | 1 | 6 | 8 | 3 | 9 | 7 | 5 |
| 9 | 8 | 5 | 2 | 4 | 7 | 6 | 1 | 3 |
| 7 | 6 | 3 | 1 | 9 | 5 | 8 | 4 | 2 |
| 4 | 5 | 9 | 8 | 2 | 1 | 7 | 3 | 6 |
| 6 | 1 | 7 | 3 | 5 | 4 | 2 | 9 | 8 |
| 8 | 3 | 2 | 9 | 7 | 6 | 4 | 5 | 1 |
| 3 | 2 | 4 | 7 | 1 | 8 | 5 | 6 | 9 |
| 5 | 9 | 6 | 4 | 3 | 2 | 1 | 8 | 7 |
| 1 | 7 | 8 | 5 | 6 | 9 | 3 | 2 | 4 |

# ಎಫ್‌ಪಿಐ ಹೂಡಿಕೆ 10 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜೂನ್ ತಿಂಗಳಿನಲ್ಲಿ ಭಾರತದ ಬಂಡವಾಳ ಮಾರುಕಟ್ಟೆಗಳಲ್ಲಿ ₹47,148 ಕೋಟಿ ಹೂಡಿಕೆ ಮಾಡಿದ್ದಾರೆ. 10 ತಿಂಗಳಿನಲ್ಲಿ ಆಗಿರುವ ಗರಿಷ್ಠ ಹೂಡಿಕೆ ಇದಾಗಿದೆ.

ಮೇ ತಿಂಗಳಿನಲ್ಲಿ ₹43,838 ಕೋಟಿ ಬಂಡವಾಳ ಹೂಡಿಕೆ ಮಾಡಿದ್ದರು.

ಅಮೆರಿಕದ ಫೆಡರಲ್ ರಿಸರ್ವ್ ಈಚೆಗೆ ನೀಡಿರುವ ಹೇಳಿಕೆಯಿಂದಾಗಿ ಹೂಡಿಕೆದಾರರು ಎಚ್ಚರಿಕೆಯಿಂದ ವರ್ತಿಸಲಿದ್ದಾರೆ. ಹೀಗಾಗಿ ಜುಲೈನಲ್ಲಿ ವಿದೇಶಿ ಬಂಡವಾಳ ಒಳಹರಿವು ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಹಣಕಾಸು ಸಲಹಾ ಕಂಪನಿ ಕ್ರೇವಿಂಗ್ ಆಲ್ಫಾದ ಸ್ಮಾಲ್‌ಕ್ಯಾಪ್ ವಿಭಾಗದ ನಿರ್ವಾಹಕ ಮಯಾಂಕ್ ಮೆಹ್ರಾ ಹೇಳಿದ್ದಾರೆ.

ಮಾರುಕಟ್ಟೆ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಮುಂದಿನ ದಿನಗಳಲ್ಲಿ ವಿದೇಶಿ ಹೂಡಿಕೆದಾರರು ಬಹಳ ಎಚ್ಚರಿಕೆಯಿಂದ ವಹಿವಾಟು ನಡೆಸಲಿದ್ದಾರೆ ಎಂದ ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| **ಬೆಂಗಳೂರು** | |
| 100 ಮೊಟ್ಟೆಗೆ | ₹580 |
| 12 ಮೊಟ್ಟೆಗೆ | ₹75 |
| **ಮೈಸೂರು** | |
| 100 ಮೊಟ್ಟೆಗೆ | ₹580 |

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

# ಗುರುಪೂರ್ಣಿಮೆ: ಅರಿವಿನ ಪೂಜೆ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಗುರುಪೂರ್ಣಿಮೆ

ಗುರುಪೂರ್ಣಿಮೆಯನ್ನು ವ್ಯಾಸಪೂಜೆಯನ್ನಾಗಿ ಆಚರಿಸುವುದು ಅಥವಾ ವ್ಯಾಸಪೂಜೆಯನ್ನೇ ಗುರುಪೂರ್ಣಿಮೆಯಂದು ಆಚರಿಸುವುದು ತುಂಬ ಔಚಿತ್ಯಪೂರ್ಣವಾಗಿದೆ. ಇಡಿಯ ನಮ್ಮ ಸಂಸ್ಕೃತಿಗೆ ಗುರುಸ್ವರೂಪದಲ್ಲಿರುವವರು ವ್ಯಾಸಮಹರ್ಷಿಗಳು.

ನಮ್ಮ ಜೀವನಕ್ಕೆ ಬೇಕಾದ ಅರಿವನ್ನು ಕೊಡುವವನೇ ಗುರು; ಬದುಕಿನ ಕತ್ತಲೆಯನ್ನು ತೊಲಗಿಸುವವನು ಗುರು. ನಮ್ಮ ಸಂಸ್ಕೃತಿಯಲ್ಲಿ ಜ್ಞಾನಕ್ಕೆ, ಅರಿವಿಗೆ ಸಂಕೇತವಾಗಿ 'ವೇದ'ವನ್ನು ಕಾಣಿಸಲಾಗಿದೆ. ಅರಿವಿಗೆ ಎಲ್ಲೆ ಎಂಬುದು ಇರದು; ಹೀಗೆಯೇ ವೇದಕ್ಕೆ ಕೊನೆ ಎಂಬುದು ಇಲ್ಲ, ಅದು ಅನಂತ. ಹೀಗೆ ಅನಂತವಾಗಿರುವ ವೇದವನ್ನು ನಾವು ಸಾಮಾನ್ಯರು ಹೇಗೆ ದಕ್ಕಿಸಿಕೊಳ್ಳುವುದು? ಆದುದರಿಂದಲೇ ವೇದವ್ಯಾಸಮಹರ್ಷಿಗಳು ಅಪಾರಕಾರುಣ್ಯದಿಂದ ನಮಗೆ ವೇದಗಳನ್ನು ವಿಭಾಗಿಸಿಕೊಟ್ಟರು; ನಮ್ಮ ಅಧ್ಯಯನವನ್ನು ಸುಗಮಗೊಳಿಸಿದರು. ಆ ಮೂಲಕ ನಮಗೆ ಅರಿವಿನ ದಾರಿ ತೋರಿದರು. ಹೀಗಾಗಿ ಅವರು ನಮಗೆಲ್ಲ ಗುರುವಾದರು.

ವೇದಗಳನ್ನು ಎಲ್ಲರೂ ಅಧ್ಯಯನ ಮಾಡಲು ಸಾಧ್ಯವಾಗದು. ಅಂಥವರಿಗಾಗಿ ವ್ಯಾಸಮಹರ್ಷಿಗಳು ಪುರಾಣಗಳನ್ನು ರಚಿಸಿ, ಸಾಮಾನ್ಯರಿಗೂ ಅರಿವಿನ ಧಾರೆ ಎರೆದರು. ಹೀಗಿದ್ದರೂ ವೇದಗಳ ತಾತ್ಪರ್ಯ ಏನೆಂದು ತಿಳಿಯುವುದು ಸುಲಭವಾಗಲಿಲ್ಲ. ಆಗ ಅವರು ಮಹಾಭಾರತ ರಚಿಸಿ, ವೇದಗಳ ನಿಲುವು ಏನೆಂಬುದನ್ನು ಜಗತ್ತಿಗೆ ವಿಶದಗೊಳಿಸಿದರು. ಇಲ್ಲಿ ಇನ್ನೊಂದು ಪ್ರಶ್ನೆ ಎದುರಾಯಿತು. ವೇದಗಳು, ಎಂದರೆ ಜ್ಞಾನ ನಮಗೆ ಏಕಾದರೂ ಬೇಕು? ಈ ಪ್ರಶ್ನೆಗೂ ವೇದವ್ಯಾಸರು ಉತ್ತರ ನೀಡಿದರು. ಇಡಿಯ ವೇದವಾಙ್ಮಯದ ಸಾರವೇ ಉಪನಿಷತ್ತುಗಳಲ್ಲಿದೆ. ಉಪನಿಷತ್ತುಗಳ ಸಾರವನ್ನು ಅವರು ವೇದಾಂತಸೂತ್ರಗಳಲ್ಲಿ ಸಂಗ್ರಹಿಸಿ, ನಮ್ಮ ಅರಿವಿಗೆ ದಿಕ್ಸೂಚಿಯನ್ನೂ ಒದಗಿಸಿದರು. ಹೀಗಾಗಿ ವ್ಯಾಸಮಹರ್ಷಿಗಳು ಲೋಕಕ್ಕೆ ಬೇಕಾದ ಅರಿವಿನ ಮೂಲಗಳನ್ನು ವ್ಯವಸ್ಥೆಗೊಳಿಸಿ, ಲೋಕಗುರುವಾದರು. ಅವರ ಸ್ಮರಣೆಯೇ ಗುರುಪೂರ್ಣಿಮೆಯ ಉದ್ದೇಶ ಎಂಬುದು ಪರಂಪರೆಯ ಒಕ್ಕಣೆ.

ಒಂದಕ್ಷರವನ್ನು ಕಲಿಸಿದವರೂ ನಮಗೆ ಗುರುವೇ ಹೌದು – ಎಂಬುದು ಪರಂಪರೆಯ ಒಕ್ಕಣೆ. ನಮಗೆ ವಿದ್ಯೆ ಎಂಬುದು ಕೇವಲ ಮನುಷ್ಯಮೂಲದಿಂದಲೋ ಅಥವಾ ನಮಗಿಂತ ಹಿರಿಯರಾದವರಿಂದ ಮಾತ್ರವೋ ಒದಗುವಂಥದ್ದಲ್ಲ; ನಮ್ಮ ಸುತ್ತಲಿನ ಪರಿಸರ, ಮರ, ಗಿಡ, ಪ್ರಾಣಿ, ಪಕ್ಷಿ, ಮಕ್ಕಳು, ನದಿಗಿರಿಗಳೂ – ಯಾರೂ ಯಾವುದೂ ನಮಗೆ ಗುರುವಾಗಿ ಒದಗಬಲ್ಲದು. ಹೀಗಾಗಿ ನಮ್ಮ ಲೌಕಿಕ ಸಾಧನೆಗೂ, ಅಲೌಕಿಕ ಸಿದ್ಧಿಗೂ ಕಾರಣರಾಗಿರುವ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವ ಹಬ್ಬವನ್ನಾಗಿ ನಮ್ಮ ಸಂಸ್ಕೃತಿಯಲ್ಲಿ ಗುರುಪೂರ್ಣಿಮೆಯನ್ನು ಆಚರಿಸಲಾಗಿದೆ. 'ವ್ಯಾಸ' ಎಂಬುದು ಕೇವಲ ಒಬ್ಬ ವ್ಯಕ್ತಿಯ ಹೆಸರಲ್ಲ; ಅದು ಒಂದು ಮಹಾತತ್ತ್ವ. ನಮ್ಮ ಎಲ್ಲ ಅರಿವಿನ ಮೂಲಸ್ರೋತಕ್ಕೆ ಅದು ಸಂಕೇತ ಎಂಬುದನ್ನು ನಾವು ಗಮನಿಸತಕ್ಕದ್ದು.

ನಮ್ಮಲ್ಲಿ ಅರಿವಿನ ಸೊಗಸನ್ನು ತ್ಯಾಗ ಎಂಬ ತತ್ತ್ವದಲ್ಲಿ ಆರಾಧಿಸಲಾಗಿದೆ. ಈ ತತ್ತ್ವದ ಶಿಖರವನ್ನಾಗಿ ಸನ್ಯಾಸತತ್ತ್ವದಲ್ಲಿ ಕಾಣಲಾಗಿದೆ. ಸನ್ಯಾಸವನ್ನು ಸ್ವೀಕರಿಸಿರುವ ಸನ್ಯಾಸಿಗಳು ತ್ಯಾಗಕ್ಕೂ ಸಮ್ಯಕ್ ಜ್ಞಾನಕ್ಕೂ ಸಂಕೇತ. ಜೀವನದ ಸಮಗ್ರತೆಯನ್ನು ಕಂಡವರು; ಅರಿವಿನ ತುದಿಯನ್ನು ಮುಟ್ಟಿದವರು; ಎಲ್ಲರ ಒಳಿತನ್ನು ಬಯಸುವವರು ಅವರು; ರಾಗ–ದ್ವೇಷಗಳಿಂದ ಮುಕ್ತರಾದ ಜೀವರು ಅವರು ಎಂಬುದು ಪರಂಪರೆಯ ಶ್ರದ್ಧೆ. ಹೀಗಾಗಿಯೇ ಸನ್ಯಾಸಿಗಳನ್ನು ನಾವು ಗುರುತತ್ತ್ವದ ಮೂರ್ತರೂಪವನ್ನಾಗಿ ಕಾಣುತ್ತೇವೆ. ಇಂಥ ಸನ್ಯಾಸಿಗಳ ಚಾತುರ್ಮಾಸ್ಯವ್ರತ ಆರಂಭವಾಗುವುದು ಕೂಡ ವ್ಯಾಸಪೂಜೆಯಿಂದಲೇ ಎಂಬುದು ಮನನೀಯ. ಸದಾ ಸಂಚಾರದಲ್ಲಿಯೇ ಇರುವ ಸನ್ಯಾಸಿಗಳು, ಈ ಕಾಲದಲ್ಲಿ ಒಂದೆಡೆ ನಿಲ್ಲಬೇಕು; ಜನರಿಗೆ ಅವರು ಉಪದೇಶವನ್ನು ನೀಡಬೇಕು ಎಂಬುದು ಈ ವ್ರತದ ನಿಲುವು. ಈ ಆಶಯಕ್ಕೆ ಪೂರಕವಾಗಿ ನಮಗೆ ಬುದ್ಧ ಭಗವಂತನ ಜೀವನವೂ ಮಾರ್ಗಸೂಚಿಯಾಗಿದೆ. ಸಿದ್ಧಾರ್ಥನು ಅರಿವನ್ನು ಪಡೆದು, 'ಬುದ್ಧ'ನಾದ ಮೇಲೆ, ತಾನು ಪಡೆದ ಅರಿವನ್ನು ಲೋಕಕ್ಕೆ ಉಪದೇಶ ಮಾಡಿದ ದಿನವು ಕೂಡ ಈ ಗುರುಪೂರ್ಣಿಮೆಯ ಪರ್ವದಿನವೇ ಹೌದು. ಹೀಗೆ ಹಲವು ನೆಲೆಗಳಿಂದ ಗುರುಪೂರ್ಣಿಮೆಯು ನಮ್ಮ ಜೀವನಕ್ಕೆ ಬೇಕಾದ ಅರಿವಿನ ಸಂದೇಶವಾಗಿದೆ. ಈ ಅರಿವಿನ ಪೂಜೆಯನ್ನು ನಾವು ಹಲವು ಸ್ವರೂಪಗಳಲ್ಲಿ ನಡೆಸಬಹುದಾಗಿದೆ.

OBITUARY

MR K.C.N MOHAN
It is with deep sadness & heavy hearts that we inform you of the Demise of our father Mr K.C.N Mohan, who passed away on Sunday 2nd July 2023.
We will all miss him more than words can express.
What we once enjoyed and deeply loved we can never lose, for all that we love deeply becomes part of us."
People can pay their respects at his home, K.C.N Bhavan.
Cremation will be held on 3rd July at Harish Chandra Ghat between 10.30am-11am
Swati & Nehaneesh
Amulya & Zayd
Surya & KCN Family

ಸವಿನೆನಪು
ಶ್ರೀಮತಿ ನಾಗರತ್ನಮ್ಮ ಬಿ.ಎಸ್.
ನಿಧನ: 03–07–2022
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ
ನಿಮ್ಮ ನೆನಪು ಸದಾ ಹಸಿರು
ನಿಮ್ಮ ತಾಳ್ಮೆ, ತ್ಯಾಗ, ಕಾಳಜಿ,
ಪ್ರೀತಿ ಹಾಗೂ ಆದರ್ಶಮಯ ಜೀವನ
ನಮಗೆ ದಾರಿದೀಪ. ಪ್ರತಿ ದಿನ, ಪ್ರತಿ ಕ್ಷಣ
ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ:
ಮಕ್ಕಳು ಮತ್ತು ಕುಟುಂಬ ವರ್ಗ
ಕೊತ್ತನಹಳ್ಳಿ ಗ್ರಾಮ,
ಸಕಲೇಶಪುರ ತಾಲ್ಲೂಕು.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

# ಬ್ಯಾಂಕ್ ವಿರುದ್ಧ ದೂರು, ಪರಿಹಾರ ಹೇಗೆ?

ಬಂಡವಾಳ ಮಾರುಕಟ್ಟೆ
ಕಾವ್ಯ ಡಿ.

**ಹಣ ಪಡೆಯಲು** ಎಟಿಎಂಗೆ ಹೋಗುತ್ತೇವೆ... ಆದರೆ, ಖಾತೆಯಲ್ಲಿ ಹಣ ಕಡಿತವಾದರೂ ಅದು ಕೈಗೆ ಬರುವುದಿಲ್ಲ. ಕಡಿತಗೊಂಡಿದ್ದ ಮೊತ್ತ ನಾಲ್ಕೈದು ದಿನಗಳ ಬಳಿಕ ಮತ್ತೆ ಖಾತೆಗೆ ಸಂದಾಯವಾಗುತ್ತೆ...

ಒಂದಲ್ಲ ಒಂದು ಸಂದರ್ಭದಲ್ಲಿ ಪ್ರತಿಯೊಬ್ಬರೂ ಈ ಸಮಸ್ಯೆ ಎದುರಿಸಿಯೇ ಇರುತ್ತೇವೆ. ಆದರೆ ನಾಲ್ಕೈದು ದಿನಗಳ ಬಳಿಕವೂ ಹಣ ನಿಮ್ಮ ಖಾತೆಗೆ ವಾಪಸ್ ಬರದಿದ್ದರೆ ಏನು ಮಾಡಬೇಕು? ಬ್ಯಾಂಕಿಗೆ ದೂರು ನೀಡುವುದು ಹೇಗೆ? ದೂರಿದ ಬಳಿಕವೂ ಬ್ಯಾಂಕ್ ಸ್ಪಂದಿಸದಿದ್ದರೆ ಯಾರ ಮೊರೆ ಹೋಗಬೇಕು? ಈ ವಿಚಾರವಾಗಿ ಒಂದಿಷ್ಟು ವಿವರಣೆ ಈ ಬರಹದಲ್ಲಿದೆ.

**ತಾಂತ್ರಿಕ ದೋಷ:** ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುವ ಮಂಜುಳಾ (ಹೆಸರು ಬದಲಾಯಿಸಲಾಗಿದೆ) ಏಪ್ರಿಲ್ 25ರಂದು ಬೆಂಗಳೂರಿನ ಎಟಿಎಂ ಒಂದರಿಂದ ₹10 ಸಾವಿರ ಪಡೆಯಲು ಹೋದರು. ತಾಂತ್ರಿಕ ತೊಂದರೆಯಿಂದಾಗಿ ಎಟಿಎಂನಿಂದ ಹಣ ಬರಲಿಲ್ಲ. ಆದರೆ ಖಾತೆಯಿಂದ ₹10 ಸಾವಿರ ಕಡಿತಗೊಂಡಿತು. ಮಂಜುಳಾ ಅದೇ ದಿನ ಸಂಬಂಧಪಟ್ಟ ಬ್ಯಾಂಕಿನ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ದೂರು ಸಲ್ಲಿಸಿದರು. ಆದರೆ ಅದಕ್ಕೆ ಸೂಕ್ತ ಸ್ಪಂದನ ಸಿಗಲಿಲ್ಲ. ಬಳಿಕ ಮಂಜುಳಾ ಬ್ಯಾಂಕಿಗೆ ತೆರಳಿ ಲಿಖಿತ ದೂರು ನೀಡಿದಾಗ, 'ಒಂದೆರಡು ದಿನಗಳಲ್ಲಿ ಸಮಸ್ಯೆ ಸರಿಪಡಿಸಲಾಗುವುದು' ಎಂದು ಅಧಿಕಾರಿಗಳು ತಿಳಿಸಿದರು. ಕೆಲವು ದಿನಗಳ ಬಳಿಕವೂ ಹಣ ವಾಪಸ್ಸಾಗದಿದ್ದಾಗ ಮಂಜುಳಾ ಮತ್ತೆ ಬ್ಯಾಂಕಿಗೆ ತೆರಳಿ, ಎಲ್ಲಿ ಸಮಸ್ಯೆಯಾಗಿದೆ ಎನ್ನುವುದನ್ನು ಮನಗಾಣಲು ಪ್ರಯತ್ನಿಸಿದರು. ಆಗಲೂ ಬ್ಯಾಂಕಿನ ಅಧಿಕಾರಿಗಳು ಸರಿಯಾಗಿ ಸ್ಪಂದಿಸಲಿಲ್ಲ.

'ಬ್ಯಾಂಕ್ ದಾಖಲೆಗಳಲ್ಲಿ, ಹಣ ಮರುಸಂದಾಯ ಆಗಿದೆ ಎಂದು ಮಾಹಿತಿ ಇದೆ. ಇನ್ನು ಹಣ ವಾಪಸ್ ಕೊಡಲು ಸಾಧ್ಯವಿಲ್ಲ' ಎಂದರು. ಬ್ಯಾಂಕಿಂಗ್ ಒಂಬುಡ್ಸ್‌ಮನ್‌ಗೆ ದೂರು ಕೊಡುವುದಾಗಿ ಮಂಜುಳಾ ಹೇಳಿದರೂ ಬ್ಯಾಂಕಿನವರು ಜಗ್ಗಲಿಲ್ಲ. ಸಣ್ಣ ಉದ್ಯೋಗದಲ್ಲಿದ್ದ ಮಂಜುಳಾಗೆ ದಿಕ್ಕೇ ತೋಚದಂತಾಯ್ತು. ಅವರ ತಿಂಗಳ ದುಡಿಮೆಯೇ ₹20 ಸಾವಿರ. ಹೀಗಿರುವಾಗ ₹10 ಸಾವಿರ ಎಟಿಎಂ ದೋಷದ ಕಾರಣಕ್ಕೆ ನಷ್ಟವಾದರೆ ಹೇಗಾಗಬೇಡ...?

**ಕಣ್ಣೀರು ಒರೆಸಿದ ಆರ್‌ಬಿಐ:** ಮಂಜುಳಾ ತಾವು ಎಟಿಎಂ ದೋಷದಿಂದ ₹10 ಸಾವಿರ ಕಳೆದುಕೊಂಡ ಬಗ್ಗೆ ಸ್ನೇಹಿತರಲ್ಲಿ ಹೇಳಿಕೊಂಡರು. ಸ್ನೇಹಿತರೊಬ್ಬರು, ಆರ್‌ಬಿಐ ವೆಬ್‌ಸೈಟ್ ಮೂಲಕ ಒಂಬುಡ್ಸ್‌ಮನ್‌ಗೆ ದೂರು ನೀಡಬಹುದು ಎಂದರು. ಅವರ ನೆರವು ಪಡೆದು ಮಂಜುಳಾ, ವೆಬ್‌ಸೈಟ್‌ನಲ್ಲಿರುವ ದೂರು ಸಲ್ಲಿಕೆ ವಿಭಾಗಕ್ಕೆ (www.rbi.org.in/Scripts/Complaints.aspx) ಭೇಟಿ ನೀಡಿ ಜೂನ್ 1ರಂದು ದೂರು ಸಲ್ಲಿಸಿದರು. ಹೆಸರು, ವಿಳಾಸ ನಮೂದಿಸಿ, ಬ್ಯಾಂಕಿನಿಂದ ತಮಗಾದ ನಷ್ಟ, ಅದರಿಂದಾದ ಮಾನಸಿಕ ವೇದನೆ, ಆರ್ಥಿಕ ತೊಂದರೆ ಮತ್ತು ಬ್ಯಾಂಕಿನ ವರ್ತನೆಯನ್ನು ವಿವರಿಸಿದರು. ಬ್ಯಾಂಕ್ ವಹಿವಾಟು ವಿವರ, ಬ್ಯಾಂಕಿಗೆ ಸಲ್ಲಿಸಿದ ದೂರು ಮತ್ತು ಅದಕ್ಕೆ ಸಿಕ್ಕಿದ ಹಿಂಬರಹ ಸೇರಿದಂತೆ ಅಗತ್ಯ ದಾಖಲೆಗಳನ್ನು ಒದಗಿಸಿದರು. 2019 ಸೆಪ್ಟೆಂಬರ್‌ನಲ್ಲಿ ಆರ್‌ಬಿಐ ಹೊರಡಿಸಿದ ಸುತ್ತೋಲೆ ಪ್ರಕಾರ ಬ್ಯಾಂಕ್ ಎಟಿಎಂನ ತಾಂತ್ರಿಕ ತೊಂದರೆಯಿಂದ ಗ್ರಾಹಕನ ಖಾತೆಯಲ್ಲಿ ಹಣ ಕಡಿತಗೊಂಡರೆ ಐದು ದಿನಗಳ ಒಳಗಾಗಿ ಅದನ್ನು ವಾಪಸ್ ನೀಡಬೇಕು. ಇಲ್ಲವಾದಲ್ಲಿ ಪ್ರತಿ ದಿನ ₹100 ದಂಡವನ್ನು ಬ್ಯಾಂಕ್ ಸಂತ್ರಸ್ತ ಗ್ರಾಹಕನಿಗೆ ನೀಡಬೇಕು ಎನ್ನುವ ನಿಯಮವನ್ನೂ ಉಲ್ಲೇಖಿಸಿದರು.

ದೂರು ನೀಡಿದ ಬಳಿಕ, ಜೂನ್ 13ರಂದು ಬ್ಯಾಂಕಿನಿಂದ ಮಂಜುಳಾಗೆ ₹10 ಸಾವಿರ ವಾಪಸ್ ಆಯಿತು. ಜೊತೆಗೆ ಜೂನ್ 21ರಂದು ₹4,200 ಪರಿಹಾರ ಸಿಕ್ಕಿತು. ತಮ್ಮದೇ ಹಣಕ್ಕಾಗಿ ಸುಮಾರು 50ಕ್ಕೂ ಹೆಚ್ಚು ದಿನ ಮಾನಸಿಕ ವೇದನೆ ಅನುಭವಿಸಿದರೂ ಅಂತಿಮವಾಗಿ ಮಂಜುಳಾ ಅವರಿಗೆ ತಮ್ಮ ಹಣದ ಜೊತೆ ಪರಿಹಾರವೂ ಸಿಕ್ಕಿತು.

**ಒಂಬುಡ್ಸ್‌ಮನ್‌ಗೆ ಯಾವಾಗ ದೂರು ನೀಡಬೇಕು?**

- ಮೊದಲು ಬ್ಯಾಂಕ್ ಅಧಿಕಾರಿಗಳಿಗೆ ದೂರು ನೀಡಿ
- ಬ್ಯಾಂಕಿನಿಂದ ತೊಂದರೆಯಾದಾಗ ಮೊದಲಿಗೆ ಬ್ಯಾಂಕ್ ಸಹಾಯವಾಣಿಗೆ ಕರೆ ಮಾಡಿ ತಿಳಿಸಿ
- ಸಹಾಯವಾಣಿಗೆ ದೂರು ನೀಡಿ ಪರಿಹಾರ ಸಿಗದಿದ್ದರೆ ಇ-ಮೇಲ್ ಮೂಲಕ ದೂರು ಸಲ್ಲಿಸಿ
- ಸಂಬಂಧಪಟ್ಟ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರ ಇ-ಮೇಲ್ ವಿಳಾಸಕ್ಕೆ ವಿವರವಾದ ದೂರು ಸಲ್ಲಿಸಿ ಅಥವಾ ಸಾಂಪ್ರದಾಯಿಕ ಪತ್ರದ ಮೂಲಕ ದೂರು ನೀಡಿ
- ನೀವು ನೀಡಿದ ದೂರಿಗೆ ಹಿಂಬರಹವನ್ನು ಕಡ್ಡಾಯವಾಗಿ ಪಡೆದುಕೊಳ್ಳಿ
- ಆಗಲೂ ಬ್ಯಾಂಕ್ ಸ್ಪಂದಿಸದಿದ್ದರೆ ದಾಖಲೆ ಸಮೇತ ಆರ್‌ಬಿಐಗೆ ದೂರು ಸಲ್ಲಿಸಿ
- ಆರ್‌ಬಿಐ ಒಂಬುಡ್ಸ್‌ಮನ್ ಎಂಬುದು ಬ್ಯಾಂಕ್ ಗ್ರಾಹಕರ ಹಕ್ಕುಗಳನ್ನು ಕಾಪಾಡಲು ಇರುವ ವ್ಯವಸ್ಥೆ
- ದೂರು ಇಲ್ಲಿ ಸಲ್ಲಿಸಿ:www.rbi.org.in/Scripts/Complaints.aspx

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

## ದಾಖಲೆ ಏರಿಕೆ ಕಂಡ ಷೇರುಪೇಟೆ

ಷೇರುಪೇಟೆ

**ಜೂನ್ 30ಕ್ಕೆ ಕೊನೆಗೊಂಡ** ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ದಾಖಲೆ ಮಟ್ಟಕ್ಕೆ ಜಿಗಿದಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಸರ್ವಕಾಲಿಕ ಏರಿಕೆ ಕಂಡಿವೆ. 64,718 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.76ರಷ್ಟು ಹೆಚ್ಚಳ ದಾಖಲಿಸಿದೆ. 19,189 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.80ರಷ್ಟು ಜಿಗಿದಿದೆ. ವಿದೇಶಿ ಹೂಡಿಕೆದಾರರ ಖರೀದಿ ಉತ್ಸಾಹ, ವಾಯುವ್ಯ ಮುಂಗಾರಿನ ಪ್ರಗತಿ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಚೇತರಿಕೆಗೆ ಕಾರಣವಾಗಿವೆ.

ವಲಯವಾರು ಪ್ರಗತಿ ನೋಡಿದಾಗ ಎಲ್ಲ ಕ್ಷೇತ್ರಗಳ ಸೂಚ್ಯಂಕಗಳು ಸಕಾರಾತ್ಮಕವಾಗಿ ಕಂಡುಬಂದಿವೆ. ನಿಫ್ಟಿ ಫಾರ್ಮಾ ಸೂಚ್ಯಂಕ ಶೇ 4.4ರಷ್ಟು, ನಿಫ್ಟಿ ವಾಹನ ಸೂಚ್ಯಂಕ ಶೇ 4ರಷ್ಟು, ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3.5ರಷ್ಟು ಮತ್ತು ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 3ರಷ್ಟು ಹೆಚ್ಚಳ ದಾಖಲಿಸಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹20,361.75 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ದೇಶಿ ಸಾಂಸ್ಥಿಕ ಹೂಡಿಕೆದಾರರು ₹1,564.60 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ, ಅದಾನಿ ಎಂಟರ್‌ಪ್ರೈಸಸ್, ಸ್ಟಾರ್ ಹೆಲ್ತ್ ಆ್ಯಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ, ಟಾಟಾ ಮೋಟರ್ಸ್, ಇಂಟರ್ ಗ್ಲೋಬ್ ಏವಿಯೇಷನ್, ಸನ್ ಫಾರ್ಮಾ, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಇನ್ಫೊಸಿಸ್ ಉತ್ತಮ ಗಳಿಕೆ ದಾಖಲಿಸಿವೆ.

**ಮುನ್ನೋಟ:** ಈ ವಾರ ಚಾಲೆಟ್ ಹೋಟೆಲ್ಸ್ ಲಿ., ಪ್ರೀಮಿಯರ್ ಪಾಲಿ ಫಿಲಂ ಲಿ., ಕೆಬಿಸಿ ಗ್ಲೋಬಲ್ ಲಿ., ಜಿ.ಎಂ. ಬ್ರಿವರಿಸ್ ಲಿ., ಒರಿಸಾ ಮಿನರಲ್ ಡೆವಲಪ್ಮೆಂಟ್ ಕಂಪನಿ ಲಿ., ವಾನ್‌ಬರ್ಗ್ ಲಿ., ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜೂನ್ ತ್ರೈಮಾಸಿಕದ ಹಣಕಾಸು ಫಲಿತಾಂಶಗಳು, ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

# ದೆಹಲಿ: ದೇವಾಲಯ, ದರ್ಗಾ ತೆರವು

## ಮೇಲ್ಸೇತುವೆ ನಿರ್ಮಾಣ ಉದ್ದೇಶ: ಪೊಲೀಸ್ ಭದ್ರತೆಯಲ್ಲಿ ಕಾರ್ಯಾಚರಣೆ

ನವದೆಹಲಿ (ಪಿಟಿಐ): ಈಶಾನ್ಯ ದೆಹಲಿಯ ಭಜನ್‌ಪುರ ಪ್ರದೇಶದಲ್ಲಿ ಮೇಲ್ಸೇತುವೆ ನಿರ್ಮಾಣಕ್ಕಾಗಿ ಪೊಲೀಸ್ ಭದ್ರತೆಯಲ್ಲಿ ಭಾನುವಾರ ಬೆಳಿಗ್ಗೆ ದೇವಾಲಯ ಮತ್ತು ದರ್ಗಾ ನೆಲಸಮ ಮಾಡಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲ ದಿನಗಳ ಹಿಂದೆ ನಡೆದ ಧಾರ್ಮಿಕ ಸಮಿತಿ ಸಭೆಯಲ್ಲಿ ಹನುಮಾನ್ ದೇವಾಲಯ ಮತ್ತು ದರ್ಗಾ ತೆರವು ಮಾಡುವ ನಿರ್ಧಾರ ತೆಗೆದುಕೊಳ್ಳಲಾಯಿತು. ಸ್ಥಳೀಯ ನಿವಾಸಿಗಳು ಮತ್ತು ಮುಖಂಡರೊಂದಿಗೂ ಮಾತುಕತೆ ನಡೆಸಲಾಗಿತ್ತು ಎಂದು ಅವರು ಹೇಳಿದ್ದಾರೆ.

ಲೋಕೋಪಯೋಗಿ ಇಲಾಖೆಯ ಸಿಬ್ಬಂದಿ ನೇತೃತ್ವದಲ್ಲಿ ಕಟ್ಟಡಗಳನ್ನು ತೆರವುಗೊಳಿಸಲಾಯಿತು. ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

'ಎಲ್ಲರ ಸಹಕಾರದೊಂದಿಗೆ ಧಾರ್ಮಿಕ ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ. ಎಲ್ಲವೂ ಶಾಂತಿಯುವಾಗಿ ನಡೆಯಿತು' ಎಂದು ಉಪ ಪೊಲೀಸ್ ಆಯುಕ್ತ (ಈಶಾನ್ಯ) ಜಾಯ್ ಟಿರ್ಕಿ ತಿಳಿಸಿದ್ದಾರೆ.

ದೆಹಲಿಯ ಭಜನ್‌ಪುರ ಪ್ರದೇಶದಲ್ಲಿ ಬುಲ್ಡೋಜರ್‌ಗಳನ್ನು ಬಳಸಿ ಧಾರ್ಮಿಕ ಕಟ್ಟಡಗಳನ್ನು ನೆಲಸಮ ಮಾಡಲಾಯಿತು – ಪಿಟಿಐ ಚಿತ್ರ

## ಯುಸಿಸಿ ಜಾರಿ: ಬಲವಂತದ ಹೇರಿಕೆ ಸಲ್ಲ– ಮಾಯಾವತಿ

ಲಖನೌ (ಪಿಟಿಐ): 'ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ನಮ್ಮ ಪಕ್ಷದ ವಿರೋಧವಿಲ್ಲ. ಆದರೆ, ಇದನ್ನು ದೇಶದಲ್ಲಿ ಜಾರಿಗೆ ತರಲು ಬಿಜೆಪಿ ಮತ್ತು ಅದರ ನೇತೃತ್ವದ ಸರ್ಕಾರ ಅನುಸರಿಸುತ್ತಿರುವ ರೀತಿಯನ್ನು ನಾವು ಒಪ್ಪುತ್ತಿಲ್ಲ' ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಭಾನುವಾರ ಇಲ್ಲಿ ಹೇಳಿದರು.

ಸಂವಿಧಾನದಲ್ಲಿ ಉಲ್ಲೇಖಿಸಿರುವಂತೆ ಎಲ್ಲ ನಾಗರಿಕರಿಗೆ ಯುಸಿಸಿ ಭದ್ರತೆ ಒದಗಿಸುತ್ತದೆ. ಆದರೆ, ಇದನ್ನು ಬಲವಂತವಾಗಿ ಹೇರಬಾರದು ಎಂದು ಹೇಳಿದ್ದಾರೆ.

'ಯುಸಿಸಿ ಅನುಷ್ಠಾನದ ವಿಚಾರದಲ್ಲಿ ಸಂಕುಚಿತ ರಾಜಕೀಯದಲ್ಲಿ ತೊಡಗಿಸಿಕೊಂಡಿರುವುದು ದೇಶದ ಹಿತಾಸಕ್ತಿಗೆ ಪೂರಕವಾಗಿಲ್ಲ. ಈ ಕಾನೂನಿನ ಬಗ್ಗೆ ಎಲ್ಲರಿಗೂ ಅರಿವು ಮೂಡಿಸುವ ಮತ್ತು ಒಮ್ಮತಾಭಿಪ್ರಾಯದ ಮೂಲಕ ಅದನ್ನು ಅನುಷ್ಠಾನಕ್ಕೆ ತರಬೇಕು' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಯುಸಿಸಿ ಜಾರಿಯಲ್ಲಿ ನಿಷ್ಪಕ್ಷಪಾತ ವಿಧಾನವನ್ನು ಬಿಜೆಪಿ ಸರ್ಕಾರ ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಪಕ್ಷವು ಅದನ್ನು ವಿರೋಧಿಸುತ್ತದೆ' ಎಂದೂ ಹೇಳಿದರು.

## ಮೇಕೆದಾಟು: ಸ್ಟಾಲಿನ್ ಸರ್ಕಾರದ 'ಮೌನ', ಎಐಎಡಿಎಂಕೆ ತರಾಟೆ

ಚೆನ್ನೈ (ಪಿಟಿಐ): ಮೇಕೆದಾಟು ಜಲಾಶಯದ ನಿರ್ಮಾಣ ಕುರಿತಂತೆ ಕರ್ನಾಟಕ ಮತ್ತು ತಮಿಳುನಾಡಿನ ಸರ್ಕಾರದ ವಿರುದ್ಧ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ ಪಳನಿಸ್ವಾಮಿ ಭಾನುವಾರ ಹರಿಹಾಯ್ದಿದ್ದಾರೆ.

ಎಂ.ಕೆ.ಸ್ಟಾಲಿನ್ ನೇತೃತ್ವದ ತಮಿಳುನಾಡು ಸರ್ಕಾರ ಈ ವಿಷಯದಲ್ಲಿ ರಾಜ್ಯದ ಹಿತಾಸಕ್ತಿಯನ್ನು ರಕ್ಷಿಸುವ ಭಾಗವಾಗಿ ಯೋಜನೆಗೆ ಯಾವುದೇ ವಿರೋಧವನ್ನು ವ್ಯಕ್ತ ಪಡಿಸುತ್ತಿಲ್ಲ ಎಂದು ಟೀಕಿಸಿದ್ದಾರೆ.

ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಬಳಿ ಜಲಾಶಯವನ್ನು ನಿರ್ಮಿಸಲಾಗುವುದು ಎಂದಿದ್ದಾರೆ. ಈ ಜಲಾಶಯದಿಂದ ತಮಿಳುನಾಡಿನ ಹಿತಕ್ಕೆ ಧಕ್ಕೆಯಾಗಲಿದೆ. ಆದರೆ, ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರು ಯೋಜನೆಗೆ ವಿರೋಧ ವ್ಯಕ್ತಪಡಿಸದಿರುವುದು ಸಮ್ಮತಿ ನೀಡಿದಂತಿದೆ ಎಂದು ಹೇಳಿದರು.

ಎಡಪ್ಪಾಡಿ ಕೆ.ಪಳನಿಸ್ವಾಮಿ

ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕರೂ ಆಗಿರುವ ಪಳನಿಸ್ವಾಮಿ, '2018ರಲ್ಲಿ ತಮ್ಮ ನೇತೃತ್ವದ ಸರ್ಕಾರವಿದ್ದಾಗ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಎಂಎ) ಸಭೆಯಲ್ಲಿ ಎಂದಿಗೂ ಈ ವಿಷಯ ಚರ್ಚೆಯೇ ಆಗಿರಲಿಲ್ಲ. ಮೇಕೆದಾಟು ಯೋಜನೆಗೆ ತಮಿಳುನಾಡಿನ ಒಪ್ಪಿಗೆ ಅಗತ್ಯ ಎಂದು ಆಗ ಸಿಎಂಎ ತಿಳಿಸಿತ್ತು ಎಂದು ಸ್ಮರಿಸಿದರು.

ಆದರೆ, ಈಗ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಡಿ.ಕೆ.ಶಿವಕುಮಾರ್ ಅವರು ಅಣೆಕಟ್ಟನ್ನು ಖಂಡಿತವಾಗಿ ನಿರ್ಮಿಸಲಾಗುವುದು ಎಂದು ಹೇಳಿದ್ದಾರೆ. ಈ ಸಂಬಂಧ ಕೇಂದ್ರ ಜಲಶಕ್ತಿ ಸಚಿವರಿಗೂ ಪತ್ರ ಬರೆದಿದ್ದಾರೆ. ಆದರೆ, ಈ ವಿಷಯದಲ್ಲಿ ರಾಜ್ಯದ ಡಿಎಂಕೆ ನೇತೃತ್ವದ ಸರ್ಕಾರ ಮಾತ್ರ ಮೌನವಾಗಿದೆ ಎಂದು ಹೇಳಿದ್ದಾರೆ.

## ಸಾಬರಮತಿ: ವಿಹಾರ ನೌಕೆಗೆ ಚಾಲನೆ

ಅಹಮದಾಬಾದ್ (ಪಿಟಿಐ): 'ಸಾಬರಮತಿ ನದಿಪಾತ್ರದಲ್ಲಿ ಅಭಿವೃದ್ಧಿಪಡಿಸಿರುವ ವಿಹಾರ ತಾಣವು ವಿವಿಧ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ವೇದಿಕೆಯಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಅವರು 'ಅಕ್ಷರ್' ವಿಹಾರ ನೌಕೆಗೆ ಚಾಲನೆ ನೀಡಿದರು.

ಎರಡು ಎಂಜಿನ್ ಒಳಗೊಂಡಿರುವ 'ಅಕ್ಷರ್' ನೌಕೆಯು ಒಟ್ಟು 30 ಮೀಟರ್ ಉದ್ದವಿದೆ. ಅಹಮದಾಬಾದ್‌ನಲ್ಲಿ ಪ್ರವಾಸೋದ್ಯಮ ಪ್ರಗತಿಗೆ ಒತ್ತು ನೀಡುವ ನಿರೀಕ್ಷೆಯಿದೆ. ಇದರಲ್ಲಿ ಮನರಂಜನೆ, ತಿನಿಸು ಲಭ್ಯವಿದೆ. 180 ಜೀವರಕ್ಷಕ ಕವಚಗಳು, ಅಗ್ನಿಶಮನ ವ್ಯವಸ್ಥೆ, ತುರ್ತು ರಕ್ಷಣಾ ದೋಣಿಯನ್ನು ಪ್ರವಾಸಿಗರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಅಳವಡಿಸಲಾಗಿದೆ ಎಂದು ತಿಳಿಸಿದರು.

'1978ರಲ್ಲಿ ನಾನು ಅಹಮದಾಬಾದ್‌ಗೆ ಸ್ಥಳಾಂತರಗೊಂಡಾಗ ಒಮ್ಮೆಯೂ ಸಾಬರಮತಿ ನದಿಯ ವೀಕ್ಷಣೆಗೆ ಹೋಗಿರಲಿಲ್ಲ. ಆಗ ನದಿಯು ಕಲ್ಮಶಗಳಿಂದ ಕೂಡಿತ್ತು. ಮೋದಿ ಮುಖ್ಯಮಂತ್ರಿಯಾಗಿದ್ದಾಗ ಹೊಸ ರೂಪ ನೀಡಲು ಕ್ರಮಕೈಗೊಂಡರು' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel
ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ ರೈಲು/ AC ಬಸ್ 11.07.2023 19.07.2023 ಅಮರನಾಥ್ ವೈಷ್ಣೋದೇವಿ ಕಾಶ್ಮೀರ,ಗುಲ್ಮಾರ್ಗ್. 23.08.2023 ಕಾಶಿ,ಅಲಹಾಬಾದ್,ಬುದ್ಧಗಯಾ. 20.09.2023 ಚಾರ್‌ಧಾಮ್ ಸಮೇತ ಪ್ರವಾಸ. 23.09.2023 25.09.2023 35/17 ದಿನಗಳ ದೆಹಲಿ,ಜೈಪುರ್ ಹರಿದ್ವಾರ್ ನೇಪಾಳ,ಗಯಾ ಪೂರಿಜಗನ್ನಾಥ್ ಕೋಲ್ಕತಾ ಚಾರ್‌ಧಾಮ್ ಅಮೃತ್‌ಸರ್ ಇತ್ಯಾದಿ. 29.09.2023 ಸೋಮನಾಥ್ ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ. 23.09.2023 ನೇಪಾಳ,ಪೋಕ್ರ ಮುಕ್ತಿನಾಥ,ಲುಂಬಿನಿ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 9035711991 7204173686 8317446683

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 27/07 ಶಿರಿಡಿ, ಪಂಡರಾಪುರ, 3ಜ್ಯೋತಿರ್ಲಿಂಗ. 18/07 ಪೂರಿ ಜಗನ್ನಾಥ್, ಕೊಣಾರ್ಕ್. 10/08 ನೇಪಾಳ, ಮುಕ್ತಿನಾಥ್. 9591017782, 9964527782

ಉದ್ಯೋಗಾವಕಾಶ
General
ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಬಿಗ್ ಬಜಾರ್ ಗಳಿಗೆ SSLC,PUC, Degree,ITI, Diplomaದವರು(ವಿದ್ಯಾರ್ಹತೆ ಯಿಲ್ಲದವರು) ಯುವಕ-ಯುವತಿಯರು, 18,600/- ವಸತಿಯೂಟವಿದೆ. 8105747339

KARNATAKA ANTIBIOTICS & PHARMACEUTICALS LTD.,
[ A GOVT. OF INDIA ENTERPRISE ]
REQUIRED LAUNDRY SERVICE CONTRACTOR
" Looking for experienced Laundry Service Contractor (preferably Pharma Industry experienced and the laundry facility required as per GMP standards) for uniform wash and laundry services " for around 700 employees to our Factory situated at Plot No.14,Peenya Industrial Area, 2nd Phase, Bengaluru -560 058 phone : 080 28395186/187/188.
The interested parties with requisite experience may visit our factory and collect the tender form and submit the same within ten working days from the date of advertisement to Human Resource Development Department.

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Part-Time Jobs
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH To Place your ad in Deccan Herald & Prajavani Classifieds
For details contact :
9901641752 : 9886213331
9845114560 : 9731810277
080 - 45557163 / 164

EDUCATION CORNER
ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
The RCSS
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

ಸ್ಪರ್ಧಾಮಿತ್ರ ACADEMY
IAS / KAS Prelims &Mains
PSI / FDA / SDA Paper I & II
RRB Bank-Exams
Enroll for Test Series
Admission Open
Opp. Maruti Medicals, Attiguppe Metro Station, Vijayanagar, Bengaluru - 40.
9535111133 / 9535111199

## 2019ರ ನಂತರ ರಾಜಭವನದಲ್ಲಿ ನಾಲ್ಕು ಪ್ರಮಾಣವಚನ ಸಮಾರಂಭ

ಮುಂಬೈ (ಪಿಟಿಐ): ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ 2019ರ ನಂತರ ನಾಲ್ಕು ಪ್ರಮಾಣ ವಚನ ಸ್ವೀಕಾರ ಸಮಾರಂಭಗಳಿಗೆ ಮಹಾರಾಷ್ಟ್ರದ ರಾಜಭವನ ವೇದಿಕೆಯಾದಂತಾಗಿದೆ.

2019ರ ನವೆಂಬರ್‌ನಲ್ಲಿ ರಾಜಭವನದಲ್ಲಿ ಬೆಳ್ಳಂಬೆಳಗ್ಗೆ ನಡೆದಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿಯಾಗಿ ಬಿಜೆಪಿಯ ದೇವೇಂದ್ರ ಫಡಣವೀಸ್, ಉಪ ಮುಖ್ಯಮಂತ್ರಿಯಾಗಿ ಎನ್‌ಸಿಪಿಯ ಅಜಿತ್ ಪವಾರ್ ಪ್ರಮಾಣವಚನ ಸ್ವೀಕರಿಸಿದ್ದರು. ಆದರೆ, ಆಗ ಅಜಿತ್ ಪವಾರ್ ಅವರು ಎನ್‌ಸಿಪಿ ವಿಭಜಿಸಲು ವಿಫಲರಾಗಿದ್ದು, ಕೇವಲ 80 ಗಂಟೆ ಕಾಲ ಆ ಸರ್ಕಾರ ಅಸ್ತಿತ್ವದಲ್ಲಿತ್ತು.

ತಿಂಗಳ ತರುವಾಯ ಶಿವಸೇನೆ ನೇತೃತ್ವದಲ್ಲಿ ಶಿವಸೇನೆ–ಕಾಂಗ್ರೆಸ್ ಮತ್ತು ಎನ್‌ಸಿಪಿ ಮೈತ್ರಿಕೂಟ 'ಮಹಾವಿಕಾಸ ಆಘಾಡಿ' ಸರ್ಕಾರ ರಚನೆಯಾಗಿತ್ತು. ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿಯಾಗಿ ಹಾಗೂ ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು.

ಆದರೆ, ಶಿವಸೇನೆಯ ಏಕನಾಥ್ ಶಿಂದೆ ಅವರು 39 ಶಾಸಕರ ಬೆಂಬಲದೊಂದಿಗೆ ಮೈತ್ರಿ ಸರ್ಕಾರದ ವಿರುದ್ಧ ಬಂಡಾಯವೆದ್ದಿದ್ದು, ಸರ್ಕಾರ 2022ರ ಜೂನ್‌ನಲ್ಲಿ ಪತನವಾಗಿತ್ತು. ನಂತರದ ಬೆಳವಣಿಗೆಯಲ್ಲಿ ಜೂ.30ರಂದು ಶಿಂದೆ ಅವರು ಮುಖ್ಯಮಂತ್ರಿಯಾಗಿ, ಬಿಜೆಪಿಯ ದೇವೇಂದ್ರ ಫಡಣವೀಸ್ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು.

ಈಗ ಅಜಿತ್ ಪವಾರ್ ಮತ್ತೆ ಉಪ ಮುಖ್ಯಮಂತ್ರಿಯಾಗಿದ್ದಾರೆ. 2019ರಲ್ಲಿ ಮೊದಲ ಪ್ರಮಾಣ ವಚನ ನಡೆದಾಗ ಭಗತ್ ಸಿಂಗ್ ಕೋಶಿಯಾರಿ ರಾಜ್ಯಪಾಲರಾಗಿದ್ದರೆ, ಈಗ ಆ ಸ್ಥಾನದಲ್ಲಿ ರಮೇಶ್ ಬೈಸ್ ಇದ್ದಾರೆ.

**ಮಹಾರಾಷ್ಟ್ರ: ಉಪಮುಖ್ಯಮಂತ್ರಿಗಳ ವಿವರ**

| | | |
|---|---|---|
| 01 | ನಾಸಿಕ್‌ರಾವ್ ತಿರ್ಪುಡೆ | 05-03-1978 ರಿಂದ 18-07-1978 |
| 02 | ಸುಂದರರಾವ್ ಸೋಳಂಕೆ | 18-07-1978 ರಿಂದ 17-02-1980 |
| 03 | ರಾಮರಾವ್ ಅದಿಕ್ | 02-02-1983 ರಿಂದ 05-03-1985 |
| 04 | ಗೋಪಿನಾಥ ಮುಂಡೆ | 14-03-1995 ರಿಂದ 11-10-1999 |
| 05 | ಛಗನ್ ಭುಜಬಲ್ | 18-10-1999 ರಿಂದ 23-12-2003 |
| 06 | ವಿಜಯ್‌ಸಿನ್ಹಾ ಮೋಹಿತೆ ಪಾಟೀಲ್ | 26-12-2003 ರಿಂದ 19-10-2004 |
| 07 | ಆರ್.ಆರ್.ಪಾಟೀಲ್ | 01-11-2004 ರಿಂದ 01-12-2008 |
| 08 | ಛಗನ್ ಭುಜಬಲ್ | 08-12-2008 ರಿಂದ 10-11-2010 |
| 09 | ಅಜಿತ್ ಪವಾರ್ | 10-11-2010 ರಿಂದ 25-09-2012 |
| 10 | ಅಜಿತ್ ಪವಾರ್ | 25-10-2012 ರಿಂದ 29-09-2014 |
| 11 | ಅಜಿತ್ ಪವಾರ್ | 23-11-2019 ರಿಂದ 26-12-2019 |
| 12 | ಅಜಿತ್ ಪವಾರ್ | 30-12-2019 ರಿಂದ 29-06-2022 |
| 13 | ದೇವೇಂದ್ರ ಫಡಣವೀಸ್ | 30-06-2022 ರಿಂದ ಇಲ್ಲಿಯವರೆಗೆ |
| 14 | ಅಜಿತ್ ಪವಾರ್ | 02-07-2023 ರಂದು ಪ್ರಮಾಣವಚನ ಸ್ವೀಕಾರ |

### ರಾಜಕೀಯ ಮಹತ್ವಾಕಾಂಕ್ಷಿ ಅಜಿತ್: 4 ವರ್ಷದಲ್ಲಿ 3ನೇ ಬಾರಿಗೆ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ

# 'ಎರಡನೇ ಯತ್ನದಲ್ಲಿ ಎನ್‌ಸಿಪಿ ಇಬ್ಭಾಗ'

ಮುಂಬೈ (ಪಿಟಿಐ): ಸಾರ್ವತ್ರಿಕ ಚುನಾವಣೆಯ ಬಳಿಕ 2019ರಲ್ಲಿ ಅತಂತ್ರ ವಿಧಾನಸಭೆ ರಚನೆಯಾದಾಗ ಎನ್‌ಸಿಪಿ ಇಬ್ಭಾಗ ಮಾಡಲು ಯತ್ನಿಸಿದ್ದ ಅಜಿತ್ ಪವಾರ್, ನಾಲ್ಕು ವರ್ಷಗಳ ತರುವಾಯ ಈಗ ಆ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ.

ಭಾನುವಾರ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ 63 ವರ್ಷ ವಯಸ್ಸಿನ ಅಜಿತ್ ಪವಾರ್ ನಾಲ್ಕು ವರ್ಷಗಳಲ್ಲಿ 3ನೇ ಬಾರಿಗೆ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದ್ದಾರೆ. ಅದಕ್ಕೂ ಹಿಂದೆಯೂ ಅವರು ಎರಡು ಬಾರಿ ಡಿಸಿಎಂ ಆಗಿದ್ದರು.

ಈ ಮೂಲಕ ಹಲವು ತಿಂಗಳಿಂದ ಚರ್ಚೆಗೆ ಗ್ರಾಸವಾಗಿದ್ದ, ತಮ್ಮ ಮುಂದಿನ ರಾಜಕೀಯ ನಡೆ ಕುರಿತ ಚರ್ಚೆಗೆ ಸದ್ಯಕ್ಕೆ ವಿರಾಮ ಹಾಕಿದ್ದಾರೆ. ರಾಜಕೀಯ ಮಹತ್ವಾಕಾಂಕ್ಷಿಯಾದ ಅಜಿತ್ ಪವಾರ್, ನೇರ ಮಾತಿಗೆ ಹೆಸರಾದವರು.

ಏಳು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು, ಕೆಳಹಂತದಲ್ಲಿ ಪ್ರಭಾವಿ ನಾಯಕ ಎಂಬ ವರ್ಚಸ್ಸು ಹೊಂದಿದ್ದಾರೆ. ಪ್ರಬಲ ಆಡಳಿತಗಾರನಾಗಿ ಹೊರಹೊಮ್ಮಿದ್ದಾರೆ.

ಅಜಿತ್ ಅವರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ಅಣ್ಣ ಅನಂತ್ ಪವಾರ್ ಅವರ ಮಗ. ಇತ್ತೀಚೆಗಷ್ಟೇ ವಿಧಾನಸಭೆ ವಿರೋಧಪಕ್ಷದ ನಾಯಕನ ಸ್ಥಾನದಿಂದ ತಮ್ಮನ್ನು ಮುಕ್ತಿಗೊಳಿಸಬೇಕು ಎಂದು ನಾಯಕರಿಗೆ ಮನವಿ ಮಾಡಿದ್ದರು.

2019ರಲ್ಲಿ ನಡೆದಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಬಾರಾಮತಿ ಕ್ಷೇತ್ರದಿಂದ 1.65 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದುಬಂದಿದ್ದರು. ಆಗ ಮೊದಲಿಗೆ ಬಿಜೆಪಿ ಜೊತೆಗೂಡಿ ಸರ್ಕಾರ ರಚಿಸಿದ್ದರು. ಬೆಳ್ಳಂಬೆಳಿಗ್ಗೆ ನಡೆದಿದ್ದ ದಿಢೀರ್ ಸಮಾರಂಭದಲ್ಲಿ ದೇವೇಂದ್ರ ಫಡಣವೀಸ್ ಮುಖ್ಯಮಂತ್ರಿಯಾಗಿ, ಅಜಿತ್ ಪವಾರ್ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಆದರೆ, ಆ ಸರ್ಕಾರ 80 ಗಂಟೆಯಷ್ಟೇ ಅಸ್ತಿತ್ವದಲ್ಲಿತ್ತು. ಬಳಿಕ ಶಿವಸೇನೆ ನೇತೃತ್ವದ ಮಹಾವಿಕಾಸ ಆಘಾಡಿ (ಎಂವಿಎ) ಮೈತ್ರಿ ಸರ್ಕಾರದಲ್ಲಿ ಡಿಸಿಎಂ ಆಗಿ ಎರಡೂವರೆ ವರ್ಷ ಅಧಿಕಾರದಲ್ಲಿದ್ದರು. ಕಳೆದ ಜೂನ್ ತಿಂಗಳು ಈ ಸರ್ಕಾರ ಪತನಗೊಂಡಿತ್ತು.

ಈ ಮೊದಲೂ ಅಜಿತ್ ಅವರು ಕಾಂಗ್ರೆಸ್ –ಎನ್‌ಸಿಪಿ ಮೈತ್ರಿಯಾಗಿ ರಚಿಸಿದ್ದ ಸರ್ಕಾರದಲ್ಲಿ, ಅಶೋಕ್ ಚವಾಣ್ ಹಾಗೂ ಪೃಥ್ವಿರಾಜ್ ಚವಾಣ್ ಅವರು ಮುಖ್ಯಮಂತ್ರಿಗಳಾಗಿದ್ದಾಗಲೂ ಉಪಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು.

1982ರಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ನಿರ್ದೇಶಕರಾಗಿ ಸಾರ್ವಜನಿಕ ಸೇವೆಗೆ ಅಜಿತ್ ಪವಾರ್ ಪ್ರವೇಶಿಸಿದ್ದರು. 1991ರಲ್ಲಿ ಬಾರಾಮತಿ ಕ್ಷೇತ್ರದಂದ ಲೋಕಸಭೆಗೂ ಆಯ್ಕೆಯಾಗಿದ್ದರು. ಆದರೆ, ಚಿಕ್ಕಪ್ಪ ಶರದ್ ಪವಾರ್ ಅವರಿಗಾಗಿ ರಾಜೀನಾಮೆ ನೀಡಿದ್ದರು. ಆ ನಂತರ ಬಾರಾಮತಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದು, ಅಲ್ಲಿಂದ ಸತತವಾಗಿ ಆಯ್ಕೆಯಾಗುತ್ತಿದ್ದಾರೆ.

1999ರಲ್ಲಿ ಸುಧಾಕರರಾವ್ ನಾಯಕ್ ನೇತೃತ್ವದ ಸರ್ಕಾರಲ್ಲಿ ಮೊದಲಿಗೆ ಕೃಷಿ ಮತ್ತು ಇಂಧನ ಖಾತೆ ರಾಜ್ಯ ಸಚಿವರಾಗಿ ಸಂಪುಟ ಸೇರಿದ್ದರು.

ಈ ವರ್ಷದ ಮೇ ತಿಂಗಳಲ್ಲಿ ಶರದ್ ಪವಾರ್ ಅವರು ಎನ್‌ಸಿಪಿ ಮುಖ್ಯಸ್ಥನ ಸ್ಥಾನದಿದ ಕೆಳಗಿಳಿಯುವ ಇಂಗಿತ ವ್ಯಕ್ತಪಡಿಸಿದ್ದು, ಬಳಿಕ ನಿರ್ಧಾರದಿಂದ ಹಿಂದೆ ಸರಿದಿದ್ದರು.

ಅದರ ಹಿಂದೆಯೇ ಅಜಿತ್ ಪವಾರ್ ಅವರು ದೆಹಲಿಯಲ್ಲಿ ಬಿಜೆಪಿ ನಾಯಕರನ್ನು ಭೇಟಿಯಾಗಿದ್ದರು.

ಒಂದು ಮೂಲಕ ಪ್ರಕಾರ, ಇತ್ತೀಚೆಗೆ ಶರದ್ ಪವಾರ್ ಅವರು ಪುತ್ರಿ ಸುಪ್ರಿಯಾ ಸುಳೆ ಅವರನ್ನು ಎನ್‌ಸಿಪಿ ಕಾರ್ಯಾಧ್ಯಕ್ಷರಾಗಿ ನೇಮಿಸಿದ ಬಳಿಕ, ಬಿಜೆಪಿ–ಶಿವಸೇನೆ (ಶಿಂದೆ ಬಣ) ಮೈತ್ರಿ ಸರ್ಕಾರ ಸೇರುವ ಯತ್ನವನ್ನು ಅಜಿತ್ ಪವಾರ್ ಚುರುಕುಗೊಳಿಸಿದರು.

ಅಜಿತ್ ಪವಾರ್ ಹಾಗೂ ಅವರ ಬೆಂಬಲಿಗ ಶಾಸಕರ ವಿರುದ್ಧ ಎನ್‌ಸಿಪಿ ಕಾರ್ಯಕರ್ತರು ಭಾನುವಾರ ಮುಂಬೈನಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

**ಮುಖ್ಯಾಂಶಗಳು**

- ಕ್ಷಿಪ್ರ ರಾಜಕೀಯ ಬೆಳವಣಿಗೆ
- ಸುಪ್ರಿಯಾ ಸುಳೆ ಕಾರ್ಯಾಧ್ಯಕ್ಷರಾದ ಬಳಿಕ ಹೆಚ್ಚಿದ ಅಸಮಾಧಾನ
- ಈಚೆಗೆ ಬಿಜೆಪಿ ನಾಯಕರ ಭೇಟಿಯಾಗಿದ್ದ ಅಜಿತ್

## ಶರದ್ ಪವಾರ್ ಆಪ್ತರ ಬಂಡಾಯ

ಮುಂಬೈ (ಪಿಟಿಐ): ಅಜಿತ್ ಪವಾರ್ ಅವರೊಂದಿಗೆ ಮಹಾರಾಷ್ಟ್ರದ ಮೈತ್ರಿ ಸರ್ಕಾರ ಸೇರಿದ ಎಂಟು ಶಾಸಕರಲ್ಲಿ ದಿಲೀಪ್ ವಾಲ್ಸೆ ಪಾಟೀಲ್ ಮತ್ತು ಛಗನ್ ಭುಜ್‌ಬಲ್ ಕೂಡಾ ಸೇರಿದ್ದಾರೆ. ಇವರು ಶರದ್ ಪವಾರ್ ಅವರ ಕಟ್ಟಾ ಬೆಂಬಲಿಗರು ಎಂದೇ ರಾಜಕೀಯ ವಲಯದಲ್ಲಿ ಗುರುತಿಸಿಕೊಂಡಿದ್ದವರು. ಈ ಇಬ್ಬರ ಬಂಡಾಯ ಎನ್‌ಸಿಪಿ ಮತ್ತು ನಾಯಕರಿಗೆ ಇನ್ನಿಲ್ಲದ ಆಘಾತ ನೀಡಿದೆ.

ಈ ಪೈಕಿ ಭುಜ್‌ಬಲ್ ಅವರು ಹಿಂದೆ ಶಿವಸೇನೆಯಲ್ಲಿದ್ದು ತಮ್ಮ ನೇರ, ನಿಷ್ಠುರ ಮಾತುಗಳಿಗೆ ಹೆಸರಾಗಿದ್ದರು. 1991ರಲ್ಲಿ ಶಿವಸೇನೆ ತೊರೆದು ಕಾಂಗ್ರೆಸ್ ಸೇರಿದ್ದರು. ಶರದ್ ಪವಾರ್ ಅವರು ಕಾಂಗ್ರೆಸ್‌ನಿಂದ ಬೇರ್ಪಟ್ಟು ಎನ್‌ಸಿಪಿ ರಚಿಸಿದಾಗ, ಭುಜ್‌ಬಲ್ ಎನ್‌ಸಿಪಿ ಸೇರಿದ್ದರು. ಆಗ ಮಹಾರಾಷ್ಟ್ರ ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕರಾಗಿದ್ದರು.

ವಿಧಾನಸಭೆಯಲ್ಲಿ ನಾಸಿಕ್‌ನ ಯೆಓಲಾ ಕ್ಷೇತ್ರ ಪ್ರತಿನಿಧಿಸುತ್ತಿರುವ ಭುಜ್‌ಬಲ್, ಈ ಮೊದಲು ಉಪ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದಾರೆ. 1999ರಲ್ಲಿ ಎನ್‌ಸಿಪಿಯ ರಾಜ್ಯ ಘಟಕದ ಅಧ್ಯಕ್ಷರು ಆಗಿದ್ದರು.

ತೆಲಗಿಯ ನಕಲಿ ಛಾಪಾಕಾಗದ ಹಗರಣದ ಸಂಬಂಧ ಭುಜ್‌ಬಲ್ ಅವರನ್ನು ಸಿಬಿಐ ವಿಚಾರಣೆಗೆ ಒಳಪಡಿಸಿತ್ತು. ಪಿಎಂಎಲ್‌ಎ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿದ್ದು, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

**ದಿಲೀಪ್ ವಾಲ್ಸೆ ಪಾಟೀಲ್:** ಇವರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ಆಪ್ತ ಸಹಾಯಕನಾಗಿ ರಾಜಕೀಯ ಬದುಕು ಆರಂಭಿಸಿದ್ದು, ಶರದ್ ಪವಾರ್ ಅವರ ಅತ್ಯಂತ ನಿಕಟವರ್ತಿ ಎಂದೇ ಗುರುತಿಸಿಕೊಂಡಿದ್ದರು. ಈ ಹಿಂದೆ ಸ್ಪೀಕರ್ ಆಗಿ, ಅಬಕಾರಿ ಮತ್ತು ಗೃಹ ಸಚಿವರಾಗಿದ್ದರು. ಅಂಬೆಗಾಂವ್ ಕ್ಷೇತ್ರದಿಂದ ಸತತ ಏಳನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ.

**ಹಸನ್ ಮುಶ್ರೀಫ್:** ಕೊಲ್ಹಾಪುರ ಜಿಲ್ಲೆಯ ಕಾಗಲ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದು, ಇವರ ವಿರುದ್ಧ ಇ.ಡಿ ತನಿಖೆ ನಡೆದಿದೆ. ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದ ಇವರಿಗೆ ಸೇರಿದ ತಾಣಗಳಲ್ಲಿ ಈ ಮೊದಲು ಇಡಿ ತಪಾಸಣೆ ನಡೆಸಿತ್ತು.

**ಧನಂಜಯ್ ಮುಂಡೆ:** ಬೀಡ್ ಜಿಲ್ಲೆಯ ಪಾರ್ಲಿ ಕ್ಷೇತ್ರ ಪ್ರತಿನಿಧಿಸುವ ಇವರು ಬಿಜೆಪಿ ಧುರೀಣ ಗೋಪಿನಾಥ ಮುಂಡೆ ಅವರ ಸಂಬಂಧಿ. ಅನಿಲ್ ಪಾಟೀಲ್ ಅವರು ಎನ್‌ಸಿಪಿಯ ಮುಖ್ಯ ಸಚೇತಕ ಆಗಿದ್ದವರು.

**ಅದಿತಿ ತತ್ಕರೆ:** ರಾಯಘಡ ಜಿಲ್ಲೆಯ ಶ್ರೀವರ್ಧನ್ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಅಜಿತ್ ಪವಾರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡವರು. ಎಂವಿಎ ಸರ್ಕಾರದಲ್ಲಿಯೂ ಇವರು ಸಚಿವರಾಗಿದ್ದರು. ಈಗ ಏಕನಾಥ್ ಶಿಂದೆ ಸರ್ಕಾರದಲ್ಲಿ ಮೊದಲ ಮಹಿಳಾ ಸಚಿವೆಯಾಗಿ ಸಂಪುಟ ಸೇರಿದ್ದಾರೆ.

# ಶರದ್ ಪವಾರ್‌ಗೆ ಪ್ರತಿಪಕ್ಷಗಳ ಬೆಂಬಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ಎನ್‌ಸಿಪಿ ಸಂಸ್ಥಾಪಕ ಶರದ್ ಪವಾರ್ ಅವರಿಗೆ ವಿರೋಧ ಪಕ್ಷಗಳಿಂದ ಬೆಂಬಲದ ಮಹಾಪೂರವೇ ಹರಿದು ಬಂದಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಶರದ್ ಪವಾರ್ ಅವರಿಗೆ ಕರೆ ಮಾಡಿ ಬೆಂಬಲ ಸೂಚಿಸಿದ ನಾಯಕರಲ್ಲಿ ಪ್ರಮುಖರು.

**ವಾಷಿಂಗ್ ಮಷೀನ್‌ಗೆ ಚಾಲನೆ:** ಮಹಾರಾಷ್ಟ್ರದ ರಾಜಕೀಯ ಬೆಳವಣಿಗೆಯನ್ನು 'ಬಿಜೆಪಿಯ ವಾಷಿಂಗ್ ಮಷೀನ್‌ಗೆ ಚಾಲನೆ ದೊರೆತಿದೆ' ಎಂದು ಕಾಂಗ್ರೆಸ್ ಬಣ್ಣಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 29ರಂದು ಭ್ರಷ್ಟಾಚಾರದ ಕುರಿತು ಮಾತನಾಡಿದ್ದರು. ಈಗ ಅವರು ತಮ್ಮ ವಾಷಿಂಗ್ ಮಷೀನನ್ನು ಚಾಲನೆ ನೀಡಿರುವಂತೆ ಕಾಣುತ್ತದೆ. ಪ್ರಮಾಣ ವಚನ ಸ್ವೀಕರಿಸಿದ ಶಾಸಕರು ಭ್ರಷ್ಟಾಚಾರದಿಂದ ಮುಕ್ತರಾಗಿ ಶುಚಿಯಾಗುತ್ತಾರೆ' ಎಂದು ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ಹೊಸದಾಗಿ ಸರ್ಕಾರವನ್ನು ಸೇರ್ಪಡೆಯಾದ ಶಾಸಕರು ಇ.ಡಿ, ಸಿಬಿಐ, ಆದಾಯ ತೆರಿಗೆ ಇಲಾಖೆಗಳಿಂದ ಭ್ರಷ್ಟಾಚಾರ ಮೊಕದ್ದಮೆಯನ್ನು ಎದುರಿ ಸುತ್ತಿದ್ದಾರೆ. ಈಗ ಅವರೆಲ್ಲರೂ ಕ್ಲೀನ್‌ಚಿಟ್ ಪಡೆಯುತ್ತಾರೆ' ಎಂದು ಟ್ವೀಟ್ ಮಾಡಿದ್ದಾರೆ.

**ನಿತೀಶ್‌ಗೆ ಹೆದರಿದ ಬಿಜೆಪಿ:** ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬಿಜೆಪಿಗೆ ಎದುರಾಗಿ ವಿರೋಧ ಪಕ್ಷಗಳನ್ನು ಒಗ್ಗೂಡಿಸುತ್ತಿದ್ದಾರೆ. ಅವರ ಈ ಪ್ರಯತ್ನಕ್ಕೆ ಬಿಜೆಪಿ ಹೆದರಿರುವುದರಿಂದಲೇ ಈ ಬೆಳವಣಿಗೆ ನಡೆದಿವೆ ಎಂದು ಜೆಡಿಯು ಮುಖ್ಯ ವಕ್ತಾರ ಕೆ.ಸಿ. ತ್ಯಾಗಿ ಪ್ರತಿಕ್ರಿಯಿಸಿದ್ದಾರೆ.

ಮಹಾರಾಷ್ಟ್ರ ಸರ್ಕಾರಕ್ಕೆ ಸೇರ್ಪಡೆಯಾಗಿರುವ ಎನ್‌ಸಿಪಿ ಶಾಸಕರನ್ನು ಕೇಂದ್ರೀಯ ತನಿಖಾ ತಂಡಗಳನ್ನು ಬಳಸಿ ಹೆದರಿಸಲಾಗಿದೆ ಎಂದು ಆರೋಪಿಸಿರುವ ಅವರು, ಮಹಾರಾಷ್ಟ್ರದ ಈ ಬೆಳವಣಿಗೆಯು ದೇಶದಾದ್ಯಂತ ರಾಜಕೀಯವಾಗಿ ಯಾವ ಪ್ರಭಾವವನ್ನೂ ಬೀರುವುದಿಲ್ಲ ಎಂದಿದ್ದಾರೆ.

'ಮಣಿಪುರದಲ್ಲಿ ಹಿಂಸಾಚಾರ ಭುಗಿಲೇಳುತ್ತಲೇ ಇರುವುದರ ನಡುವೆಯೇ ವಿರೋಧ ಪಕ್ಷಗಳನ್ನು ಒಡೆಯುವ ಕೆಲಸದಲ್ಲಿ ಬಿಜೆಪಿ ನಿರತವಾಗಿದೆ' ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ವ್ಯಂಗ್ಯವಾಡಿದ್ದಾರೆ.

'ಮಹಾರಾಷ್ಟ್ರದ ಸದ್ಯದ ಬೆಳವಣಿಗೆ ರಾಜ್ಯ ಮತ್ತು ದೇಶದ ರಾಜಕೀಯದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂದು ಕಾದು ನೋಡಬೇಕಿದೆ. ಅಧಿಕಾರದಲ್ಲಿ ಉಳಿಯಲು ಬಿಜೆಪಿ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದೆ' ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಎ. ರಾಜಾ ಹೇಳಿದ್ದಾರೆ.

ಎಎಪಿ ರಾಜ್ಯಸಭಾ ಸಂಸದ ಸಂಜಯ್ ಸಿಂಗ್, 'ಮೋದಿ ಅವರು ದೇಶದ ಭ್ರಷ್ಟಾಚಾರದ ಅತ್ಯಂತ ಪ್ರಮುಖ ಪೋಷಕರಾಗಿದ್ದಾರೆ' ಎಂದಿದ್ದಾರೆ.

ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಚಿತ್ರವಿದ್ದ ಬ್ಯಾನರ್‌ಅನ್ನು ಎನ್‌ಸಿಪಿಯ ಪ್ರತಿಭಟನನಿರತ ಬೆಂಬಲಿಗರು ಭಾನುವಾರ ವಿರೂಪಗೊಳಿಸಿದರು –ಪಿಟಿಐ ಚಿತ್ರ

> ಯಾರನ್ನು ಭ್ರಷ್ಟರು ಎಂದು ಕರೆಯುತ್ತಿದ್ದಿರೋ, ಅವರನ್ನೇ ನಿಮ್ಮ ಪಕ್ಷದಲ್ಲಿ ಸೇರಿಸಿಕೊಂಡಿದ್ದೀರಿ. ಪ್ರಧಾನಿ ಮೋದಿ ಅವರೇ ನಿಮಗೆ ನಾಚಿಕೆಯಾಗುವುದಿಲ್ಲವೇ?
>
> **ಅರವಿಂದ್ ಕೇಜ್ರಿವಾಲ್,** ದೆಹಲಿ ಮುಖ್ಯಮಂತ್ರಿ

> ಜನರ ತೀರ್ಪನ್ನು ಅಗೌರವಿಸಲು ಬಿಜೆಪಿ ಮತ್ತೆ ಮತ್ತೆ ಮಾಡುತ್ತಿರುವ ಪ್ರಯತ್ನವನ್ನು ಬಣ್ಣಿಸಲು ಪದಗಳಿಲ್ಲ. ಪ್ರಜಾಪ್ರಭುತ್ವ ಹತ್ತಿಕ್ಕಲಾಗುತ್ತಿದೆ
>
> **ಮೆಹಬೂಬಾ ಮುಫ್ತಿ,** ಪಿಡಿಪಿ ಅಧ್ಯಕ್ಷೆ

> ಅಮೆರಿಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಉಲ್ಲೇಖಿಸಿದ್ದ 'ಪ್ರಜಾಪ್ರಭುತ್ವದ ತಾಯಿ' ಇದೇನಾ?
>
> **ಕಪಿಲ್ ಸಿಬಲ್,** ರಾಜ್ಯಸಭೆ ಸದಸ್ಯ

## ಶಿಂದೆ ಸ್ಥಾನ ಕಳೆದುಕೊಳ್ಳುವ ಪ್ರಕ್ರಿಯೆಯ ಆರಂಭ: ರಾವುತ್

ಮುಂಬೈ (ಪಿಟಿಐ): 'ಮಹಾರಾಷ್ಟ್ರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಎನ್‌ಸಿಪಿ ನಾಯಕ ಅಜಿತ್ ಪವಾರ್ ಪ್ರಮಾಣ ವಚನ ಸ್ವೀಕರಿಸಿರುವುದು, ಏಕನಾಥ ಶಿಂದೆ ಅವರು ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಳ್ಳುವ ಪ್ರಕ್ರಿಯೆಯ ಆರಂಭ' ಎಂದು ಶಿವಸೇನಾ (ಯುಟಿಬಿ) ಸಂಸದ ಸಂಜಯ್ ರಾವುತ್ ಅವರು ಭಾನುವಾರ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಬೆಳವಣಿಗೆಯನ್ನು ಟ್ರಿಪಲ್ ಎಂಜಿನ್ ಸರ್ಕಾರದ ಆರಂಭ ಎಂದು ನೋಡಲಾಗುವುದಿಲ್ಲ. ಎರಡು ಎಂಜಿನ್‌ಗಳಲ್ಲಿ ಒಂದು ಎಂಜಿನ್ ವಿಫಲವಾಗಲಿದೆ' ಎಂದಿದ್ದಾರೆ.

'ನಾನು ಶರದ್ ಪವಾರ್ ಜೊತೆ ಮಾತನಾಡಿದೆ. ಜನರ ಬೆಂಬಲ ಇರುವುದಾಗಿ ಹೇಳಿದರು. ಉದ್ಧವ್ ಠಾಕ್ರೆ ಜೊತೆ ಸೇರಿ ಹೊಸದಾಗಿ ರಾಜಕೀಯ ಆರಂಭಿಸಬಹುದು ಎಂದರು' ಎಂದು ರಾವುತ್ ಅವರು ಟ್ವೀಟ್ ಮಾಡಿದ್ದಾರೆ.

## ಪ್ರಫುಲ್ ಪಟೇಲ್‌ಗೆ ಕೇಂದ್ರ ಸಚಿವ ಸ್ಥಾನ?

ನವದೆಹಲಿ (ಪಿಟಿಐ): ಮಹಾರಾಷ್ಟ್ರದಲ್ಲಿನ ರಾಜಕೀಯ ಪಲ್ಲಟದ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ಅವರು ಜುಲೈ 3ರಂದು ಕೇಂದ್ರ ಮಂತ್ರಿ ಪರಿಷತ್ ಸಭೆ ಕರೆದಿದ್ದಾರೆ. ಸಚಿವ ಸಂಪುಟದಲ್ಲಿ ಕೆಲವು ಬದಲಾವಣೆ ಮಾಡಲಿದ್ದು, ಹೊಸಬರಿಗೆ ಅವಕಾಶ ನೀಡುವ ಸಾಧ್ಯತೆ ಇದೆ.

ಮುಂಬರುವ ಲೋಕಸಭೆ ಮತ್ತು ವಿವಿಧ ರಾಜ್ಯಗಳ ವಿಧಾನಸಭೆಗೆ ಈ ವರ್ಷಾಂತ್ಯದಲ್ಲಿ ನಡೆಯಲಿರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸಂಪುಟ ಬದಲಾವಣೆಯ ಕಸರತ್ತಿಗೆ ಮೋದಿ ನಿರ್ಧರಿಸಿದ್ದಾರೆ ಎನ್ನಲಾಗಿದೆ. ಇದರ ಭಾಗವಾಗಿಯೇ ಇತ್ತೀಚೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಪಕ್ಷದ ಉನ್ನತ ನಾಯಕರ ಜೊತೆಗೆ ಅವರು ಸಭೆಯನ್ನೂ ನಡೆಸಿದ್ದರು.

ಪ್ರಗತಿ ಮೈದಾನದಲ್ಲಿ ಹೊಸದಾಗಿ ನಿರ್ಮಿಸಿರುವ ಸಭಾಂಗಣದಲ್ಲಿ ಮಂತ್ರಿಮಂಡಲದ ಸಭೆ ನಡೆಯಲಿದೆ. ಇದೇ ಸಭಾಂಗಣದಲ್ಲಿಯೇ ಸೆಪ್ಟೆಂಬರ್ 20ರಂದು ಜಿ20 ಸಭೆಯೂ ನಿಗದಿಯಾಗಿದೆ.

ಮಹಾರಾಷ್ಟ್ರದಲ್ಲಿ ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ಬಿಜೆಪಿ–ಶಿವಸೇನೆ(ಶಿಂದೆ ಬಣ) ಸರ್ಕಾರದ ಜೊತೆ ಕೈಜೋಡಿಸಿದ್ದಾರೆ. ಮತ್ತೊಂದೆಡೆ ಎನ್‌ಸಿಪಿ ಸಂಸದ ಪ್ರಫುಲ್ ಪಟೇಲ್ ಅವರು ತನ್ನ ದೀರ್ಘಕಾಲದ ರಾಜಕೀಯ ಮಾರ್ಗದರ್ಶಕರಾದ ಶರದ್ ಪವಾರ್ ಅವರನ್ನು ಬದಿಗೊತ್ತಿ ಅಜಿತ್ ಅವರ ಜೊತೆಗೂಡಿದ್ದಾರೆ. ಹಾಗಾಗಿ, ಕೇಂದ್ರ ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವ ಅವರು, ಹೊಸದಾಗಿ ಸಂಪುಟಕ್ಕೆ ಸೇರ್ಪಡೆಗೊಳ್ಳುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಮೈತ್ರಿಕೂಟದ ಭಾಗವಾಗಿರುವ ಅಜಿತ್ ಬೆಂಬಲಿಗರಿಗೂ ಕೇಂದ್ರ ಸಂಪುಟದಲ್ಲಿ ಸೂಕ್ತ ಸ್ಥಾನ ಕಲ್ಪಿಸುವ ಬಗ್ಗೆ ಮೋದಿ ಮತ್ತು ಅಮಿತ್ ಶಾ ಇಚ್ಛಿಸಿದ್ದಾರೆ ಎಂದು ಬಿಜೆಪಿ ಮೂಲಗಳು ಹೇಳಿವೆ.

## ಪಶ್ಚಿಮ ಬಂಗಾಳದ ವಿವಿಧೆಡೆ ಗಲಭೆ; ವ್ಯಕ್ತಿ ಸಾವು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಪಂಚಾಯಿತಿ ಚುನಾವಣೆ ಸನ್ನಿಹಿತವಾಗುತ್ತಿರುವ ಬೆನ್ನಲ್ಲೇ, ಹಲ ವೆಡೆ ಹಿಂಸಾಚಾರ ಪ್ರಕರಣ ವರದಿಯಾಗಿವೆ. ರಾಜ್ಯದ ದಕ್ಷಿಣ 24 ಪರಗಣ ಜಿಲ್ಲೆಯ ಬಸಂತಿ ಪಟ್ಟಣದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಕಾರ್ಯಕರ್ತರೊಬ್ಬರನ್ನು ಶನಿವಾರ ರಾತ್ರಿ ಗುಂಡಿಕ್ಕಿ ಕೊಲ್ಲಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟಿಎಂಸಿ ಕಾರ್ಯಕರ್ತ ಜಿಯಾರುಲ್ ಮೊಲ್ಲ (52) ಮನೆಗೆ ಮರಳುತ್ತಿದ್ದ ವೇಳೆ ಅವರ ಮೇಲೆ ಗುಂಡಿನ ದಾಳಿ ಮಾಡಲಾಗಿದೆ. ಆಸ್ಪತ್ರೆಗೆ ಕರೆದೊಯ್ಯುವ ವೇಳೆಗಾಗಲೇ ಅವರು ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೊಲ್ಲ ಮಗಳು ಮನ್ವಾರಾ ಅವರು ಕಥಾಲ್‌ಬರಿಯಾ ಗ್ರಾಮದಿಂದ ಟಿಎಂಸಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.

ರಾಜಕೀಯ ತೊರೆಯುವಂತೆ ತಮ್ಮ ತಂದೆಗೆ ಪಕ್ಷದಲ್ಲಿದ್ದ ಮತ್ತೊಂದು ಬಣವು ಬೆದರಿಕೆ ಒಡ್ಡುತ್ತಿದ್ದದ್ದಾಗಿ ಮತ್ತು ಬೆದರಿಕೆ ಕುರಿತು ಹಲವಾರು ಬಾರಿ ದೂರು ನೀಡಿದ್ದ ಹೊರತಾಗಿಯೂ ಪೊಲೀಸರು ಕ್ರಮ ಕೈಗೊಂಡಿರಲಿಲ್ಲ ಎಂದು ಮನ್ವಾರಾ ಆರೋಪಿಸಿದ್ದಾರೆ.

'ನಾನು ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದು. ನನ್ನ ಸ್ಪರ್ಧೆಯನ್ನು ಪಕ್ಷದ ಮತ್ತೊಂದು ಬಣವು ವಿರೋಧಿಸಿತ್ತು. ಈ ಘಟನೆ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಆಗ್ರಹಿಸುತ್ತೇನೆ' ಎಂದು ಮನ್ವಾರಾ ಹೇಳಿದ್ದಾರೆ.

**10 ಜನರಿಗೆ ಗಾಯ:** ಸಿಪಿಎಂ, ಇಂಡಿಯನ್ ಸೆಕ್ಯುಲರ್ ಫ್ರಂಟ್(ಐಎಸ್‌ಎಫ್) ಬೆಂಬಲಿಗರು ಮತ್ತು ಟಿಎಂಸಿ ಬೆಂಬಲಿಗರ ನಡುವೆ ಘರ್ಷಣೆ ಸಂಭವಿಸಿ 10 ಜನ ಗಾಯಗೊಂಡಿರುವ ಘಟನೆಯು ಪಶ್ಚಿಮ ಮೇದಿನಿಪುರ ಜಿಲ್ಲೆಯಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ಕೃಷ್ಣಪುರ ಪ್ರದೇಶದಲ್ಲಿ ಟಿಎಂಸಿ ಸದಸ್ಯರು ಪಕ್ಷದ ಧ್ವಜಗಳನ್ನು ನಿಲ್ಲಿಸುತ್ತಿದ್ದ ವೇಳೆ ವಿರೋಧ ಪಕ್ಷಗಳ ಕಾರ್ಯಕರ್ತರು ಅದನ್ನು ತಡೆಯಲು ಮುಂದಾದಾಗ ಗಲಭೆ ನಡೆದಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

**ಸಂಕ್ಷಿಪ್ತ ಸುದ್ದಿ**

## ಗುಜರಾತ್‌ನಲ್ಲಿ ಮಳೆ; 11 ಸಾವು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಕೆಲವು ಭಾಗದಲ್ಲಿ ಭಾನುವಾರವೂ ಭಾರಿ ಮಳೆಯಾಗಿದ್ದು, ಪ್ರವಾಹ ಹೆಚ್ಚಿದೆ. ರಸ್ತೆಗಳು ಕೊಚ್ಚಿ ಹೋಗಿದ್ದು, ಅಸಂಖ್ಯಾತ ಹಳ್ಳಿಗಳು ಸಂಪರ್ಕ ಕಳೆದುಕೊಂಡಿವೆ.

ಶುಕ್ರವಾರದಿಂದ ಮಳೆ ಸಂಬಂಧಿತ ಘಟನೆಗಳಿಂದ 11 ಜನರು ಮೃತಪಟ್ಟಿದ್ದು ಎಂದು ಪೊಲೀಸರು ತಿಳಿಸಿದ್ದಾರೆ.

ಗುಜರಾತ್ ಮುಖ್ಯಮಂತ್ರಿ ಜೊತೆ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಳೆಯಿಂದಾದ ಅನಾಹುತದ ಬಗ್ಗೆ ಮಾಹಿತಿ ಪಡೆದರು. 'ಸಂತ್ರಸ್ತರಾಗಿರುವ ಎಲ್ಲರಿಗೂ ತಕ್ಷಣವೇ ಪರಿಹಾರ ಕಲ್ಪಿಸಿ' ಎಂದು ಸೂಚಿಸಿದರು.

'ಸಂತ್ರಸ್ತರ ರಕ್ಷಣೆಗಾಗಿ ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್) ಕಾರ್ಯಾಚರಿಸುತ್ತಿವೆ. ಸ್ಥಳೀಯ ಆಡಳಿತವೂ ಕೈಜೋಡಿಸಿದೆ. ಸಂಕಷ್ಟದ ಸಮಯದಲ್ಲಿ ಕೇಂದ್ರ–ರಾಜ್ಯ ಸರ್ಕಾರ ಜನರೊಟ್ಟಿಗಿದೆ' ಎಂದು ಶಾ ಟ್ವೀಟ್ ಮಾಡಿದ್ದಾರೆ.

## 6 ದಿನ ಮೊದಲೇ ಮುಂಗಾರು

ನವದೆಹಲಿ(ಪಿಟಿಐ): ನಿಗದಿತ ಅವಧಿಗೂ ಮೊದಲೇ ನೈರುತ್ಯ ಮುಂಗಾರು ಇಡೀ ದೇಶವನ್ನು ಆವರಿಸಿದ್ದು ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣದ ಹಲವು ಭಾಗಗಳಲ್ಲಿ ಮಳೆ ಸುರಿಯುತ್ತಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ತಿಳಿಸಿದೆ.

ಉತ್ತರ ಪ್ರದೇಶದ ಪೂರ್ವ ಮತ್ತು ಬಿಹಾರದ ದಕ್ಷಿಣ ಭಾಗವನ್ನು ಹೊರತುಪಡಿಸಿ ಮುಂಗಾರು ಸಾಮಾನ್ಯವಾಗಿರಲಿದೆ ಎಂದು ಶುಕ್ರವಾರ ಹವಾಮಾನ ಇಲಾಖೆ ತಿಳಿಸಿತ್ತು. ಸಹಜವಾಗಿ ಜುಲೈ 8ರ ವೇಳೆಗೆ ಮುಂಗಾರು ಇಡೀ ದೇಶವನ್ನು ವ್ಯಾಪಿಸಬೇಕಿತ್ತು. ಆರು ದಿನಗಳಿಗೂ ಮುಂಚಿತವಾಗಿಯೇ ಭಾನುವಾರದಂದು ಇಡೀ ದೇಶವನ್ನು ಆವರಿಸಿದೆ ಎಂದು ತಿಳಿಸಿದೆ.

ಜೂನ್‌ನಲ್ಲಿ 16 ರಾಜ್ಯಗಳು ಸೇರಿದಂತೆ ಕೇಂದ್ರಾಡಳಿತ ಪ್ರದೇಶಗಳು ಮಳೆ ಕೊರತೆ ಎದುರಿಸಿದ್ದವು. ಈ ತಿಂಗಳಿನಲ್ಲಿ ಸರಾಸರಿಗಿಂತಲೂ ಕಡಿಮೆ ಮಳೆ ಸುರಿದಿದ್ದರಿಂದ ಬಿತ್ತನೆಗೆ ಹಿನ್ನಡೆಯಾಗಿತ್ತು. ಅದರಲ್ಲೂ ಬಿಹಾರ ಶೇ 69 ಮತ್ತು ಕೇರಳದಲ್ಲಿ ಶೇ 60ರಷ್ಟು ಮಳೆ ಕೊರತೆಯಾಗಿತ್ತು. ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಜಾರ್ಖಂಡ್, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲೂ ಅನ್ನದಾತರು ಸಂಕಷ್ಟಕ್ಕೆ ತುತ್ತಾಗಿದ್ದರು.

## ಬೇಸಿಗೆ ರಜೆ ಅಂತ್ಯ: 'ಸುಪ್ರೀಂ'ನಲ್ಲಿ ಇಂದಿನಿಂದ ಪೂರ್ಣ ಕಲಾಪ

ನವದೆಹಲಿ(ಪಿಟಿಐ): 42 ದಿನದ ಬೇಸಿಗೆ ವಿರಾಮದ ಬಳಿಕ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರದಿಂದ ಎಂದಿನಂತೆ ಕಲಾಪ ನಡೆಯಲಿವೆ.

ಮಣಿಪುರದ ಜನಾಂಗೀಯ ಸಂಘರ್ಷಕ್ಕೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು, ಪಾತಕಿ ಮತ್ತು ರಾಜಕಾರಣಿ ಅತೀಕ್ ಅಹಮದ್ ಹಾಗೂ ಆತನ ಸಹೋದರ ಅಶ್ರಫ್ ಅವರ ಹತ್ಯೆಯ ವಿಚಾರಣೆಗೆ ಆಯೋಗ ರಚನೆ ಕೋರಿ ಅವರ ಸಹೋದರಿ ಸಲ್ಲಿಸಿರುವ ಅರ್ಜಿ ವಿಚಾರಣೆ ಸೋಮವಾರ ಆರಂಭವಾಗುವ ನಿರೀಕ್ಷೆ ಇದೆ.

ಸಿಜೆಐ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಜುಲೈ 12ರಿಂದ ನಾಲ್ಕು ಪ್ರಕರಣಗಳ ವಿಚಾರಣೆ ಆರಂಭಿಸಲಿದೆ.

## ಕಾರ್ಮಿಕ ಸಾವು

ನವದೆಹಲಿ (ಪಿಟಿಐ): 'ಲೋಕನಾಯಕ ಜೈ ಪ್ರಕಾಶ್ ಆಸ್ಪತ್ರೆ ಆವರಣದಲ್ಲಿನ ನಿರ್ಮಾಣ ಹಂತದ ಕಟ್ಟಡದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾರ್ಮಿಕನೊಬ್ಬ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾನೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೃತನನ್ನು ಬಿಹಾರದ ಸಮಸ್ತಿಪುರ ನಿವಾಸಿ ಸುಜೀತ್ ಕುಮಾರ್ ಎಂದು ಗುರುತಿಸಲಾಗಿದೆ' ಎಂದು ಅವರು ಹೇಳಿದರು.

## ಸಾಮೂಹಿಕ ಅಂತ್ಯಕ್ರಿಯೆ

ಬುಲ್ಡಾನಾ (ಪಿಟಿಐ): ಮಹಾರಾಷ್ಟ್ರದ ಬುಲ್ದಾನಾದಲ್ಲಿ ಶನಿವಾರ ಬೆಂಕಿಗೆ ಆಹುತಿಯಾದ ಖಾಸಗಿ ಬಸ್ಸಿನಲ್ಲಿ ಮೃತಪಟ್ಟಿದ್ದ 25 ಜನರ ಪೈಕಿ 24 ಜನರ ಸಾಮೂಹಿಕ ಅಂತ್ಯಕ್ರಿಯೆಯನ್ನು ಸಂಬಂಧಿಗಳ ಸಮ್ಮುಖದಲ್ಲಿ ಭಾನುವಾರ ನಡೆಸಲಾಯಿತು. ಈ ಘಟನೆಯಲ್ಲಿ ಬಸ್ ಚಾಲಕ, ಕ್ಲೀನರ್ ಸೇರಿ 8 ಮಂದಿ ಬದುಕುಳಿದಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತಪಟ್ಟ 25 ಜನರ ಪೈಕಿ ಒಬ್ಬರ ಮೃತದೇಹವನ್ನು ಸಂಬಂಧಿಕರು ಪಡೆದು ಕೊಂಡಿದ್ದರು. ಉಳಿದವರ ಗುರುತು ಪತ್ತೆ ಹಚ್ಚಲು ಸಾಧ್ಯವಾಗದಷ್ಟು ಸುಟ್ಟು ಹೋಗಿತ್ತು. ಡಿಎನ್‌ಎ ಪರೀಕ್ಷೆ ನಡೆಸಿ ಮೃತದೇಹಗಳ ಹಸ್ತಾಂತರ ಮಾಡುವುದು ತುಂಬಾ ಸಮಯ ತೆಗೆದುಕೊಳ್ಳುತ್ತಿದ್ದರಿಂದ ಕುಟುಂಬಸ್ಥರ ಮನವೊಲಿಸಿ ಬುಲ್ದಾನಾದ ಹಿಂದೂ ಸ್ಮಶಾನ ಭೂಮಿಯಲ್ಲಿ ಸಾಮೂಹಿಕ ಅಂತ್ಯಕ್ರಿಯೆ ಮಾಡಲಾಯಿತು.

**ತೆಲಂಗಾಣದಲ್ಲಿ ರಾಹುಲ್ ಗಾಂಧಿ ವಾಗ್ದಾಳಿ**

# 'ಬಿಆರ್‌ಎಸ್ ಬಿಜೆಪಿಯ 'ಬಿ' ಟೀಂ'

ಖಮ್ಮಮ್, ತೆಲಂಗಾಣ (ಪಿಟಿಐ): ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್, ಪ್ರಧಾನಿ ನರೇಂದ್ರ ಮೋದಿ ಅವರ ಅಣತಿಯಂತೆ ಕೆಲಸ ಮಾಡುತ್ತಾರೆ. ರಾಜ್ಯದ ಆಡಳಿತಾರೂಢ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಬಿಜೆಪಿಯ 'ಬಿ' ಟೀಂ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ವಾಗ್ದಾಳಿ ನಡೆಸಿದರು.

ಇಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಬಿಆರ್‌ಎಸ್ ಪಕ್ಷವನ್ನು 'ಬಿಜೆಪಿ ರಿಶ್ತೇದಾರ್ (ಸಂಬಂಧಿಕರು) ಸಮಿತಿ' ಎಂದು ಕರೆದರು.

'ರಾವ್ ಮತ್ತು ಅವರ ಪಕ್ಷದ ನಾಯಕರ ಮೇಲಿರುವ ಭ್ರಷ್ಟಾಚಾರ ಪ್ರಕರಣಗಳು ಅವರು ಬಿಜೆಪಿ ಎದುರು ತಲೆಬಾಗುವಂತೆ ಮಾಡಿವೆ' ಎಂದು ಟೀಕಿಸಿದರು.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ವಿರೋಧ ಪಕ್ಷಗಳೆಲ್ಲ ಒಗ್ಗೂಡುವ ಪ್ರಯತ್ನ ಉಲ್ಲೇಖಿಸಿ ಮಾತನಾಡಿದ ಅವರು, 'ಬಿಆರ್‌ಎಸ್ ಇರುವ ಯಾವುದೇ ಗುಂಪಿನೊಂದಿಗೆ ಕಾಂಗ್ರೆಸ್ ಸೇರುವುದಿಲ್ಲ. ಸಭೆಯಲ್ಲಿ ಬಿಆರ್‌ಎಸ್ ಭಾಗಿಯಾದರೆ ನಾವು ಪಾಲ್ಗೊಳ್ಳುವುದಿಲ್ಲ. ಬಿಆರ್‌ಎಸ್ ನೊಂದಿಗೆ ವೇದಿಕೆ ಹಂಚಿಕೊಳ್ಳುವುದಿಲ್ಲ ಎಂದು ವಿರೋಧ ಪಕ್ಷಗಳ ನಾಯಕರಿಗೆ ತಿಳಿಸಿದ್ದೇವೆ' ಎಂದು ಹೇಳಿದರು.

'ಹಲವು ವಿಪಕ್ಷಗಳು ಈಚೆಗೆ ಪಟ್ನಾದಲ್ಲಿ ಸಭೆ ಸೇರಿದ್ದವು. ಶೀಘ್ರವೇ ಬೆಂಗಳೂರಿನಲ್ಲಿ ಮತ್ತೊಂದು ಸಭೆ ನಡೆಯಲಿದೆ. ಸಭೆಯಲ್ಲಿ ಬಿಆರ್‌ಎಸ್ ಸೇರಿದಂತೆ ಬಿಜೆಪಿಯೇತರ ಕೆಲವು ಪಕ್ಷಗಳು ಭಾಗಿಯಾಗುವುದಿಲ್ಲ' ಎಂದು ತಿಳಿಸಿದರು.

'ಸಂಸತ್ತಿನಲ್ಲಿ ಕಾಂಗ್ರೆಸ್ ಯಾವಾಗಲೂ ಬಿಜೆಪಿ ವಿರುದ್ಧ ಧ್ವನಿ ಎತ್ತುತ್ತದೆ. ಆದರೆ ಕೆಸಿಆರ್ ಪಕ್ಷ ಬಿಜೆಪಿಯ 'ಬಿ' ಟೀಂ. ಕೆಸಿಆರ್ ಅವರ ರಿಮೋಟ್ ಕಂಟ್ರೋಲ್ ಪ್ರಧಾನಿ ಮೋದಿ ಬಳಿ ಇದೆ' ಎಂದು ಹೇಳಿದರು.

'ಕರ್ನಾಟಕದಲ್ಲಿ ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭ್ರಷ್ಟ, ಬಡವರ ವಿರೋಧಿ ಸರ್ಕಾರದೊಂದಿಗೆ ಹೋರಾಡಿತು. ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ದಮನಿತರ ಬೆಂಬಲದಿಂದ ಬಿಜೆಪಿ ಸರ್ಕಾರವನ್ನು ಉರುಳಿಸಿದೆವು' ಎಂದು ಹೇಳಿದರು.

'ತೆಲಂಗಾಣದಲ್ಲೂ ಇಂಥದ್ದೇ ಗಾಳಿ ಬೀಸುತ್ತಿದೆ. ಒಂದು ಭಾಗದಲ್ಲಿ ಶ್ರೀಮಂತರು ಮತ್ತು ಪ್ರಭಾವಿಗಳು ಇದ್ದರೆ, ಇನ್ನೊಂದು ಕಡೆ ಬಡವರು, ಆದಿವಾಸಿಗಳು, ರೈತರು ಮತ್ತು ಸಣ್ಣ ವ್ಯಾಪಾರಿಗಳು ನಮ್ಮೊಂದಿಗಿದ್ದಾರೆ. ಕರ್ನಾಟಕದಲ್ಲಿ ಏನಾಯಿತೋ ಅದು ತೆಲಂಗಾಣದಲ್ಲಿ ಮರುಕಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಮುಂಚೆ ರಾಜ್ಯದಲ್ಲಿ ಬಿಆರ್‌ಎಸ್, ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಸ್ಪರ್ಧೆ ಇತ್ತು. ಆದರೆ ರಾಜ್ಯದಲ್ಲಿ ತಲೆ ಎತ್ತಲು ಬಿಜೆಪಿಗೆ ಸಾಧ್ಯವಾಗಲಿಲ್ಲ. ಅದರ ನಾಲ್ಕೂ ಚಕ್ರಗಳೂ ಪಂಕ್ಚರ್ ಆದವು. ಈಗ ಕಾಂಗ್ರೆಸ್ ಮತ್ತು ಬಿಜೆಪಿ 'ಬಿ' ಟೀಂ ಮಧ್ಯೆ ಸ್ಪರ್ಧೆ ಇದೆ ಎಂದು ಹೇಳಿದರು.

'ಕಾರ್ಯಕರ್ತರು ಪಕ್ಷದ ಸಿಂಹಗಳು ಮತ್ತು ಬೆನ್ನೆಲುಬಿದ್ದಂತೆ. ನಿಮ್ಮ ಬೆಂಬಲದಿಂದ ಬಿಆರ್‌ಎಸ್ ಪಕ್ಷವನ್ನು ಸೋಲಿಸಬಹುದು. ಭಾರತ ಜೋಡೊ ಯಾತ್ರೆ ಸಂದರ್ಭದಲ್ಲಿ ತೆಲಂಗಾಣದಲ್ಲಿ ಅಭೂತಪೂರ್ವ ಬೆಂಬಲ ದೊರಕಿತ್ತು. ಅದಕ್ಕಾಗಿ ಧನ್ಯವಾದ ಹೇಳಲು ಬಯಸುತ್ತೇನೆ' ಎಂದರು.

'ಭಾರತ ಜೋಡೊ ಯಾತ್ರೆಗೆ ಇಡೀ ದೇಶವೇ ಬೆಂಬಲ ನೀಡಿದೆ. ಈ ದೇಶದ ಜನರು ದ್ವೇಷಕ್ಕೆ ಆಸ್ಪದ ನೀಡುವುದಿಲ್ಲ. ಖಮ್ಮಮ್ ಮತದಾರರು ಯಾವಾಗಲೂ ಕಾಂಗ್ರೆಸ್ ಮತ್ತು ಅದರ ಸಿದ್ಧಾಂತವನ್ನು ಬೆಂಬಲಿಸಿದ್ದಾರೆ. ಇಂದು ಪಕ್ಷ ಸೇರಲು ಬಯಸಿರುವ ಎಲ್ಲ ನಾಯಕರಿಗೆ ಸ್ವಾಗತ' ಎಂದು ಹೇಳಿದರು.

ಬಿಆರ್‌ಎಸ್ ನಿಮ್ಮ ಮೇಲೆ ದಾಳಿ ನಡೆಸಬಹುದು, ಆದರೆ ಹೆದರದಿರಿ ಎಂದು ಪಕ್ಷದ ಕಾರ್ಯಕರ್ತರಿಗೆ ಧೈರ್ಯ ತುಂಬಿದರು.

**ಬಿಆರ್‌ಎಸ್ ಮಾಜಿ ಸಂಸದ ಕಾಂಗ್ರೆಸ್ ಸೇರ್ಪಡೆ:** ಬಿಆರ್‌ಎಸ್ ಮಾಜಿ ಸಂಸದ ಪಂಗುಲೇಟಿ ಶ್ರೀನಿವಾಸ್ ರೆಡ್ಡಿ ಅವರು ರಾಹುಲ್ ಗಾಂಧಿ ಅವರ ಸಮ್ಮುಖದಲ್ಲಿ ಭಾನುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ವೇಳೆ ತೆಲಂಗಾಣದ ಎಐಸಿಸಿ ಉಸ್ತುವಾರಿ ಮಾಣಿಕ್ ರಾವ್ ಠಾಕ್ರೆ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಎ.ರೇವಂತ್ ರೆಡ್ಡಿ, ಸಂಸದ ಎನ್.ಉತ್ತಮ್ ಕುಮಾರ್ ರೆಡ್ಡಿ ಮತ್ತಿತರರು ಭಾಗಿಯಾಗಿದ್ದರು.

ತೆಲಂಗಾಣದಲ್ಲಿ ನಡೆದ ಸಾರ್ವಜನಿಕ ರ‍್ಯಾಲಿಯಲ್ಲಿ ನೆರೆದಿದ್ದ ಜನಸ್ತೋಮ –ಪಿಟಿಐ ಚಿತ್ರ

## ಮಣಿಪುರ: ಮತ್ತೆ ನಾಲ್ಕು ಹತ್ಯೆ

ಗುವಾಹಟಿ: ರಾಜ್ಯದಲ್ಲಿ ಶಾಂತಿ ಕಾಪಾಡುವಂತೆ ಸರ್ಕಾರ ನಿರಂತರವಾಗಿ ಮನವಿ ಮಾಡುತ್ತಿರುವ ಹೊರತಾಗಿಯೂ ವಿಷ್ಣುಪುರ ಮತ್ತು ಚುರಾಚಂದ್‌ಪುರ ಜಿಲ್ಲೆಯಲ್ಲಿ ನಡೆದ ಪ್ರತ್ಯೇಕ ಗುಂಡಿನ ದಾಳಿಯಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ದುಷ್ಕರ್ಮಿಗಳು ಖೋಯಿಜುಮಂತಬಿ ಪರ್ವತ ಪ್ರದೇಶದಲ್ಲಿ ಶನಿವಾರ ಮಧ್ಯರಾತ್ರಿ 'ಗ್ರಾಮ ಸ್ವಯಂಸೇವಕರ' ಮೇಲೆ ಗುಂಡಿನ ದಾಳಿ ನಡೆಸಿ ಮೂವರನ್ನು ಹತ್ಯೆ ಮಾಡಿದ್ದಾರೆ. ಈ ಪ್ರದೇಶದಲ್ಲಿ ಪೊಲೀಸರು ಶೋಧ ನಡೆಸಿದ್ದು, ಕಿಡಿಗೇಡಿಗಳು ಪಲಾಯನಗೈದಿದ್ದಾರೆ ಎಂದು ಮಣಿಪುರ ಪೊಲೀಸ್ ನಿಯಂತ್ರಣ ಕೊಠಡಿ ತಿಳಿಸಿದೆ.

ಹತ್ಯೆಗೀಡಾದ ಮೂವರು ಮೈತೇಯಿ ಸಮುದಾಯದವರು ಎಂದು ಮೂಲಗಳು ತಿಳಿಸಿವೆ. ಆದರೆ ಪೊಲೀಸ್ ಹೇಳಿಕೆಯಲ್ಲಿ ಅವರ ಗುರುತನ್ನು ಬಹಿರಂಗಪಡಿಸಿಲ್ಲ.

ರಾಜ್ಯದ ಕೆಲವು ಪ್ರದೇಶಗಳಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದೆ. ಹಲವು ಜಿಲ್ಲೆಗಳಲ್ಲಿ ಪರಿಸ್ಥಿತಿ ಸಹಜವಾಗಿದೆ ಎಂದು ಪೊಲೀಸ್ ಹೇಳಿಕೆ ತಿಳಿಸಿದೆ.

ಚುರಾಚಂದಪುರದಲ್ಲಿ ಕಿಡಿಗೇಡಿಗಳು ನಡೆಸಿದ ದಾಳಿಯಲ್ಲಿ ಡೇವಿಡ್ ಹಮಾರ್ ಹತ್ಯೆಯಾಗಿದ್ದಾರೆ ಎಂದು ಕುಕಿ ಸಮುದಾಯದ ಸಂಘಟನೆ ಐಟಿಎಲ್‌ಎಫ್ ತಿಳಿಸಿದೆ. ಈ ಕೃತ್ಯದ ಹಿಂದೆ ಮೈತೇಯಿ ಗುಂಪಿನ ಕೈವಾಡವಿದೆ ಎಂದು ಅದು ಆರೋಪಿಸಿದೆ. ಆದರೆ ಪೊಲೀಸ್ ಹೇಳಿಕೆಯಲ್ಲಿ ಈ ಸಾವಿನ ಕುರಿತ ಉಲ್ಲೇಖ ಇಲ್ಲ.

**ರಾಷ್ಟ್ರೀಯ ಹೆದ್ದಾರಿ–2 ತಡೆ ವಾಪಸ್:** ಇಂಫಾಲ್– ನಾಗಾಲ್ಯಾಂಡ್‌ನ ದಿಮಾಪುರ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ–2 ತಡೆಯನ್ನು ವಾಪಸ್ ಪಡೆಯಲು ಕುಕಿ ಸಮುದಾಯ ಭಾನುವಾರ ಗುವಾಹಟಿಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಿದೆ.

### ಎರಡನೇ ಟೆಸ್ಟ್: ಸೋಲಿನಲ್ಲೂ ಮಿಂಚಿದ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್

# ಆ್ಯಷಸ್: ಆಸ್ಟ್ರೇಲಿಯಾಕ್ಕೆ ಜಯ

ಲಂಡನ್ (ಎಎಫ್‌ಪಿ): ಬೆನ್ ಸ್ಟೋಕ್ಸ್ ಅವರು ಭರ್ಜರಿ ಶತಕದ ಮೂಲಕ ಒಡ್ಡಿದ ಸವಾಲನ್ನು ಸಮರ್ಥವಾಗಿ ಬದಿಗೊತ್ತಿದ ಆಸ್ಟ್ರೇಲಿಯಾ ತಂಡ, ಆ್ಯಷಸ್ ಕ್ರಿಕೆಟ್ ಟೆಸ್ಟ್ ಸರಣಿಯ ಎರಡನೇ ಪಂದ್ಯವನ್ನು 43 ರನ್‌ಗಳಿಂದ ಗೆದ್ದುಕೊಂಡಿತು.

ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 371 ರನ್‌ಗಳ ಗುರಿ ಬೆನ್ನಟ್ಟಿದ ಇಂಗ್ಲೆಂಡ್, ಅಂತಿಮ ದಿನವಾದ ಭಾನುವಾರ 327 ರನ್‌ಗಳಿಗೆ ಅಲೌಟಾಯಿತು. ಐದು ಪಂದ್ಯಗಳ ಸರಣಿಯಲ್ಲಿ ಪ್ಯಾಟ್ ಕಮಿನ್ಸ್ ಬಳಗ 2–0 ಯಿಂದ ಮುನ್ನಡೆ ಗಳಿಸಿದೆ.

ನಾಯಕ ಬೆನ್ ಸ್ಟೋಕ್ಸ್ (155) ಸೊಗಸಾದ ಶತಕದ ಮೂಲಕ ಇಂಗ್ಲೆಂಡ್‌ಗೆ ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ ಅವರು ಔಟಾಗುವುದರೊಂದಿಗೆ ಆತಿಥೇಯ ತಂಡದ ಗೆಲುವಿನ ಆಸೆಯೂ ಕಮರಿತು. 214 ಎಸೆತಗಳನ್ನು ಎದುರಿಸಿದ ಸ್ಟೋಕ್ಸ್, ತಲಾ 9 ಬೌಂಡರಿ ಹಾಗೂ ಸಿಕ್ಸರ್ ಹೊಡೆದರು.

ಇಂಗ್ಲೆಂಡ್ ತಂಡ 4 ವಿಕೆಟ್‌ಗಳಿಗೆ 114 ರನ್‌ಗಳಿಂದ ಅಂತಿಮ ದಿನದಾಟ ಮುಂದುವರಿಸಿತ್ತು. 29 ರನ್‌ಗಳಿಂದ ಇನಿಂಗ್ಸ್ ಮುಂದುವರಿಸಿದ್ದ ಸ್ಟೋಕ್ಸ್ ಅವರು ಬೆನ್ ಡಕೆಟ್ (83) ಅವರೊಂದಿಗೆ ಐದನೇ ವಿಕೆಟ್‌ಗೆ 132 ರನ್ ಸೇರಿಸಿದರು.

ಡಕೆಟ್ ಔಟಾದ ಬಳಿಕ ಬೆನ್ನುಬೆನ್ನಿಗೆ ವಿಕೆಟ್‌ಗಳು ಬಿದ್ದವು. ಆದರೆ ಸ್ಟೋಕ್ಸ್ ಅಬ್ಬರದ ಆಟವಾಡಿ, ಎದುರಾಳಿ ಪಾಳೆಯದಲ್ಲಿ ಆತಂಕ ಮೂಡಿಸಿದರು. ಕ್ಯಾಮೆರಾನ್ ಗ್ರೀನ್ ಓವರ್‌ನಲ್ಲಿ ಹ್ಯಾಟ್ರಿಕ್ ಸಿಕ್ಸರ್ ಹೊಡೆದು ಶತಕ ಪೂರೈಸಿದರು. ಸ್ಟುವರ್ಟ್ ಬ್ರಾಡ್ (11) ಜತೆ ಏಳನೇ ವಿಕೆಟ್‌ಗೆ 108 ರನ್ ಕಲೆಹಾಕಿದರು. ಗೆಲುವಿಗೆ 70 ರನ್‌ಗಳು ಅಗತ್ಯವಿದ್ದಾಗ ಸ್ಟೋಕ್ಸ್ ಔಟಾದರು. ಕೊನೆಯ ಬ್ಯಾಟರ್‌ಗಳನ್ನು ಬೇಗನೇ ಔಟ್ ಮಾಡಿದ ಆಸ್ಟ್ರೇಲಿಯಾ, ಜಯ ಸಾಧಿಸಿತು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 416, ಇಂಗ್ಲೆಂಡ್: 325; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 279. ಇಂಗ್ಲೆಂಡ್: 81.3 ಓವರ್‌ಗಳಲ್ಲಿ 327 (ಬೆನ್ ಡಕೆಟ್ 83, ಬೆನ್ ಸ್ಟೋಕ್ಸ್ 155, ಜೋಶ್ ಟಂಗ್ 19, ಮಿಚೆಲ್ ಸ್ಟಾರ್ಕ್ 79ಕ್ಕೆ 3, ಪ್ಯಾಟ್ ಕಮಿನ್ಸ್ 69ಕ್ಕೆ 3, ಜೋಶ್ ಹ್ಯಾಜೆಲ್‌ವುಡ್ 80ಕ್ಕೆ 3) **ಫಲಿತಾಂಶ: ಆಸ್ಟ್ರೇಲಿಯಾಕ್ಕೆ 43 ರನ್ ಗೆಲುವು**

ಬೆನ್ ಸ್ಟೋಕ್ಸ್ (ಎಡ) ಅವರ ವಿಕೆಟ್ ಪಡೆದ ಜೋಶ್ ಹ್ಯಾಜೆಲ್‌ವುಡ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

### ಜಾನಿ ಬೆಸ್ಟೊ ಸ್ಟಂಪಿಂಗ್ ವಿವಾದ

ಇಂಗ್ಲೆಂಡ್‌ನ ಜಾನಿ ಬೆಸ್ಟೊ ಅವರನ್ನು ಆಸ್ಟ್ರೇಲಿಯಾದ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಸ್ಟಂಪ್ ಔಟ್ ಮಾಡಿದ ರೀತಿ ವಿವಾದಕ್ಕೆ ಕಾರಣವಾಯಿತು. ಕ್ಯಾಮೆರಾನ್ ಗ್ರೀನ್ ಬೌಲ್ ಮಾಡಿದ 52ನೇ ಓವರ್‌ನ ಕೊನೆಯ ಎಸೆತದಲ್ಲಿ ಬೌನ್ಸರ್‌ಅನ್ನು ಬೆಸ್ಟೊ, ಕೆಳಕ್ಕೆ ಬಾಗಿ ತಪ್ಪಿಸಿದಾಗ ಚೆಂಡು ಕ್ಯಾರಿ ಕೈಸೇರಿತು. ಓವರ್ ಮುಗಿದ ಕಾರಣ ಬೆಸ್ಟೊ, ನಾನ್ ಸ್ಟ್ರೈಕರ್‌ನಲ್ಲಿದ್ದ ಸ್ಟೋಕ್ಸ್ ಅವರೊಂದಿಗೆ ಮಾತನಾಡಲು ಕ್ರೀಸ್ ಬಿಟ್ಟು ಮುಂದೆ ನಡೆದರು. ಆದರೆ ಕ್ಯಾರಿ, ತಕ್ಷಣ ಸ್ಟಂಪ್‌ಗೆ ಚೆಂಡು ಎಸೆದು ಔಟ್‌ಗಾಗಿ ಮನವಿ ಮಾಡಿದರು.

ಮೈದಾನದ ಅಂಪೈರ್‌ಗಳು ಟಿ.ವಿ. ಅಂಪೈರ್ ಮೊರೆ ಹೋದರು. ರೀಪ್ಲೆ ವೀಕ್ಷಿಸಿದ ಟಿ.ವಿ ಅಂಪೈರ್ ಮರಾಯಸ್ ಎರಸ್ಮಸ್, ಔಟ್ ಎಂದು ತೀರ್ಪು ನೀಡಿದರು.

### ಬಾಂಗ್ಲಾ ಪ್ರವಾಸ: ಶ್ರೇಯಾಂಕಗೆ ಸಿಗದ ಅವಕಾಶ

ನವದೆಹಲಿ (ಪಿಟಿಐ): ಇದೇ 9ರಿಂದ ಆರಂಭವಾಗಲಿರುವ ಬಾಂಗ್ಲಾದೇಶದ ವಿರುದ್ಧದ ಟಿ20 ಮತ್ತು ಏಕದಿನ ಕ್ರಿಕೆಟ್ ಸರಣಿಗೆ ಭಾರತ ಮಹಿಳಾ ತಂಡವನ್ನು ಪ್ರಕಟಿಸಲಾಗಿದ್ದು, ವೇಗದ ಬೌಲರ್ ರೇಣುಕಾ ಸಿಂಗ್ ಮತ್ತು ಟಿಟಾ ಘೋಷ್ ಅವರನ್ನು ಕೈಬಿಡಲಾಗಿದೆ. ಯುವ ಆಫ್ ಸ್ಪಿನ್ನರ್, ಕನ್ನಡತಿ ಶ್ರೇಯಾಂಕ ಪಾಟೀಲ ಅವರಿಗೆ ಅವಕಾಶ ಲಭಿಸಿಲ್ಲ.

ಭಾರತ ತಂಡ ಮೂರು ಟಿ20 ಹಾಗೂ ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ನಾಯಕಿಯಾಗಿ ಹರ್ಮನ್‌ಪ್ರೀತ್ ಕೌರ್ ಮತ್ತು ಉಪ ನಾಯಕಿಯಾಗಿ ಸ್ಮೃತಿ ಮಂದಾನ ಮುಂದುವರಿದಿದ್ದಾರೆ.

ಮಹಿಳಾ ಎಮರ್ಜಿಂಗ್ ಏಷ್ಯಾ ಕಪ್ ಟೂರ್ನಿಯಲ್ಲಿ ಮಿಂಚಿದ್ದ ಶ್ರೇಯಾಂಕ ಪಾಟೀಲ ಅವರಿಗೆ ತಂಡದಲ್ಲಿ ಸ್ಥಾನ ಸಿಗಬಹುದು ಎಂದು ನಿರೀಕ್ಷಿಸಲಾಗಿತ್ತು. ರೇಣುಕಾ ಗಾಯಕ್ಕೊಳಗಾಗಿರುವ ಕಾರಣ ಸರಣಿಯಿಂದ ಕೈಬಿಡಲಾಗಿದೆ.

**ಭಾರತ ತಂಡ:** ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪ ನಾಯಕಿ), ದೀಪ್ತಿ ಶರ್ಮಾ, ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ಯಸ್ತಿಕಾ ಭಾಟಿಯಾ, ಹರ್ಲೀನ್ ಡಿಯೊಲ್, ದೇವಿಕಾ ವೈದ್ಯ, ಉಮಾ ಚೆಟ್ರಿ, ಅಮನ್‌ಜೋತ್ ಕೌರ್, ಪೂಜಾ ವಸ್ತ್ರಕರ್, ಮೇಘನಾ ಸಿಂಗ್, ಅಂಜಲಿ ಶರ್ವಾಣಿ, ಮೋನಿಕಾ ಪಟೇಲ್, ರಾಶಿ ಕನೋಜಿಯಾ, ಅನುಷಾ, ಮಿನ್ನು ಮಣಿ, ಸ್ನೇಹ ರಾಣಾ (ಏಕದಿನ ಸರಣಿಗೆ) ಮತ್ತು ಎಸ್.ಮೇಘನಾ (ಟಿ20 ಸರಣಿಗೆ)

ಎ.ಕೆ. ಲಿನೇಶಾ

ನೀನಾ ವೆಂಕಟೇಶ್

### ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್: ರಾಜ್ಯಕ್ಕೆ 3 ಚಿನ್ನ

# ಲಿನೇಶಾ, ನೀನಾ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎ.ಕೆ. ಲಿನೇಶಾ ಮತ್ತು ನೀನಾ ವೆಂಕಟೇಶ್ ಅವರು ಹೈದರಾಬಾದ್‌ನಲ್ಲಿ ಭಾನುವಾರ ಆರಂಭಗೊಂಡ 76ನೇ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಗಚ್ಚಿಬೌಲಿ ಕ್ರೀಡಾಂಗಣದ ಈಜುಕೊಳದಲ್ಲಿ ನಡೆದ ಮಹಿಳೆಯರ 200 ಮೀ. ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಲಿನೇಶಾ 2ನಿ.37.35 ಸೆ.ಗಳಲ್ಲಿ ಗುರಿ ತಲುಪಿದರು. 2022ರಲ್ಲಿ ತಾವೇ ನಿರ್ಮಿಸಿದ್ದ ದಾಖಲೆಯನ್ನು (2 ನಿ. 39.38 ಸೆ.) ಉತ್ತಮ ಪಡಿಸಿಕೊಂಡರು.

ಇದೇ ಸ್ಪರ್ಧೆಯಲ್ಲಿ ರಾಜ್ಯದ ಎಸ್.ಲಕ್ಷ್ಯ (ಕಾಲ:2ನಿ.41.13 ಸೆ) ಬೆಳ್ಳಿಯ ಸಾಧನೆ ಮಾಡಿದರು.

ಮಹಿಳೆಯರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ನೀನಾ ವೆಂಕಟೇಶ್ 27.74 ಸೆ.ಗಳಲ್ಲಿ ಗುರಿ ತಲುಪಿ, ದಿವ್ಯಾ ಸಟಿಜಾ (28.33 ಸೆ) ಅವರು 2019 ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು ಮುರಿದರು. ಇದೇ ಸ್ಪರ್ಧೆಯಲ್ಲಿ ಮಾನವಿ ವರ್ಮಾ (ಕಾಲ:28.31ಸೆ.) ಕಂಚು ಗೆದ್ದರು.

ಪುರುಷರ 4x200 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕ ತಂಡ (ಸೋಹನ್ ಗಂಗುಲಿ, ಶಿವಾಂಕ್ ವಿಶ್ವನಾಥ್, ಕಾಶಿಶ್ ಜಾರ್ಜ್ ಮಾಥ್ಯೂ ಮತ್ತು ಅನೀಶ್ ಎಸ್. ಗೌಡ) 7ನಿ.38.39 ಸೆ.ಗಳೊಂದಿಗೆ ಗುರಿ ತಲುಪಿ ಚಿನ್ನದ ಸಾಧನೆ ಮಾಡಿದರು.

ಪುರುಷರ 400 ಮೀ. ಫ್ರೀಸ್ಟೈಲ್‌ನಲ್ಲಿ ಅನೀಶ್ ಎಸ್. ಗೌಡ (ಕಾಲ: 3ನಿ.57.86 ಸೆ) ಕಂಚು ಗೆದ್ದರೆ, ಶಿವಾಂಕ್ ವಿಶ್ವನಾಥ್ 7ನೇ ಸ್ಥಾನ ಪಡೆದರು.

200 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಮಣಿಕಂಠ ಲಕ್ಷ್ಮಣ್ (2ನಿ.22.59 ಸೆ) ಮತ್ತು ಕಲ್ಪ್ ಎಸ್. ಬೊಹ್ರಾ ಕ್ರಮವಾಗಿ 3 ಹಾಗೂ 4ನೇ ಸ್ಥಾನ ಪಡೆದರು. 100 ಮೀ.ಬ್ಯಾಕ್ ಸ್ಟ್ರೋಕ್‌ನಲ್ಲಿ ಉತ್ಕರ್ಷ್ ಎಸ್. ಪಾಟೀಲ (ಕಾಲ: 57.66 ಸೆ.) 2ನೇ ಸ್ಥಾನ, ಎಸ್.ಶಿವ 5ನೇ ಸ್ಥಾನ ಪಡೆದರು.

ಮಹಿಳೆಯರ 100 ಮೀ. ಬ್ಯಾಕ್ ಸ್ಟ್ರೋಕ್‌ನಲ್ಲಿ ಸುವನಾ ಸಿ. ಭಾಸ್ಕರ್ 3ನೇ, ರಿಧಿಮಾ ವೀರೇಂದ್ರ ಕುಮಾರ್ 4ನೇ ಸ್ಥಾನ ಪಡೆದರು. 400 ಮೀ. ಫ್ರೀಸ್ಟೈಲ್‌ನಲ್ಲಿ ಶಿರಿನ್ 4ನೇ, ಅಶ್ಮಿತಾ ಚಂದ್ರ 7ನೇ ಸ್ಥಾನ ಪಡೆದರು.

### ಭಾರತಕ್ಕೆ ಪ್ರಯಾಣ: ಅನುಮತಿ ಕೋರಿ ಪಿಸಿಬಿ ಪತ್ರ

ನವದೆಹಲಿ (ಪಿಟಿಐ): ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗಾಗಿ ಭಾರತಕ್ಕೆ ಪ್ರಯಾಣಿಸಲು ಅಧಿಕೃತ ಅನುಮತಿ ಕೋರಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ), ಪ್ರಧಾನಿ ಶೆಹಬಾಜ್ ಷರೀಫ್ ಅವರಿಗೆ ಪತ್ರ ಬರೆದಿದೆ ಎಂದು ವರದಿಯೊಂದು ತಿಳಿಸಿದೆ.

'ಪಾಕಿಸ್ತಾನ ತಂಡವು ಭಾರತಕ್ಕೆ ತೆರಳಲು ಅವಕಾಶ ಇದೆಯೇ? ಅವಕಾಶ ಇದೆಯಾದರೆ, ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನದ ಪಂದ್ಯಗಳಿಗೆ ನಿಗದಿಪಡಿಸಿರುವ ಐದು ತಾಣಗಳಿಗೆ ಸಂಬಂಧಿಸಿದಂತೆ ಏನಾದರೂ ಆಕ್ಷೇಪ ಇದೆಯೇ' ಎಂಬ ಮಾಹಿತಿಯನ್ನು ಪಿಸಿಬಿ ಪತ್ರದಲ್ಲಿ ಕೇಳಿರುವುದಾಗಿ 'ಇಎಸ್‌ಪಿಎನ್‌ಕ್ರಿಕ್‌ಇನ್ಫೊ' ವರದಿ ಮಾಡಿದೆ.

'ವಿಶ್ವಕಪ್ ವೇಳಾಪಟ್ಟಿ ಬಿಡುಗಡೆಯಾದ ಕೂಡಲೇ ನಾವು ಅನುಮತಿ ಕೋರಿ ಪ್ರಧಾನಿ ಹಾಗೂ ವಿದೇಶಾಂಗ ಸಚಿವಾಲಯಕ್ಕೆ ಪತ್ರ ಬರೆದಿದ್ದೇವೆ' ಎಂದು ಪಿಸಿಬಿ ಮೂಲಗಳು ತಿಳಿಸಿವೆ.

# ರಾಷ್ಟ್ರೀಯ ತಂಡಕ್ಕಿಂತ ಐಪಿಎಲ್ ಲಾಭದಾಯಕ!

### 2 ತಿಂಗಳಲ್ಲಿ ಹಲವು ಪಟ್ಟು ಹೆಚ್ಚು ಗಳಿಸುವ ವಿಂಡೀಸ್‌ನ ಪೂರನ್, ಹೆಟ್ಮೆಯರ್

ನವದೆಹಲಿ (ಪಿಟಿಐ): ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಆಡಿದ್ದಕ್ಕೆ ಶಿಮ್ರೊನ್ ಹೆಟ್ಮೆಯರ್ ಐಪಿಎಲ್ ಸಂಭಾವನೆಯಾಗಿ ₹8.50 ಕೋಟಿ ಗಳಿಸಿದರೆ, ತಮ್ಮನ್ನು ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲೇ ಉಳಿಸಿಕೊಂಡಿದ್ದಕ್ಕೆ ಆ್ಯಂಡ್ರೆ ರಸೆಲ್ ₹16 ಕೋಟಿ ಪಡೆದರು. ಇದು ಕ್ರಿಕೆಟ್‌ನಲ್ಲಿ ಹಣದ ಹೊಳೆ ಬೀರುತ್ತಿರುವ ಪ್ರಭಾವವನ್ನು ಸೂಚಿಸುತ್ತದೆ. ಕೆರಿಬಿಯನ್ ಆಟಗಾರರಿಗೆ ವೆಸ್ಟ್ ಇಂಡೀಸ್ ತಂಡಕ್ಕೆ ಆಡುವುದು ಹಿಂದಿನಂತೆ ಸ್ಫೂರ್ತಿದಾಯಕ ಮತ್ತು ಪ್ರತಿಷ್ಠೆಯ ಅಂಶವಾಗಿ ಉಳಿದಿಲ್ಲ.

ದುಡ್ಡೇ ದೊಡ್ಡಪ್ಪ ಆಗಿರುವ ಕಾಲದಲ್ಲಿ ವೆಸ್ಟ್ ಇಂಡೀಸ್ ಕ್ರಿಕೆಟ್ ಆಟಗಾರರು ಇದರಿಂದ ಹೊರತಾಗಿಲ್ಲ. ಈ ಅಂಶವೇ ಪ್ರಮುಖ ಆಟಗಾರರನ್ನು ವರ್ಷವಿಡಿ ದೇಶಿಯ ಕ್ರಿಕೆಟ್‌ನಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳುವಲ್ಲಿ ಕ್ರಿಕೆಟ್ ವೆಸ್ಟ್ ಇಂಡೀಸ್ (ಸಿಡಬ್ಲ್ಯುಐ)ಗೆ ದೊಡ್ಡ ಅಡಚಣೆಯಾಗಿ ಮಾರ್ಪಟ್ಟಿದೆ.

ಹಾಲಿ ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ವೆಸ್ಟ್ ಇಂಡೀಸ್ ತಂಡಕ್ಕೆ, ಹೆಟ್ಮೆಯರ್, ಆ್ಯಂಡ್ರೆ ರಸೆಲ್ ಅಥವಾ ಸುನೀಲ್ ನಾರಾಯಣ್ ಅವರ ಸೇವೆ ಲಭ್ಯವಿರಲಿಲ್ಲ. ಕ್ರಿಕೆಟ್ ವೆಸ್ಟ್ ಇಂಡೀಸ್ ಕಳೆದ ವರ್ಷ ಬಿಡುಗಡೆ ಮಾಡಿದ 18 ಆಟಗಾರರ ಕೇಂದ್ರೀಯ ಗುತ್ತಿಗೆ ಪಟ್ಟಿಯಲ್ಲಿ ಇವರು ಯಾರೂ ಇರಲಿಲ್ಲ. ವರ್ಷವಿಡೀ ಬೇರೆ ಬೇರೆ ಕಡೆ ನಡೆಯುವ ಲೀಗ್‌ಗಳಲ್ಲಿ ಆಡುವುದಕ್ಕೆ ಆದ್ಯತೆ ನೀಡಿ, ರಾಷ್ಟ್ರೀಯ ತಂಡದ ಆಯ್ಕೆ ವೇಳೆ ಸ್ವಯಂಪ್ರೇರಣೆಯಿಂದ ಹಿಂದೆ ಸರಿದರು.

ಲಖನೌ ಸೂಪರ್‌ಜೈಂಟ್ಸ್ ತಂಡಕ್ಕೆ ಈ ವರ್ಷ ಬರೋಬರಿ ₹16 ಕೋಟಿ ಒಪ್ಪಂದಕ್ಕೆ ಆಡಿದ್ದ ನಿಕೋಲಸ್ ಪೂರನ್, ಅರ್ಹತಾ ಟೂರ್ನಿಯಲ್ಲಿ ಆಡಿ ಒಂದು ಶತಕವನ್ನೇನೊ ಹೊಡೆದರು. ಆದರೆ ಕೋಟ್ಯಂತರ ರೂಪಾಯಿ ಹರಿಸುವ ಐಪಿಎಲ್ ಅಥವಾ ಎಸ್‌ಎ ಟಿ–20 (ದಕ್ಷಿಣ ಆಫ್ರಿಕದ ಲೀಗ್) ಲೀಗ್ ಬದಲು ರಾಷ್ಟ್ರೀಯ ತಂಡಕ್ಕೆ ಆಡುವಂತೆ ಪ್ರೇರಣೆ ನೀಡುವಲ್ಲಿ ಕೆರಿಬಿಯನ್ ಕ್ರಿಕೆಟ್ ವ್ಯವಸ್ಥೆ ಎಷ್ಟು ಕಾಲ ಮನವೊಲಿಸಲು ಸಾಧ್ಯ? ಇದರ ಜೊತೆಗೆ ಬಿಗ್ ಬ್ಯಾಷ್ ಲೀಗ್, ಕೆರಿಬಿಯನ್ ಪ್ರೀಮಿಯರ್ ಲೀಗ್‌ಗಳ ಆಕರ್ಷಣೆ ಇರುವುದರಿಂದ ಪೂರನ್‌ರಂಥ ಆಟಗಾರರನ್ನು ರಾಷ್ಟ್ರೀಯ ತಂಡದಲ್ಲೇ ಹಿಡಿದಿಟ್ಟುಕೊಳ್ಳುವುದು ಕಷ್ಟ.

ಇಎಸ್‌ಪಿಎನ್ ಕ್ರಿಕ್ ಇನ್ಫೊದಲ್ಲಿ 2017ರಲ್ಲಿ ದಾಖಲಾದ ಕೊನೆಯ ಅಧಿಕೃತ ಮಾಹಿತಿಗಳ ಪ್ರಕಾರ ವೆಸ್ಟ್ ಇಂಡೀಸ್ ಆಟಗಾರರಿಗೆ ಪ್ರತಿ ಟೆಸ್ಟ್ ಪಂದ್ಯಕ್ಕೆ ಸಿಗುವ ಹಣ ₹4.72 ಲಕ್ಷ. ಏಕದಿನ ಪಂದ್ಯಕ್ಕೆ ₹1.88 ಲಕ್ಷ ಮತ್ತು ಟಿ–20 ಪಂದ್ಯಕ್ಕೆ 1.42 ಲಕ್ಷ. ಆದರೆ ಇತ್ತೀಚಿನ ವರ್ಷಗಳಲ್ಲಿ ಆಟಗಾರರಿಗೆ ನೀಡುವ ಮೊತ್ತವನ್ನು ಪರಿಷ್ಕರಿಸಲಾಗಿದೆಯೇ ಎಂಬ ಮಾಹಿತಿ ಎಲ್ಲೂ ಲಭ್ಯವಿಲ್ಲ. ವಿಂಡೀಸ್ ಆಟಗಾರರು ಪಡೆಯುವ ಮೊತ್ತ, ಭಾರತದ ಆಟಗಾರರು ಪಡೆಯುವ ಮೊತ್ತಕ್ಕಿಂತ ಮೂರೂವರೆಯಿಂದ ನಾಲ್ಕು ಪಟ್ಟು ಕಡಿಮೆ. ಭಾರತದ ಆಟಗಾರರು ಪ್ರತಿ ಟೆಸ್ಟ್‌ಗೆ ₹15 ಲಕ್ಷ, ಏಕದಿನ ಪಂದ್ಯಕ್ಕೆ ₹8 ಲಕ್ಷ, ಟಿ–20 ಪಂದ್ಯಕ್ಕೆ ₹ 4 ಲಕ್ಷ ಪಡೆಯುತ್ತಾರೆ.

ವೆಸ್ಟ್ ಇಂಡೀಸ್‌ನಲ್ಲಿ ಕೇಂದ್ರೀಯ ಗುತ್ತಿಗೆ ವ್ಯವಸ್ಥೆ ಇದ್ದು, ಎರಡು ಮಾದರಿಯಲ್ಲಿ ಆಡುವ ಆಟಗಾರರು ಕಡೇಪಕ್ಷ ₹1.97 ಕೋಟಿ ಸಂಪಾದಿಸುತ್ತಾರೆ. ಮೂರೂ ಮಾದರಿಯಲ್ಲಿ ಆಡುವ ಆಟಗಾರರಿಗೆ ₹ 2.5 ಕೋಟಿ ಮೊತ್ತ ನಿಗದಿಯಾಗಿದೆ. ಇದು ಪಂದ್ಯ ಶುಲ್ಕ ಸೇರಿ.

### 'ಕೆಲಕಾಲದಿಂದ ಕುಸಿತದ ಸಂಕೇತ : ಹಿನ್ನಡೆಗೆ ಬ್ರಾಥ್‌ವೇಟ್ ವಿಶ್ಲೇಷಣೆ'

ಹರಾರೆ (ರಾಯಿಟರ್ಸ್): ಏಕದಿನ ವಿಶ್ವಕಪ್‌ಗೆ ಅರ್ಹತೆ ಪಡೆಯಲು ವಿಫಲವಾಗುವ ಮೂಲಕ ವೆಸ್ಟ್ ಇಂಡೀಸ್ ತಂಡ ಅಧಃಪತನಕ್ಕೆ ಇಳಿದಿದೆ. ಆದರೆ ತಂಡ ಕುಸಿಯುತ್ತಿರುವ ಸಾಗುತ್ತಿರುವ ಸಂಕೇತಗಳು ಕೆಲವು ಸಮಯದಿಂದ ಕಂಡುಬಂದಿದ್ದವು ಎಂದು ಮಾಜಿ ನಾಯಕ ಕಾರ್ಲೋಸ್ ಬ್ರಾಥ್‌ವೇಟ್ ಹೇಳಿದ್ದಾರೆ.

ಸೂಪರ್‌ಸಿಕ್ಸ್ ಪಂದ್ಯದಲ್ಲಿ ಶನಿವಾರ ಸ್ಕಾಟ್ಲೆಂಡ್ ಎದುರು ಹೀನಾಯ ಸೋಲಿನಿಂದಾಗಿ ವೆಸ್ಟ್ ಇಂಡೀಸ್ ತಂಡದ ವಿಶ್ವಕಪ್ ಅರ್ಹತೆ ಬಾಗಿಲು ಮುಚ್ಚಿತ್ತು.

'ಈ ಹಿನ್ನಡೆಯ ಸೂಚನೆಗಳು ದೀರ್ಘ ಕಾಲದಿಂದ ಕಂಡುಬಂದಿದೆ. ಕಳೆದ ವರ್ಷ ಇನ್ನೊಂದು ಮಾದರಿಯ ಟಿ–20 ವಿಶ್ವಕಪ್‌ನಲ್ಲೂ ತಂಡವು (ಸೂಪರ್ 12 ಹಂತಕ್ಕೇರಲು) ವಿಫಲವಾಗಿತ್ತು' ಎಂದು ಐಸಿಸಿಯ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾರ್ಲೋಸ್ ಬ್ರಾಥ್‌ವೇಟ್

2016ರಲ್ಲಿ ವೆಸ್ಟ್ ಇಂಡೀಸ್ ಟಿ–20 ವಿಶ್ವಕಪ್ ಗೆಲ್ಲುವಲ್ಲಿ ಬ್ರಾಥ್‌ವೇಟ್ ಪ್ರಮುಖ ಪಾತ್ರ ವಹಿಸಿದ್ದರು. 'ಇದು ಅತ್ಯಂತ ಕನಿಷ್ಠ ಮಟ್ಟ' ಎಂದಿದ್ದಾರೆ.

**ಹೊಸದಲ್ಲ– ಬಿಷಪ್:** ಯುವ ಆಟಗಾರರಿರುವ ಈಗಿನ ತಂಡ ಆಡುವುದಕ್ಕಿಂತ ಬಹಳ ಹಿಂದೆಯೇ ಸಮಸ್ಯೆಗಳು ಆರಂಭವಾಗಿದ್ದವು ಎಂದು ಮಾಜಿ ವೇಗದ ಬೌಲರ್ ಇಯಾನ್ ಬಿಷಪ್ ಅಭಿಪ್ರಾಯಪಟ್ಟಿದ್ದಾರೆ. 'ಸುಮಾರು ಒಂದು ದಶಕದಿಂದ ನಾವು ಏಕದಿನ ಕ್ರಿಕೆಟ್‌ನಲ್ಲಿ ಪ್ರಬಲ ಕ್ರಿಕೆಟ್ ರಾಷ್ಟ್ರಗಳ ವಿರುದ್ಧ ಸ್ಥಿರ ಪ್ರದರ್ಶನ ನೀಡಲು ವಿಫಲರಾಗಿದ್ದೇವೆ' ಎಂದು ಕ್ರಿಕೆಟ್ ವೆಬ್‌ಸೈಟ್ 'ಕ್ರಿಕ್ ಇನ್ಫೋ'ಗೆ ತಿಳಿಸಿದ್ದಾರೆ.

### ವಿಂಬಲ್ಡನ್ ಟೆನಿಸ್ ಟೂರ್ನಿ ಇಂದಿನಿಂದ

# ಜೊಕೊವಿಚ್ ಮೇಲೆ ಚಿತ್ತ

ಲಂಡನ್ (ಎಎಫ್‌ಪಿ): ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಈ ವರ್ಷದ ಮೂರನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯೊಂದಿಗೆ ಸೋಮವಾರ ಇಲ್ಲಿ ಆರಂಭವಾಗಲಿರುವ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಫ್ರೆಂಚ್ ಓಪನ್ ಜಯಿಸಿ ದಾಖಲೆಯ 23ನೇ ಗ್ರ್ಯಾನ್‌ಸ್ಲಾಮ್ ಗೆದ್ದ ಆತ್ಮವಿಶ್ವಾಸದಲ್ಲಿರುವ ಅವರು ಮೊದಲ ಸುತ್ತಿನಲ್ಲಿ 67ನೇ ರ‍್ಯಾಂಕ್‌ನ ಆಟಗಾರ ಅರ್ಜೆಂಟೀನಾದ ಪೆಡ್ರಿ ಕಾಚಿನ್ ವಿರುದ್ಧ ಹಣಾಹಣಿ ನಡೆಸುವರು. 36 ವರ್ಷದ ಜೊಕೊವಿಚ್ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಏಳು ಸಲ ಚಾಂಪಿಯನ್ ಆಗಿದ್ದಾರೆ. ಈ ಬಾರಿ ಕಿರೀಟ ಮುಡಿಗೇರಿಸಿದರೆ, ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್ ಅವರ ಎಂಟು ಪ್ರಶಸ್ತಿಗಳ ದಾಖಲೆ ಸರಿಗಟ್ಟಲಿದ್ದಾರೆ.

ಋತುವಿನ ಎಲ್ಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸುವ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಳ್ಳಬೇಕಾದರೆ ಸರ್ಬಿಯದ ಆಟಗಾರನಿಗೆ ಇಲ್ಲಿ ಗೆಲುವು ಅನಿವಾರ್ಯ. ಅವರು ಈಗಾಗಲೇ ಆಸ್ಟ್ರೇಲಿಯಾ ಓಪನ್ ಮತ್ತು ಫ್ರೆಂಚ್ ಓಪನ್ ಗೆದ್ದಿದ್ದಾರೆ. ರಾಡ್ ಲೇವರ್ (1969 ರಲ್ಲಿ) ಬಳಿಕ ಯಾರೂ ಒಂದೇ ವರ್ಷ ಎಲ್ಲ ನಾಲ್ಕೂ ಗ್ರ್ಯಾನ್‌ಸ್ಲಾಮ್ ಜಯಿಸಿದ ಸಾಧನೆ ಮಾಡಿಲ್ಲ.

ನೊವಾಕ್ ಜೊಕೊವಿಚ್

ಜೊಕೊವಿಚ್‌ಗೆ ಅಗ್ರಶ್ರೇಯಾಂಕದ ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರಿಂದ ಪ್ರಬಲ ಪೈಪೋಟಿ ಎದುರಾಗುವ ಸಾಧ್ಯತೆಯಿದೆ. ಕಳೆದ ವಾರ ಲಂಡನ್‌ನಲ್ಲಿ ನಡೆದಿದ್ದ ಕ್ವೀನ್ಸ್ ಟೆನಿಸ್ ಟೂರ್ನಿ ಗೆದ್ದಿರುವ ಅಲ್ಕರಾಜ್, ತಕ್ಕ ತಯಾರಿಯೊಂದಿಗೆ ವಿಂಬಲ್ಡನ್‌ನಲ್ಲಿ ಆಡಲಿದ್ದಾರೆ.

**ಆತ್ಮವಿಶ್ವಾಸದಲ್ಲಿ ಶ್ವಾಂಟೆಕ್:** ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಪೋಲೆಂಡ್‌ನ ಇಗಾ ಶ್ವಾಂಟೆಕ್, ಮೊದಲ ಸುತ್ತಿನಲ್ಲಿ ಚೀನಾದ ಝು ಲಿನ್ ಅವರ ಸವಾಲು ಎದುರಿಸಲಿದ್ದಾರೆ.

**ವೀನಸ್ ಕಣಕ್ಕೆ:** 43 ವರ್ಷದ ಆಟಗಾರ್ತಿ ಅಮೆರಿಕದ ವೀನಸ್ ವಿಲಿಯಮ್ಸ್ ಅವರು ಮತ್ತೆ ವಿಂಬಲ್ಡನ್‌ನಲ್ಲಿ ಆಡಲಿರುವುದು ಕುತೂಹಲ ಮೂಡಿಸಿದೆ. ವೀನಸ್ 26 ವರ್ಷಗಳ ಹಿಂದೆ ಇಲ್ಲಿ ಪದಾರ್ಪಣೆ ಮಾಡಿದ್ದರು. ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿರುವ ಅವರು ಮೊದಲ ಸುತ್ತಿನಲ್ಲಿ ಎಲಿನಾ ಸ್ವಿಟೊಲಿನಾ ಅವರ ಸವಾಲು ಎದುರಿಸುವರು.

## ಯೂಕಿಗೆ ಎಟಿಪಿ ಡಬಲ್ಸ್ ಕಿರೀಟ

ಮಯೋರ್ಕ, ಸ್ಪೇನ್ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಅವರು ಎಟಿಪಿ ವಿಶ್ವ ಟೂರ್‌ನ ಚೊಚ್ಚಲ ಪ್ರಶಸ್ತಿ ಗೆದ್ದುಕೊಂಡರು.

ಯೂಕಿ ಮತ್ತು ದಕ್ಷಿಣ ಆಫ್ರಿಕಾದ ಲಾಯ್ಡ್ ಹ್ಯಾರಿಸ್ ಅವರು ಶನಿವಾರ ಇಲ್ಲಿ ಕೊನೆಗೊಂಡ ಮಯೋರ್ಕ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಈ ಜೋಡಿ ಫೈನಲ್‌ನಲ್ಲಿ 6–3, 6–4 ರಲ್ಲಿ ನೆದರ್ಲೆಂಡ್ಸ್‌ನ ರಾಬಿನ್ ಹಾಸ್ ಮತ್ತು ಆಸ್ಟ್ರಿಯದ ಫಿಲಿಪ್ ಓಸ್ವಾಲ್ಡ್ ಎದುರು ಗೆದ್ದಿತು. ಎಟಿಪಿ ಡಬಲ್ಸ್ ರ‍್ಯಾಂಕಿಂಗ್‌ನಲ್ಲಿ 75ನೇ ಸ್ಥಾನದಲ್ಲಿದ್ದ ಯೂಕಿ, ಈ ಗೆಲುವಿನ ಮೂಲಕ 58ನೇ ಸ್ಥಾನಕ್ಕೇರಲಿದ್ದಾರೆ. ಇದು ವೃತ್ತಿಜೀವನದ ಅತ್ಯುತ್ತಮ ರ‍್ಯಾಂಕ್ ಎನಿಸಲಿದೆ.

'ಹುಲ್ಲುಹಾಸಿನ ಅಂಗಳದಲ್ಲಿ ನಡೆದ ಈ ಟೂರ್ನಿಯನ್ನು ಎದುರಾಳಿಗಳಿಗೆ ಒಂದೂ ಸೆಟ್ ಬಿಟ್ಟುಕೊಡದೆ ಗೆದ್ದಿರುವುದು ದೊಡ್ಡ ಸಾಧನೆಯೇ ಸರಿ' ಎಂದು ಮಂಗಳವಾರ 31ನೇ ಹುಟ್ಟುಹಬ್ಬ ಆಚರಿಸಲಿರುವ ಯೂಕಿ ಪ್ರತಿಕ್ರಿಯಿಸಿದ್ದಾರೆ.

ಹಲವು ಸಲ ಗಾಯದಿಂದ ಬಳಲಿದ್ದ ಯೂಕಿ ಅವರು ಸಿಂಗಲ್ಸ್ ವಿಭಾಗವನ್ನು ತೊರೆದು, ಡಬಲ್ಸ್‌ನಲ್ಲಿ ಆಡುತ್ತಿದ್ದಾರೆ. ಭಾರತದ ಸಾಕೇತ್ ಮೈನೇನಿ ಜತೆ ಆಡಿದ್ದ ಅವರು ಎರಡು ಚಾಲೆಂಜರ್ ಟೂರ್ನಿಗಳನ್ನು ಗೆದ್ದುಕೊಂಡಿದ್ದರು. ಸಾಕೇತ್ ವಿಶ್ರಾಂತಿ ಬಯಸಿದ್ದರಿಂದ, ಮಯೋರ್ಕ ಟೂರ್ನಿಯಲ್ಲಿ ಹ್ಯಾರಿಸ್ ಜತೆ ಆಡಿದ್ದರು. ಆದರೆ ವಿಂಬಲ್ಡನ್ ಟೂರ್ನಿಯಲ್ಲಿ ಸಾಕೇತ್ ಜತೆ ಆಡುವುದಾಗಿ ಯೂಕಿ ಹೇಳಿದ್ದಾರೆ.

ಕಶ್ವಿ ಸುನಿಲ್

## ಟೆನಿಸ್: ಕಶ್ವಿ ಸುನಿಲ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಕಶ್ವಿ ಸುನಿಲ್ ಅವರು ತಮಿಳುನಾಡಿನ ತಿರುಚಿಯಲ್ಲಿ ನಡೆದ ಎಐಟಿಎ 16 ವರ್ಷದೊಳಗಿನವರ ರಾಷ್ಟ್ರೀಯ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಫೈನಲ್ ಪಂದ್ಯದಲ್ಲಿ ಮಂಡ್ಯದ ಆಟಗಾರ್ತಿ ಕಶ್ವಿ 6–3, 6–3ರಿಂದ ನಾಲ್ಕನೇ ಶ್ರೇಯಾಂಕದ ಶ್ರೀ ಶೈಲೇಶ್ವರಿ ಅವರನ್ನು ಮಣಿಸಿದರು. ಶ್ರೇಯಾಂಕರಹಿತ ಆಟಗಾರ್ತಿಯಾಗಿದ್ದ ಕಶ್ವಿ ಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಸವಿತಾ ಭುವನೇಶ್ವರಂ ಮೇಲೆ 2–6,6–4, 6–2 ರಿಂದ ಜಯಗಳಿಸಿ ಅಚ್ಚರಿಯ ಫಲಿತಾಂಶ ನೀಡಿದ್ದರು. ಅವರು ಮಂಡ್ಯದ ಟಾಪ್‌ಸರ್ವ್ ಟೆನಿಸ್ ಅಕಾಡೆಮಿಯಲ್ಲಿ ಕೋಚ್ ಮಂಜುನಾಥ್ ಅವರಿಂದ ತರಬೇತಿಯನ್ನು ಪಡೆಯುತ್ತಿದ್ದಾರೆ.

## ಬೆಂಗಳೂರು ಸ್ಪೇಸ್ ಜಾಮ್ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ಸ್ಪೇಸ್ ಜಾಮ್ ತಂಡವು ಇಲ್ಲಿ ನಡೆದ ಐಎನ್‌ಬಿಎಲ್ 3x3 ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಮಂಗಳೂರಿನ ಡ್ರಾಪ್ ಸ್ಟೆಪ್ ತಂಡವನ್ನು 21–15ರಿಂದ ಮಣಿಸಿತು.

ಮಹಿಳೆಯರ ವಿಭಾಗದಲ್ಲಿ ಕೊಚ್ಚಿ ಬಾಲರ್ಸ್ ತಂಡವು 21–19ರಿಂದ ಬೆಂಗಳೂರು ಬೀಗಲ್ಸ್ ತಂಡವನ್ನು ಸೋಲಿಸಿ, ಚಾಂಪಿಯನ್ ಆಯಿತು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ 'ದಿ ಚೀಫ್ ಮಿನಿಸ್ಟರ್ಸ್ ಕಪ್'ನಲ್ಲಿ ಗೆದ್ದ 'ಆಲ್ ಅಟ್ರ್ಯಾಕ್ಟಿವ್' ಕುದುರೆಯ ತರಬೇತುದಾರರಾದ ಬಿ.ಪೃಥ್ವಿರಾಜ್ (ಬಲ) ಅವರಿಗೆ ಟರ್ಫ್ ಕ್ಲಬ್ ಅಧ್ಯಕ್ಷ ಶಿವ್‌ಕುಮಾರ್ ಖೇಣಿ (ಎಡ) ಟ್ರೋಫಿ ವಿತರಿಸಿದರು. ಬಿಟಿಸಿ ಮ್ಯಾನೇಜಿಂಗ್ ಕಮಿಟಿ ಸದಸ್ಯ ಅರವಿಂದ್ ರಾಘವನ್ ಇದ್ದಾರೆ –ಪ್ರಜಾವಾಣಿ ಚಿತ್ರ

# ಏಕದಿನ ವಿಶ್ವಕಪ್‌ಗೆ ಶ್ರೀಲಂಕಾ ಅರ್ಹತೆ

ಹರಾರೆ (ರಾಯಿಟರ್ಸ್): ಪಥುಮ್ ನಿಸ್ಸಾಂಕ ಅವರ ಅಜೇಯ ಶತಕದ (101 ರನ್, 102 ಎಸೆತ) ನೆರವಿನಿಂದ ಶ್ರೀಲಂಕಾ ತಂಡ ಭಾನುವಾರ ನಡೆದ ವಿಶ್ವಕಪ್ ಅರ್ಹತಾ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ಆತಿಥೇಯ ಜಿಂಬಾಬ್ವೆ ತಂಡವನ್ನು 9 ವಿಕೆಟ್‌ಗಳಿಂದ ಸೋಲಿಸಿತು. ಈ ಗೆಲುವಿನೊಂದಿಗೆ ಭಾರತದಲ್ಲಿ ನಡೆಯಲಿರುವ ವಿಶ್ವಕಪ್‌ಗೆ ಅರ್ಹತೆಯನ್ನೂ ಸಂಪಾದಿಸಿತು.

ಶ್ರೀಲಂಕಾ ಈ ಮೂಲಕ ಸೂಪರ್‌ಸಿಕ್ಸ್ ಹಂತದಲ್ಲಿ ಎಂಟು ಪಾಯಿಂಟ್ಸ್ ಕಲೆಹಾಕಿದ್ದು, ಮೊದಲ ಎರಡು ಸ್ಥಾನಗಳಲ್ಲಿ ಒಂದನ್ನು ಪಡೆಯುವುದು ಖಚಿತವಾಯಿತು. ಅರ್ಹತಾ ಟೂರ್ನಿಯಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು, ಅಕ್ಟೋಬರ್ 5 ರಿಂದ ನವೆಂಬರ್ 19ರವರೆಗೆ ನಡೆಯುವ ವಿಶ್ವಕಪ್‌ನಲ್ಲಿ ಆಡಲಿವೆ.

ಜಿಂಬಾಬ್ವೆ ಬಳಿ ಆರು ಪಾಯಿಂಟ್ಸ್ ಇದ್ದು ಅದರ ಅವಕಾಶವೂ ಜೀವಂತವಾಗಿದೆ. ಆದರೆ ಆತಿಥೇಯ ತಂಡ ಮಂಗಳವಾರ ನಡೆಯುವ ತನ್ನ ಅಂತಿಮ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡದ ಮೇಲೆ ಗೆಲ್ಲಲೇಬೇಕಿದೆ.

ಪಥುಮ್ ನಿಸ್ಸಾಂಕ

ಟಾಸ್ ಗೆದ್ದು ಕ್ಷೇತ್ರರಕ್ಷಣೆ ಆಯ್ದುಕೊಂಡ ಶ್ರೀಲಂಕಾ, ಜಿಂಬಾಬ್ವೆ ತಂಡವನ್ನು 32.2 ಓವರುಗಳಲ್ಲಿ 165 ರನ್‌ಗಳಿಗೆ ಆಲೌಟ್‌ಮಾಡಿತು. ಆಫ್ ಸ್ಪಿನ್ನರ್ ಮಹೀಶ್ ತೀಕ್ಷಣ ಜೀವನಶ್ರೇಷ್ಠ ಬೌಲಿಂಗ್ ಪ್ರದರ್ಶಿಸಿ 25 ರನ್ನಿಗೆ 4 ವಿಕೆಟ್ ಪಡೆದರೆ, ಎಡಗೈ ವೇಗದ ಬೌಲರ್ ದಿಲ್ಷನ್ ಮಧುಶಂಕ 15 ರನ್ನಿಗೆ 3 ವಿಕೆಟ್ ಗಳಿಸಿದರು.

ಮೊತ್ತವನ್ನು ಬೆನ್ನತ್ತಿದ ಶ್ರೀಲಂಕಾ ಆರಾಮವಾಗಿ ಆಡಿ ಇನ್ನೂ 101 ಎಸೆತಗಳಿರುವಂತೆ ಗುರಿ ತಲುಪಿತು. ಏಕದಿನ ಪಂದ್ಯಗಳಲ್ಲಿ ಎರಡನೇ ಶತಕ ದಾಖಲಿಸಿದ ನಿಸ್ಸಾಂಕ 14 ಬೌಂಡರಿಗಳನ್ನು ಹೊಡೆದರು. ದಿಮುತ್ ಕರುಣಾರತ್ನೆ (30) ಜೊತೆ ಮೊದಲ ವಿಕೆಟ್‌ಗೆ 103 ರನ್ ಸೇರಿಸಿದರು.

ಶ್ರೀಲಂಕಾ ಪ್ರತಿ ವಿಶ್ವಕಪ್‌ನಲ್ಲಿ ಆಡುತ್ತ ಬಂದಿದೆ. 1996ರ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಜಯಗಳಿಸಿ ಚಾಂಪಿಯನ್ ಆಗಿತ್ತು.

**ಸ್ಕೋರುಗಳು:** ಜಿಂಬಾಬ್ವೆ: 32.2 ಓವರುಗಳಲ್ಲಿ 165 (ಸೀನ್ ವಿಲಿಯಮ್ಸ್ 56, ಸಿಕಂದರ್ ರಝಾ 31; ದಿಲ್ಶನ್ ಮಧುಶಂಕ 15ಕ್ಕೆ3, ಮಹೀಷ ತೀಕ್ಷಣ 25ಕ್ಕೆ4); ಶ್ರೀಲಂಕಾ: 33.1 ಓವರುಗಳಲ್ಲಿ 1 ವಿಕೆಟ್‌ಗೆ 169 (ಪಥುಮ್ ನಿಸ್ಸಾಂಕ ಔಟಾಗದೇ 101, ದಿಮುತ್ ಕರುಣಾರತ್ನೆ 30, ಕುಸಲ್ ಮೆಂಡಿಸ್ ಔಟಾಗದೇ 25)

ಪ್ರಿಮ್‌ರೋಸ್ ಹಾಕಿ ಅಕಾಡೆಮಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಶ್ರೀರಾಮ್ ಸ್ಮಾರಕ ಹಾಕಿ ಪ್ರದರ್ಶನ ಪಂದ್ಯದಲ್ಲಿ ಪ್ರಿಮ್‌ರೋಸ್ ತಂಡದ ಆಟಗಾರನ ಗೋಲು ಗಳಿಸುವ ಪ್ರಯತ್ನವನ್ನು ಲೆಜೆಂಡ್ಸ್ ಆಫ್ ಕರ್ನಾಟಕ ತಂಡದ ಅಜಯ್, ಅನಿಲ್ ಆಲ್ಡ್ರಿನ್ ಮತ್ತು ಪೂಣಚ್ಚ ಅವರು ತಡೆಯಲು ಪ್ರಯತ್ನಿಸಿದರು. ಪಂದ್ಯವನ್ನು ಲೆಜೆಂಡ್ಸ್ 6–3 ರಿಂದ ಗೆದ್ದುಕೊಂಡಿತು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

### ಯುವಕನ ಹತ್ಯೆ: ಫ್ರಾನ್ಸ್‌ನಾದ್ಯಂತ ಐದನೇ ದಿನವೂ ಮುಂದುವರಿದ ಗಲಭೆ

# ಉದ್ರಿಕ್ತರಿಂದ ಮೇಯರ್ ಮನೆಗೆ ಬೆಂಕಿ

ಪ್ಯಾರಿಸ್ (ರಾಯಿಟರ್ಸ್): 17 ವರ್ಷದ ಯುವಕನನ್ನು ಪೊಲೀಸ್ ಅಧಿಕಾರಿಗಳು ಗುಂಡಿಟ್ಟು ಕೊಂದ ನಂತರ ಫ್ರಾನ್ಸ್‌ನಾದ್ಯಂತ ಭುಗಿಲೆದ್ದಿದ್ದ ಹಿಂಸಾಚಾರ ಐದನೇ ದಿನವೂ ಮುಂದುವರಿದಿದೆ.

ಉದ್ರಿಕ್ತ ಪ್ರತಿಭಟನಕಾರರು ಪ್ಯಾರಿಸ್‌ನ ದಕ್ಷಿಣ ಉಪನಗರದ ಮೇಯರ್ ವಿನ್‌ಸೆಂಟ್ ಜೀನ್‌ಬ್ರುನ್ ಅವರ ನಿವಾಸಕ್ಕೆ ಕಾರು ನುಗ್ಗಿಸಿ ಬೆಂಕಿ ಇಟ್ಟಿದ್ದಾರೆ. ಈ ವೇಳೆ ಮೇಯರ್ ಪತ್ನಿ ಮತ್ತು ಇಬ್ಬರು ಮಕ್ಕಳು ಮನೆಯೊಳಗೆ ಮಲಗಿದ್ದರು. ಬೆಂಕಿ ಕಾಣಿಸುತ್ತಿದ್ದಂತೆಯೇ ಅವರು ಮನೆ ಹಿಂಬಾಗಿಲ ಮೂಲಕ ಹೊರಬಂದು ಪ್ರಾಣ ಉಳಿಸಿಕೊಂಡಿದ್ದರೂ ಅಲ್ಪಸ್ವಲ್ಪ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ವೇಳೆ ಮೇಯರ್ ಜೀನ್‌ಬ್ರುನ್ ಅವರು ಟೌನ್‌ಹಾಲ್‌ನಲ್ಲಿ ಇದ್ದರು. ಯುವಕನ ಹತ್ಯೆಯಾದಾಗಿನಿಂದ ಟೌನ್ ಹಾಲ್ ಗುರಿಯಾಗಿಸಿಕೊಂಡು ದಾಳಿ ನಡೆಸಲು ಉದ್ರಿಕ್ತ ಗುಂಪು ಯತ್ನಿಸುತ್ತಿದ್ದು, ಬ್ಯಾರಿಕೇಡ್ ಮತ್ತು ಮುಳ್ಳುತಂತಿಗಳನ್ನು ಹಾಕಿ ಅವರನ್ನು ತಡೆಯಲಾಗಿದೆ.

ಪ್ರತಿಭಟನಾಕಾರರು ಉಪನಗರದ ಮೇಯರ್ ಮನೆಗೆ ಬೆಂಕಿ ಹಚ್ಚಿದ್ದು, ಭಾನುವಾರ ಪೊಲೀಸ್ ಅಧಿಕಾರಿಗಳು ಸ್ಥಳ ಪರಿಶೀಲಿಸಿದರು–ಎಎಫ್‌ಪಿ ಚಿತ್ರ

ಕೊಲೆ ಯತ್ನ ಆರೋಪದ ಮೇಲೆ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಯಾರನ್ನೂ ಬಂಧಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಮುಂದುವರಿದ ಹಿಂಸಾಚಾರ:** ದೇಶದಾದ್ಯಂತ ಗಲಭೆಕೋರರು ಮತ್ತು ಪೊಲೀಸರ ನಡುವಿನ ಸಂಘರ್ಷ ಮುಂದುವರಿದಿದೆ. ಹಿಂದಿನ ದಿನಕ್ಕೆ ಹೋಲಿಸಿದರೆ ಭಾನುವಾರ ಹಿಂಸಾಚಾರ ಅಲ್ಪ ಪ್ರಮಾಣದಲ್ಲಿ ತಗ್ಗಿತ್ತು.

ಶಾಂತಿ ಪುನಃಸ್ಥಾಪನೆಗೆ ಭಾರಿ ಸಂಖ್ಯೆಯಲ್ಲಿ ಪೊಲೀಸ್ ನಿಯೋಜಿಸಲಾಗಿದ್ದು, ಒಂದೇ ದಿನ 719 ಮಂದಿಯನ್ನು ಬಂಧಿಸಲಾಗಿದೆ. ಹಾಗಿದ್ದೂ ಪ್ರತಿಭಟನಕಾರರು ಹಲವು ಶಾಲೆ, ಪೊಲೀಸ್ ಠಾಣೆ, ಟೌನ್‌ಹಾಲ್ ಮತ್ತು ಅಂಗಡಿಗಳಿಗೆ ಬೆಂಕಿ ಇಟ್ಟು ಧ್ವಂಸ ಮಾಡಿದರು.

ಶನಿವಾರ ರಾತ್ರಿಯಾಗುತ್ತಿದ್ದಂತೆಯೇ ಸಣ್ಣ ಗುಂಪೊಂದು ರಾಜಧಾನಿಯಲ್ಲಿ ಪ್ರತಿಭಟನೆ ಆರಂಭಿಸಿತ್ತು. ನೂರಾರು ಪೊಲೀಸರು ಲಾಠಿಚಾರ್ಜ್ ಮಾಡಿ ಗುಂಪನ್ನು ಚದುರಿಸಿದರು. ಉತ್ತರ ಪ್ಯಾರಿಸ್‌ನಲ್ಲೂ ಪಟಾಕಿ ಹಚ್ಚಿ ಮತ್ತು ಬ್ಯಾರಿಕೇಡ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ಹೊರಹಾಕಿದರು. ಪೊಲೀಸರೂ ಅಶ್ರುವಾಯು ಬಳಸಿ ಪ್ರತಿಭಟನಕಾರರನ್ನು ಹಿಮ್ಮೆಟ್ಟಿಸಿದರು.

### ತಯಾರಿಕಾ ನೆಲೆ ಭಾರತಕ್ಕೆ ಸ್ಥಳಾಂತರ– ತೈವಾನ್ ಚಿಂತನೆ

ತೈಪೆ(ಪಿಟಿಐ): ತೈವಾನ್‌ನ ಪ್ರಮುಖ ತಂತ್ರಜ್ಞಾನ ಸಂಸ್ಥೆಗಳು ತಮ್ಮ ತಯಾರಿಕಾ ನೆಲೆಯನ್ನು ಭಾರತಕ್ಕೆ ಸ್ಥಳಾಂತರಿಸಲು ಚಿಂತನೆ ನಡೆಸಿವೆ. ಚೀನಾ ಮಾರುಕಟ್ಟೆ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಂಸ್ಥೆಗಳು ಈ ಹೆಜ್ಜೆ ಇಟ್ಟಿವೆ ಎಂದು ಅಲ್ಲಿಯ ಸರ್ಕಾರದ ಪ್ರಮುಖ ನೀತಿ ನಿರೂಪಕರು ತಿಳಿಸಿದ್ದಾರೆ. ಚೀನಾ– ತೈವಾನ್ ಬಾಂಧವ್ಯ ಹದಗೆಡುತ್ತಿರುವ ಬೆನ್ನಲ್ಲೇ ತೈವಾನ್ ಹೀಗೆ ಹೇಳಿದೆ.

ಅಂತರರಾಷ್ಟ್ರೀಯ ಮಟ್ಟದ ಪತ್ರಕರ್ತರ ಎದುರು ತೈವಾನ್‌ನ ಸಚಿವೆ ಕಾವೊ ಶೀನ್ ಕ್ವೇಯ್ ಈ ಕುರಿತು ಮಾತನಾಡಿದ್ದಾರೆ. ಜಾಗತಿಕ ಪೂರೈಕೆ ಸರಪಳಿಯನ್ನು ಬಲಪಡಿಸಿಕೊಳ್ಳುವ ನಿಟ್ಟಿನಲ್ಲಿ ತೈವಾನ್‌ನ ತಂತ್ರಜ್ಞಾನ ಸಂಸ್ಥೆಗಳು ಭಾರತದತ್ತ ದೃಷ್ಟಿ ಹರಿಸಿವೆ. ಸೆಮಿಕಂಡಕ್ಟರ್, ವಿದ್ಯುನ್ಮಾನ ಉಪಕರಣ ತಯಾರಿಕಾ ಕ್ಷೇತ್ರದಲ್ಲಿ ಸಹಭಾಗಿತ್ವ ಸಾಧಿಸಲು ತೈವಾನ್ ಮತ್ತು ಭಾರತಕ್ಕೆ ವಿಪುಲ ಅವಕಾಶಗಳಿವೆ ಎಂದಿದ್ದಾರೆ.

## 'ನನಗೂ ಜನಾಂಗೀಯ ದ್ವೇಷದ ಅನುಭವವಾಗಿತ್ತು'

ಲಂಡನ್ (ಪಿಟಿಐ): ತಾವೂ ಜನಾಂಗೀಯ ದ್ವೇಷ ಅನುಭವಿಸಿದ್ದಾಗಿ ಭಾರತ ಮೂಲದ ಬ್ರಿಟನ್ ಪ್ರಧಾನಿ ರಿಷಿ ಸುನಕ್ ತಿಳಿಸಿದ್ದಾರೆ.

ರಿಷಿ ಸುನಕ್

ಲಂಡನ್‌ನ ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವರ್ಸಸ್ ಆಸ್ಟ್ರೇಲಿಯಾ ಆ್ಯಷಸ್ ಕ್ರಿಕೆಟ್ ಪಂದ್ಯಾವಳಿ ವೀಕ್ಷಿಸಲು ವಿಶೇಷ ಭೇಟಿ ನೀಡಿದ್ದರು. ಈ ವೇಳೆ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಮಗಾದ ಅನುಭವವನ್ನು ಹಂಚಿಕೊಂಡರು.

ಎಲ್ಲಾ ಹಂತದ ಕ್ರಿಕೆಟ್‌ನಲ್ಲಿ ಜನಾಂಗೀಯ ದ್ವೇಷ, ಪ್ರತ್ಯೇಕತಾವಾದ, ವರ್ಗಾಧಾರಿತ ಪಕ್ಷಪಾತ ಆಳವಾಗಿ ಬೇರೂರಿದೆ ಎಂಬ ವರದಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಕ್ರಿಕೆಟ್‌ನಲ್ಲಿ ನನಗೆ ಈ ಅನುಭವ ಆಗಿಲ್ಲ. ಆದರೆ ಜೀವನ ಆರಂಭಿಕ ದಿನಗಳಲ್ಲಿ ಜನಾಂಗೀಯ ದ್ವೇಷದ ಅನುಭವ ಆಗಿತ್ತು' ಎಂದು ಹೇಳಿದರು.

'ನನ್ನ ಕೆಲಸದಲ್ಲಿ ಪ್ರತಿ ದಿನ, ಪ್ರತಿ ಗಂಟೆ, ನಿಮಿಷ–ನಿಮಿಷವೂ ಟೀಕೆಗಳನ್ನು ಕೇಳುತ್ತೇನೆ. ಆದರೆ ಜನಾಂಗೀಯ ದ್ವೇಷವು ಗಾಯವೇ ಇಲ್ಲದಂತೆ ಒಳಗೊಳಗೆ ಚುಚ್ಚುತ್ತದೆ' ಎಂದು ಸುನಕ್ ಬೇಸರ ವ್ಯಕ್ತಪಡಿಸಿದರು

'ನಾನು ಬಾಲ್ಯದಲ್ಲಿದ್ದಾಗ ಜನಾಂಗೀಯ ದ್ವೇಷವನ್ನು ಅನುಭವಿಸಿದ್ದೆ. ಆದರೆ ನನ್ನ ಮಕ್ಕಳಿಗೂ ಈ ಅನುಭವವಾಗುತ್ತಿದೆ ಎಂದು ಅನ್ನಿಸುವುದಿಲ್ಲ' ಎಂದು ಅವರು ತಿಳಿಸಿದರು.

## ಕೀವ್ ಮೇಲೆ ಮತ್ತೆ ಡ್ರೋನ್ ದಾಳಿ

ಕೀವ್ (ಎಪಿ): ಉಕ್ರೇನ್ 'ಭದ್ರ ಕೋಟೆ' ಎನಿಸಿರುವ ರಾಜಧಾನಿ ಕೀವ್ ನಗರದ ಮೇಲೆ ಭಾನುವಾರ ನಸುಕಿನಲ್ಲಿ ರಷ್ಯಾ ಡ್ರೋನ್ ದಾಳಿ ನಡೆಸಿದೆ. ನಗರ ಗುರಿಯಾಗಿಸಿ, 12 ದಿನಗಳ ನಂತರ ನಡೆಸಿರುವ ಮೊದಲ ದಾಳಿ ಇದಾಗಿದೆ.

ದೇಶದ ವಾಯುಗಡಿ ಪ್ರವೇಶಿಸಿದ ಇರಾನಿ ನಿರ್ಮಿತ 8 ಶಾಹಿದ್ ಡ್ರೋನ್‌ಗಳು ಮತ್ತು ಮೂರು ಕಲಿಬ್ ಕ್ರೂಸ್ ಕ್ಷಿಪಣಿಗಳನ್ನು ಪತ್ತೆಹಚ್ಚಿ ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ವಾಯು ಪಡೆ ಹೇಳಿದೆ.

ಕೀವ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಗುರಿ ನೆಟ್ಟಿದ್ದ ಡ್ರೋನ್ ಪತ್ತೆ ಹಚ್ಚಿ ಧ್ವಂಸಗೊಳಿಸಲಾಗಿದೆ. ಡ್ರೋನ್ ಅವಶೇಷ ಬಿದ್ದು ವ್ಯಕ್ತಿಯೊಬ್ಬರು ಗಾಯಗೊಂಡಿದ್ದಾರೆ ಎಂದು ಕೀವ್ ಪ್ರಾದೇಶಿಕ ಗವರ್ನರ್ ರಸ್ಲಾನ್ ಕ್ರಾವ್‌ಶೆಂಕೊ ತಿಳಿಸಿದ್ದಾರೆ.

ಕೆರ್ಸಾನ್ ಪ್ರಾಂತ್ಯದಲ್ಲಿ ಭಾನುವಾರ ಬೆಳಿಗ್ಗೆಯೂ ಶೆಲ್ ದಾಳಿ ಮುಂದುವರಿದಿದ್ದು, ನಾಲ್ವರು ಗಾಯಗೊಂಡಿದ್ದಾರೆ.